"ಬಸವಣ್ಣ ಮತ್ತು ಸರ್ವಜ್ಞರ ವಚನಗಳಲ್ಲಿ ಸಾಮಾಜಿಕ ಕಳಕಳಿ-ತೌಲನಿಕ ಅಧ್ಯಯನ"

(ಕನ್ನಡ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ಪ್ರಬಂಧ)

<u>ಸಂಶೋಧಕ</u>

ಟಿ.ವಿ.ಚೇತನ್ ಜುಂಜೀರ್

ಕನ್ನಡ ಎಂ.ಫಿಲ್. ವಿದ್ಯಾರ್ಥಿ

ಎಂ. ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ (ರಿ), ಮಂಡ್ಯ.

<u>ಮಾರ್ಗದರ್ಶಕರು</u>

ಡಾ. ಎ.ಆರ್. ಮದನಕುಮಾರ್

ಹಿರಿಯಶ್ರೇಣಿ ಕನ್ನಡ ಉಪನ್ಯಾಸಕರು

ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು

ಹುಣಸೂರು.

ಎಂ. ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ (ರಿ), ಮಂಡ್ಯ.

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2007-08

302.

“ಬಸವಣ್ಣ ಮತ್ತು ಸರ್ವಜ್ಞರ ವಚನಗಳಲ್ಲಿ ಸಾಮಾಜಿಕ ಕಳಕಳಿ–ತೌಲನಿಕ ಅಧ್ಯಯನ”

(ಕನ್ನಡ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನಾ ನಿಬಂಧ)

ಸಂಶೋಧಕ

ಜಿ.ವಿ.ಚೇತನ್ ಜುಂಜೀರ್

ಕನ್ನಡ ಎಂ.ಫಿಲ್. ವಿದ್ಯಾರ್ಥಿ

ಎಂ. ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ (ರಿ), ಮಂಡ್ಯ.

ಮಾರ್ಗದರ್ಶಕರು

ಡಾ. ಎ.ಆರ್. ಮದನಕುಮಾರ್

ಹಿರಿಯಶ್ರೇಣಿ ಕನ್ನಡ ಉಪನ್ಯಾಸಕರು

ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು

ಹುಣಸೂರು.

ಎಂ. ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ (ರಿ), ಮಂಡ್ಯ.

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2007–08

ಪರಿವಿಡಿ

ಮಾರ್ಗದರ್ಶಕರ ದೃಢೀಕರಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2007-08ನೇ ಸಾಲಿಗೆ ಕನ್ನಡ ಎಂ.ಫಿಲ್. ಅಭ್ಯರ್ಥಿಯಾಗಿ ಇವರು ಪ್ರವೇಶ ಪಡೆದಿರುತ್ತಾರೆ. ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು "ಬಸವಣ್ಣ ಮತ್ತು ಸರ್ವಜ್ಞರ ವಚನಗಳಲ್ಲಿ ಸಾಮಾಜಿಕ ಕಳಕಳಿ - ತೌಲನಿಕ ಅಧ್ಯಯನ" ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತಾರೆ.

ಈ ನಿಬಂಧವನ್ನಾಗಲಿ, ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತಿದ್ದೇನೆ. ಕನ್ನಡ ವಿಶ್ವವಿದ್ಯಾನಿಲಯವು ನೀಡುವ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸಿರುತ್ತಾರೆ.

ಡಾ. ಎ.ಆರ್. ಮದನಕುಮಾರ್
ಹಿರಿಯ ಶ್ರೇಣಿ ಕನ್ನಡ ಉಪನ್ಯಾಸಕರು
ಡಿ. ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹುಣಸೂರು

ದಿನಾಂಕ : 10-9-2008
ಸ್ಥಳ : ಹುಣಸೂರು.

ಅಭ್ಯರ್ಥಿಯ ದೃಢೀಕರಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2007-08ನೇ ಸಾಲಿಗೆ ಕನ್ನಡ ಎಂ.ಫಿಲ್. ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು "ಬಸವಣ್ಣ ಮತ್ತು ಸರ್ವಜ್ಞರ ವಚನಗಳಲ್ಲಿ ಸಾಮಾಜಿಕ ಕಳಕಳಿ - ತೌಲನಿಕ ಅಧ್ಯಯನ" ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ. ಎ.ಆರ್. ಮದನಕುಮಾರ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತಿದ್ದೇನೆ. ಕನ್ನಡ ವಿಶ್ವವಿದ್ಯಾನಿಲಯವು ನೀಡುವ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಜಿ.ವಿ. ಚೇತನ್ ಜುಂಜೇರ್

ಎಂ.ಫಿಲ್. ಅಭ್ಯರ್ಥಿ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ(ರಿ), ಮಂಡ್ಯ.

ದಿನಾಂಕ : ೧೦/೦೮/೨೦೦೮

ಸ್ಥಳ : ಮಂಡ್ಯ.

ಅಧ್ಯಾಯ - ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸಾಮಾಜಿಕ ಕಳಕಳಿ, ಸಾಮಾಜಿಕ ನಿಲುವು, ಸಾಮಾಜಿಕ ಪ್ರಜ್ಞೆ ಎಂಬುದನ್ನು ಸಾಮಾನ್ಯವಾಗಿ ಸಮಾಜದ ವರ್ತನೆಗಳನ್ನು ಕುರಿತ ಪ್ರತಿಕ್ರಿಯೆಗಳು ಎನ್ನಬಹುದು. ಇಂತಹ ಪ್ರತಿಕ್ರಿಯೆಗಳನ್ನು ಸಾಹಿತ್ಯ ಕೃತಿಗಳಲ್ಲಿ ಹುಡುಕುವುದು ನನ್ನ ಪ್ರಯತ್ನ. ಅದರ ಫಲವೇ ಈ ನಿಬಂಧ. ಪ್ರತಿಯೊಬ್ಬ ಮನುಷ್ಯನೂ ಸಮಾಜದ ಒಂದು ಘಟಕವೇ ಆಗಿದ್ದಾನೆ. ಅಂತಹ ಮನುಷ್ಯನ ಏಳು-ಬೀಳುಗಳಲ್ಲಿ ಸಮಾಜದ ಪಾಲು ಇರುತ್ತದೆ. ಅಂತೆಯೇ ಸಮಾಜದ್ದರಲ್ಲಿ ಮನುಷ್ಯರದು ಕೂಡ. ಭಿನ್ನತೆಯಲ್ಲೂ ಅಭಿನ್ನತೆಯನ್ನು, ಅನೇಕತೆಯಲ್ಲೂ ಏಕತೆಯನ್ನು ಹೊಂದಿ, ರೀತಿ-ನೀತಿ ನಡಾವಳಿಯಲ್ಲಿ ಸಾಮಾನ್ಯವಾಗಿ ಸರಿಸಮಾನ ಸ್ಪಂದನಗಳನ್ನು ಪಡೆದಿರುವ, ನೆಲದಲ್ಲಿ ಬೇರನ್ನು ಬಿಟ್ಟಿರುವ ಜನಗಳ ಗುಂಪಿಗೆ ಸಮಾಜ ಎನ್ನಬಹುದು. ವ್ಯಕ್ತಿ ಮತ್ತು ಸಮಾಜ ಒಂದಕ್ಕೊಂದು ಪೂರಕ, ಪೋಷಕ; ವ್ಯಕ್ತಿಗಳನ್ನುಳಿದು ಸಮಾಜವಿರಲಾರದು; ಸಮಾಜವನ್ನುಳಿದು ವ್ಯಕ್ತಿಗಳಿರಲಾರರು. ಇದ್ದರೂ ವ್ಯಕ್ತಿತ್ವವನ್ನು ಪಡೆಯಲಾರರು.

ಈ ರೀತಿಯ ಅವಿನಾಭಾವ ಸಂಬಂಧವಿರುವುದರಿಂದಲೇ ತೀವ್ರ ಸಂವೇದನಾಶೀಲ ವ್ಯಕ್ತಿಯ ಹೃದಯ ಸಮಾಜದ ಏರು-ಪೇರು, ನೋವು-ನಲಿವು, ನ್ಯಾಯ-ಅನ್ಯಾಯಗಳನ್ನು ಕಂಡು ಪ್ರತಿನಿಧಿಸುತ್ತದೆ, ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತದೆ. ಕೊಂಕನ್ನು ನೇರಗೊಳಿಸಲು, ಸುಕ್ಕನ್ನು ನಯಗೊಳಿಸಲು, ಸಾರನೇರವಾದ್ದನ್ನು ಎತ್ತಿ ಹಿಡಿಯಲು ಯತ್ನಿಸುತ್ತದೆ, ತುಡಿಯುತ್ತದೆ. ಕವಿಯಲ್ಲದವನು ಇದನ್ನು ತನ್ನ ಮಾತುಗಳ ಮೂಲಕ ಕೃತಿಯಲ್ಲಿ ವ್ಯಕ್ತಪಡಿಸುತ್ತಾ, ಸಮಾಜದ ನಡುವೆ ಬದುಕಿದ; ಮೌಲ್ಯ-ಅಪಮೌಲ್ಯಗಳನ್ನು ಗಮನಿಸಿದ. ಯಾವ ರೀತಿ ಇರಬೇಕೆಂದು ಕನಸು ಕಂಡು ನನಸು ಮಾಡಲು ಪ್ರಯತ್ನಿಸಿದ ಎಂಬುದರ ಮೇಲೆ, ಆ ಕಾವ್ಯ ತನ್ನ ಕಲಾತ್ಮಕತೆಯೊಂದಿಗೆ ಪ್ರೋಜ್ವಲತೆಯನ್ನು ಪ್ರಾಶಸ್ತ್ಯವನ್ನು ಪಡೆಯುತ್ತದೆ. ಕಾಲದ ಜನಜೀವನದ ನೆಲೆ-ಬೆಲೆಗಳನ್ನು, ಆಶೋತ್ತರಗಳನ್ನು ಪ್ರತಿನಿಧಿಸಿ ಕವಿ ತನ್ನ ಕೃತಿಗೆ ಸಮಕಾಲೀನತೆಯನ್ನು, ಸಾರ್ವಕಾಲೀಕತೆಯನ್ನು ತಂದು ಕೊಡುತ್ತಾನೆ. ಸಮಕಾಲಿನ ಪ್ರಜ್ಞೆ, ಸಾಮಾಜಿಕ ಕಳಕಳಿ ಸಮುದ್ರವಿದ್ದ ಹಾಗೆ. ಎಲ್ಲ ಕಡೆಯಿಂದ ಬಂದ ಎಲ್ಲ ನದಿಗಳ ನೀರನ್ನು ತನ್ನ ಒಡಲಲ್ಲಿ ಅಡಗಿಸಿಕೊಂಡ ಹಾಗೆ ಈ ಸಮಕಾಲೀನ ಪ್ರಜ್ಞೆ ಮಿಕ್ಕೆಲ್ಲ ಪ್ರಜ್ಞೆ-ಕಳಕಳಿಗಳು. ಪಾರಂಪರಿಕ, ಆಗಮಿಕ, ಸಾಮಾಜಿಕ, ಧಾರ್ಮಿಕ, ನೈತಿಕ, ಆರ್ಥಿಕ, ರಾಜಕೀಯಗಳನ್ನು ಒಳಗೊಳ್ಳುತ್ತದೆ. ಸಾಮಾಜಿಕ ಕಳಕಳಿ ಒಂದು ದೃಷ್ಟಿಯಿಂದ ಸಮಕಾಲೀನ ಪ್ರಜ್ಞೆಯ ಒಂದು ಅಂಗ; ಮತ್ತೊಂದು ದೃಷ್ಟಿಯಲ್ಲಿ ನೋಡಿದರೆ ಸಾಮಾಜಿಕ ಕಳಕಳಿಯಲ್ಲಿಯೇ ಹಿಂದೆ ಹೇಳಿದ ಎಲ್ಲ ಪ್ರಜ್ಞೆಗಳೂ ಅಡಗಿಕೊಂಡಿವೆ ಎನ್ನಬಹುದುಯ ಸಮಾಜಕ್ಕಾಗಿಯೇ ನೀತಿ, ಧರ್ಮ, ಅರ್ಥ, ಆಡಳಿತ ಅಸ್ತಿತ್ವ ಪಡೆದವು. ಆದ್ದರಿಂದ ಒಂದರ್ಥದಲ್ಲಿ ಸಾಮಾಜಿಕ ಕಳಕಳಿ ಇವೆಲ್ಲವುಗಳನ್ನೂ ಅಷ್ಟೋ-ಇಷ್ಟೋ ಪ್ರಮಾಣದಲ್ಲಿ ಒಳಗೊಂಡಿರುತ್ತದೆ. ಈ ಕಾರಣದಿಂದಾಗಿ, ಬಸವಣ್ಣನವರ ಹಾಗೂ ಸರ್ವಜ್ಞರ

ವಚನಗಳನ್ನು ಪರಿಶೀಲಿಸುವಾಗ ನೈತಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಕಳಕಳಿಗಳೂ ಅನಿವಾರ್ಯವಾಗಿ ನುಸುಳುತ್ತವೆ.

ವಚನ ಸಾಹಿತ್ಯ ಮೌಲ್ಯಗಳ ಒಂದು ಸಂಕೀರ್ಣ, ಅದು ಹಲವಾರು ಶ್ರೇಯಸ್ಕರ ಮೌಲ್ಯಗಳನ್ನು ಗರ್ಭೀಕರಿಸಿಕೊಂಡಿದೆ. ಮಾತ್ರವಲ್ಲ, ತನಗೆ ತಾನೆ ಒಂದು ಮಹತ್ವದ ಮೌಲ್ಯವಾಗಿದೆ. ಈ ಮೌಲ್ಯ ಸಮುಚ್ಚಯದ ಅನುಸಂಧಾನ ಇಂದಿಗೂ ಅತ್ಯಂತ ಪ್ರಸ್ತುತ ಮತ್ತು ಪ್ರಯೋಜಕ.

"ಒಂದು ದೃಷ್ಟಿಯಿಂದ ವಚನಕಾರರ ಕ್ರಾಂತಿಗೆ ಸದೃಶವಾದದ್ದು ಪ್ರಾಯಶಃ ಜಗತ್ತಿನ ಇತಿಹಾಸದಲ್ಲಿ ಇನ್ನೊಂದು ಕಂಡುಬರುವುದಿಲ್ಲ. ಎಂದರೆ ಉತ್ಪ್ರೇಕ್ಷೆಯಾಗಲಾರದು. ವಚನಕಾರರು ಸತತ ಅಧ್ಯಾತ್ಮಜೀವಿಗಳು. ಅವರ ಆಂದೋಲನ ಪ್ರಧಾನವಾಗಿ ಧಾರ್ಮಿಕವಾದದ್ದು. ಆದರೆ ಅದು ಅಪ್ರತ್ಯಕ್ಷವೆಂಬಂತೆ ಸಾಮಾಜಿಕ, ಆರ್ಥಿಕ ಆಯಾಮಗಳನ್ನೂ ಮೈಗೂಡಿಸಿಕೊಂಡಿದೆಯೆಂಬುದು ಅದರ ಅನನ್ಯತೆ. ಎಂತಲೇ ಅದು ಬಹುಮುಖ ಕ್ರಾಂತಿ, ಸಮಗ್ರಕ್ರಾಂತಿ".[೧] ಹಾಗೆ ನೋಡಿದರೆ ವಚನಗಳ - ವಚನಕಾರರ ಮೂಲ ಆಶಯ ಸಾಹಿತ್ಯ ಸಾಧನೆಯಲ್ಲ; ಜೀವನ ಶೋಧನೆ. ಜೀವನಕ್ಕಾಗಿ ಅವರು ಸಾಹಿತ್ಯವನ್ನು ಅವಲಂಬಿಸಿದರು. ವ್ಯಷ್ಟಿ ಜೀವನದಂತೆ ಸಮಷ್ಟಿ ಜೀವನದ ಒಳಿತನ್ನೂ ಅವರ ತೀವ್ರವಾದ ಅಭೀಪ್ಸೆ ಒಳಗೊಂಡಿತು. ಒಳಿತು ಎಂದರೆ ಏನು? ಎಂಬುದರಿಂದ ಹಿಡಿದು ಅದನ್ನು ಎಲ್ಲರಿಗೂ ಎಟುಕಿಸುವ ಸರ್ವ ಸಮಾನವಾದ ಮಾರ್ಗದವರೆಗೂ ಅವರ ವಿವೇಚನೆ ಹರಿಯಿತು.

ಸಂಪ್ರದಾಯಕ ಗೊಡ್ಡು ಬೆದರಿಕೆಗಳಿಗೆ ಸೊಪ್ಪು ಹಾಕದೆ, ನಮ್ಮ ಪರಂಪರೆಯ ಜೀವಸತ್ವವನ್ನು ಅರಗಿಸಿಕೊಂಡ ಸಾರ್ವಕಾಲಿಕ ಮೌಲ್ಯಗಳ ಮೇಲೆ, ಮಾನವ ಧರ್ಮದ ಸೌಧವನ್ನು ನಿರ್ಮಿಸಲು ಹವಣಿಸಿದರು. ಆ ಧರ್ಮದ ತಿರುಳನ್ನು ರಕ್ಷಿಸುವ ಹೊರಸಿಪ್ಪೆಯನ್ನಾಗಿ ಮಾತ್ರ ವೀರಶೈವ ಧರ್ಮವನ್ನು ಬಳಸಿಕೊಂಡರು. ಹೊರನೋಟಕ್ಕೆ ಅದು ವೀರಶೈವ ಧರ್ಮದ ಪರಿಭಾಷೆಯಲ್ಲಿ ಮೈವೆತ್ತಂತೆ ತೋರಿದರೂ, ಬಸವಾದಿ ಶರಣರ ನಿಲುವಿನಲ್ಲಿ ನಿಂತು ನೋಡಿದಾಗ ಸಂಪ್ರದಾಯದ ಮತೀಯ ಪರಿಮಿತಿಯನ್ನು ಅದು ಥಟ್ಟನೆ ಕಳಚಿಕೊಂಡು ಸಾರ್ವಕಾಲಿಕವಾದ ವಿಶ್ವಮಾನವ ಮತ್ತು ಸಾಮಾಜಿಕ ಕಳಕಳಿಯ ಪ್ರಜ್ಞೆಯ ವ್ಯಾಪ್ತಿಯನ್ನು ಪಡೆಯುತ್ತದೆ. ಏಕೆಂದರೆ ಅವರು ಆಲೋಚಿಸಿದುದು ಸಾಮಾಜಿಕ ನೆಲೆಯಲ್ಲಿ ನಿಂತು ವಿಶ್ವಮಾನವರಾಗಿ; ವಿಶ್ವಮಾನವರಿಗಾಗಿ. ಹಾಗೆಂದು ನಿಂತ ನೆಲವನ್ನು ಬಿಟ್ಟು ಆಕಾಶದಲ್ಲಿ ವಿಹರಿಸುವ ಆದರ್ಶವಾದಿಗಳಾಗಲಿಲ್ಲ. ಈ ಮಣ್ಣಿನ ಮಕ್ಕಳಾಗಿ, ಈ ಮಣ್ಣಿನಲ್ಲಿ ಬೆಳೆದು, ಈ ಮಣ್ಣನ್ನೇ ಹೊನ್ನಾಗಿಸಿದರು. ಹಳೆಯ ಕೊಳೆಯನ್ನು ನಿರ್ದಾಕ್ಷಿಣ್ಯವಾಗಿ ಕತ್ತರಿಸಿ ಹಾಕಿದರು; ಅದೇ ಗೊಬ್ಬರದಿಂದ ಬಯಸಿ ಬಂದವರೆಲ್ಲರಿಗೂ ಹೊಸ ಬೆಳೆಯ ಅಮೃತ ಫಲಗಳನ್ನಿತ್ತರು.

ಹನ್ನೆರಡನೆಯ ಶತಮಾನದ ಸಂದರ್ಭದಲ್ಲಿ ರಾಜರುಗಳ ನಡುವೆ ಘರ್ಷಣೆಗಳು ನಡೆಯುತ್ತಿದ್ದರಿಂದ ರಾಜಕೀಯವಾಗಿ ಜನ ಅಸ್ಥಿರ ಪರಿಸ್ಥಿತಿಯಲ್ಲಿದ್ದರು. ಜೈನ, ಬೌದ್ಧ, ವೈದಿಕ ಧರ್ಮಗಳ ನಡುವಿನ ಪೈಪೋಟಿ; ಮೇಲು ಕೀಳೆಂಬ ಸ್ವಮತದ ಪ್ರಚಾರದ ಸೆಣಸಾಟ - ಧಾರ್ಮಿಕವಾಗಿ

---

೧. ವಚನ ಸಾಹಿತ್ಯ - ಮೌಲ್ಯವಿವೇಚನೆ, ಸಿ.ಪಿ.ಕೆ, ಪುಟ - ೨

ಜನ ಇಂಥ ಅನಿಶ್ಚಿತ ಸುಳಿಯಲ್ಲಿ ಸಿಕ್ಕಿದ್ದರು. ಹೀಗೆ ರಾಜಕೀಯವಾಗಿ ಮತ್ತು ಧಾರ್ಮಿಕವಾಗಿ ಅಸ್ಥಿರತೆಯ ಅಂಚಿನಲ್ಲಿ ದಿಕ್ಕು ತೋಚದೇ ಕಂಗಾಲಾಗಿದ್ದ ಗೊತ್ತುಗುರಿಯನ್ನು ತೋರಿಸುವ ಸಮರ್ಥ ಮಾರ್ಗದರ್ಶಕರಾಗಿ ಮೂಡಿದರು 'ಬಸವೇಶ್ವರರು'. ವೀರಶೈವ ಧರ್ಮದ ಉದ್ಧಾರಕರೂ ಪ್ರಸಾರಕರೂ ಆದ ಅವರು ಹೊಸ ಸಮಾಜ ವ್ಯವಸ್ಥೆಯ ಕ್ರಾಂತಿಗೆ ನಾಂದಿಯನ್ನು ಹಾಡಿದರು. ಅಂದಿನ ಸಮಾಜದಲ್ಲಿ ಮನೆ ಮಾಡಿಕೊಂಡಿದ್ದ ಕಂದಾಚಾರ, ಡಾಂಭಿಕತೆ, ವಂಚನೆ ಮುಂತಾದವುಗಳನ್ನು ತೊಡೆದುಹಾಕಿ ಶುಚಿಗೊಳಿಸಬೇಕೆಂದು ಮನಸ್ಸು ಮಾಡಿದರು. ಹೀಗೆ ಜನ ಸಾಮಾನ್ಯರ ಬದುಕನ್ನು ಹಸನುಗೊಳಿಸ ಬೇಕಾದರೆ ಅವರಿಗೆ ಅರ್ಥವಾಗುವ ಸರಳ ಭಾಷೆಯನ್ನೇ ಬಳಸಬೇಕೆಂಬ ಅನಿವಾರ್ಯತೆಯನ್ನು ಅರ್ಥ ಮಾಡಿಕೊಂಡವರು. ಇದು ಬಸವಣ್ಣನವರ ಸಾಮಾಜಿಕ ಕಳಕಳಿಯ ಸಂಕೇತ. ಬಸವಣ್ಣನವರ ದೃಷ್ಟಿ ಇದ್ದದ್ದು 'ಪಂಡಿತರ ಮೇಲೆ ಅಲ್ಲ, ಪಾಮರರ ಮೇಲೆ'.

ಧರ್ಮ ಸಮಾಜದ ರಕ್ಷಾಕವಚ. ಅದು ಶಿಥಿಲಗೊಂಡಾಗ ಆಗಬೇಕಾದ ಕೆಲಸಕಾರ್ಯಗಳೇ ಈ ಯುಗದಲ್ಲೂ ನಡೆದುದನ್ನು ಕಾಣಬಹುದು. ಹಿಂದೆ ಗಮನಿಸಿದಂತೆ ಅನಿಶ್ಚಿತ ರಾಜಕೀಯ ಸ್ಥಿತಿಗತಿ, ಅಸ್ಥಿರ ಧಾರ್ಮಿಕ ಪರಿಸ್ಥಿತಿ ಜನತೆಯನ್ನು ತಲ್ಲಣಗೊಳಿಸಿದ್ದವು. ಒಂದು ಕಡೆ ರಾಜ್ಯದಾಹರ ಕಿತ್ತಾಟದಲ್ಲಿ ಜನರು ಪಡುತ್ತಿದ್ದ ಕಷ್ಟಕಾರ್ಪಣ್ಯ ಮತ್ತೊಂದೆಡೆ ದೈವಧರ್ಮಗಳ ಹೆಸರಿನಲ್ಲಿ ಸಮಾಜವನ್ನು ಶೋಷಣೆ ಮಾಡಿ ಸ್ವಾರ್ಥ ಸಾಧಿಸ ಹೊರಟ ಧಾರ್ಮಿಕ ನಾಯಕರ ತಂಡದಿಂದೊದಗಿದ್ದ ದಾರುಣಸ್ಥಿತಿ. ವಿಚಾರಪರರೂ ಸಜ್ಜನರೂ ಆದ ವ್ಯಕ್ತಿಗಳಿಗೆ ಈ ಸ್ಥಿತಿ ವೇದನೆಗೆ ಕಾರಣವಾಗಿ ಸಮಾನ ಅವಕಾಶ, ಸ್ವಾತಂತ್ರ್ಯಗಳ ತಳಹದಿಯ ಮೇಲೆ ನೂತನ ಆರೋಗ್ಯಕರ ಸಮಾಜವನ್ನು ಸೃಷ್ಟಿಸುವ ಮನಸ್ಸು ಮಾಡಲು ದಾರಿಯಾಯಿತು.

ಧರ್ಮ ಶಿಷ್ಟರ ಸ್ವತ್ತಾಗಿ, ಸಾಮಾನ್ಯ ಜನತೆಯ ಆತ್ಮೋನ್ನತಿ ಜಾತಿ, ಕುಲ ವರ್ಗಗಳ ತಾರತಮ್ಯದಿಂದಾಗಿ ದುರ್ಲಭವಾಗಿತ್ತು. ಜೈನಮತ ಉತ್ಕರ್ಷ ಸ್ಥಿತಿಯನ್ನು ಕಳೆದುಕೊಂಡು ಇದ್ದುದನ್ನು ಕಾಯ್ದು ಕೊಳ್ಳುವ ಸ್ಥಿತಿ ತಲುಪಿತ್ತು. ವೈದಿಕ ಮತಗಳು ಶುಷ್ಕ ಆಚಾರ ಸಂಪ್ರದಾಯಗಳ ಬೆನ್ನು ಹತ್ತಿದ್ದವು ಡಾಂಭಿಕತೆ, ಮೇಲು ಕೀಳು, ಹೆಣ್ಣು ಗಂಡು ಎಂಬ ಭೇದ ಭಾವಗಳನ್ನು ಕಿತ್ತು ಸಮಾಜಕ್ಕೆ ದಾರಿ ತೋರಬೇಕಾದ ನೇತಾರ ಅವಶ್ಯಕತೆಯಿತ್ತು. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಮಾನವಕುಲದ ಉದ್ಧಾರಕ್ಕಾಗಿ ಅವರ ಏಳಿಗೆಗಾಗಿ, ಮಾರ್ಗದರ್ಶನ ಮಾಡಿ ಅವರನ್ನು ವಿಶ್ವಮಾನವ ಪಥದಲ್ಲಿ ಮುನ್ನಡೆಸುವ ನೇತಾರರಾಗಿ ಬಸವೇಶ್ವರರು ಕಾಣಿಸಿಕೊಂಡರು.

ಸಾಧಕನ ಮನೋವಿಕಾಸದ ವಿವಿಧ ನೆಲೆಗಳನ್ನು ಆಧರಿಸಿರುವ ಷಟ್‌ಸ್ಥಲಗಳಲ್ಲಿ ಸಾಮಾಜಿಕ ಸುಧಾರಣೆಗಳನ್ನು ಸಾಧಿಸಲು ಮುಂದಾದರು. ಅವರಲ್ಲಿ ಬಸವಣ್ಣನವರು ಅಗ್ರಪಂಕ್ತಿಯ ನೇತಾರರಾದರೆ ಅವರ ಮಾರ್ಗದಲ್ಲಿ ನಡೆದು ಅವರ ಧ್ಯೇಯೋದ್ದೇಶಗಳಿಗನುಗುಣವಾಗಿ ದುಡಿದ ಹಲವು ವಚನಕಾರರ ಶ್ರಮ ಸಾರ್ಥಕವೆನಿಸಿದೆ.

ವಚನ ಸಾಹಿತ್ಯ ಪ್ರವಾಹದ ನೆರೆ ಉಕ್ಕಿ ಹರಿದ ಮೇಲೆ ಬಂದವನು 'ಸರ್ವಜ್ಞ'.

ಸರ್ವಜ್ಞನಿಗಿಂತ ಹಿಂದಿನ ಕಾಲಮಾನವೂ ಅಷ್ಟೇ ಸಂದಿಗ್ಧವಾಗಿತ್ತು. ವಿಜಯನಗರ ಕಾಲದ ಜನಸಮ್ಮುಖವಾದ ಸಾಹಿತ್ಯದಲ್ಲಿ ಶರಣರು, ದಾಸರು ಹಾಗು ಇತರ ಕವಿಗಳು ನೀತಿ ಧರ್ಮದ ಬೋಧನೆಯನ್ನು ಹೆಚ್ಚಾಗಿ ಮಾಡಿದರು. ಆ ಸಾಮ್ರಾಜ್ಯವು ಪತನಹೊಂದಿದ ಮೇಲೆ ಮರ ಗಾಳಿಯ ಬಿರುಸಿಗೆ ಸಿಕ್ಕ ನೆಲದಲ್ಲಿ ಹಾಳುಬೀಳುಗಳು ಎಲ್ಲ ಕಡೆಗೆ ಕಾಣುವಂತೆ ಜನಜೀವನ ದಿಕ್ಕೆಟ್ಟಿತು. ಅಸ್ತವ್ಯಸ್ತವಾಯಿತು. ಹಿಂದಿನ ಅನುಭವ ಅಳಿಸಿದಂತಾಯಿತು. ವಿವೇಕ ಮಸುಳಿದಂತಾಯಿತು. ಇಂಥ ಕಾಲದಲ್ಲಿ ಸರ್ವಜ್ಞ ಹುಟ್ಟಿ ಸಮಾಜ ವೈದ್ಯನಾಗಿ ರೋಗ ಪರೀಕ್ಷೆ ಮಾಡಿದನು, ಬಿಚ್ಚು ಮಾತಿನ ಔಷಧಿಯನ್ನು ನೀಡಿದನು.

"ಒಂದು ದೃಷ್ಟಿಯಿಂದ ಸರ್ವಜ್ಞನೇ ವಚನಕಾರರ ನಿಜವಾದ ಉತ್ತರಾಧಿಕಾರಿ. ಸರ್ವಜ್ಞ ಏನಿಲ್ಲವೆಂದರೂ ವಚನಕಾರರಾದ ಮೇಲೆ ಮುನ್ನೂರು ವರ್ಷಗಳ ನಂತರ ಬದುಕಿದವನು".[೨] ಆದರೆ ವಚನಕಾರರ ಹಾದಿಯಲ್ಲೇ ಸಾಗಿ ಬಂದ ಹರಿಹರ, ರಾಘವಾಂಕರು ಒಂದು ದೃಷ್ಟಿಕೋನದಿಂದ ಅವರೂ ವಚನಕಾರರ ಉತ್ತರಾಧಿಕಾರಿಗಳೇ ವಚನ ಪ್ರಕಾರವನ್ನು ಮತ್ತೆ ಹದಿನೈದನೇ ಶತಮಾನದಲ್ಲಿ ಪುನರುಜ್ಜೀವನಗೊಳಿಸಲು ಪ್ರಯತ್ನಿಸಿದ ತೋಂಟದ ಸಿದ್ಧಲಿಂಗ ಯತಿ ಇತ್ಯಾದಿ ಮಹನೀಯರೂ ಒಂದರ್ಥದಲ್ಲಿ ವಚನಕಾರರ ಉತ್ತರಾಧಿಕಾರಿಗಳೇ ಆದರೆ, ಯಾವ ಸಾಮಾಜಿಕ ಪ್ರತಿಭಟನೆ, ಸಿಡಿತ, ಮಿಡಿತ, ಕೋಪ, ಕೆಳವರ್ಗದವರಿಗಾಗಿ ಕುದಿತ, ವ್ಯವಸ್ಥೆಯ ಬಗ್ಗೆ ಪ್ರತಿರೋಧ, ಪ್ರಭುತ್ವದ ಬಗ್ಗೆ ನಿರ್ಲಕ್ಷ್ಯಗಳಿಗೆ ವಚನಕಾರರು ಸಂಕೇತವಾಗಿ ಪರಿಣಮಿಸಿರುವರೋ ಆ ಒಟ್ಟು ಸಮಗ್ರ ದೃಷ್ಟಿಯಿಂದ ಹೇಳುವುದಾದರೆ ಸರ್ವಜ್ಞನು ವಚನಕಾರರ ನಿಜವಾದ ಉತ್ತರಾಧಿಕಾರಿ ಎನಿಸಿಕೊಳ್ಳುತ್ತಾನೆ. ವಚನಕಾರರ ಆ ಗುಣಗಳು ಅವರಿಗಿಂತ ಮುಂದಿನ ಅನೇಕ ವೀರಶೈವ ಲೇಖಕರಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಕಾಣಿಸಿಕೊಳ್ಳುವುದಾದರೂ, ಅವುಗಳ ಸಮಗ್ರ ಸಾಕ್ಷಾತ್ಕಾರವಾಗುವುದು ಅವರ ಬಳಿಕ ಸರ್ವಜ್ಞನಲ್ಲೇ ಎಂದು ಹೇಳುವುದರಲ್ಲಿ ಉತ್ಪ್ರೇಕ್ಷೆಯೇನೂ ಕಾಣದು.

ಸರ್ವಜ್ಞನಿಗೆ ವಚನಕಾರರ ವೈಚಾರಿಕ ಧೋರಣೆ ಬಹಳವಾಗಿ ಹಿಡಿಸಿದಂತೆ ತೋರುತ್ತದೆ. ಅವನು ತನ್ನ ವಚನಗಳಲ್ಲಿ ಬಸವಣ್ಣನವರನ್ನು (ಬಸವ ಗುರುವಿನ ಹೆಸರ ಬಲ್ಲವರಾರಿಲ್ಲ) ಗೌರವದಿಂದ ಸ್ಮರಿಸುವುದು ಕಂಡು ಬಂದಿದೆ. ಸರ್ವಜ್ಞ ಮಾನಸಿಕವಾಗಿ ವಚನಕಾರರ ಕಾಲದ ಕ್ರಾಂತಿಯ ಯುಗಕ್ಕೆ ಸೇರಿದವನು. ಆದರೆ ವಾಸ್ತವವಾಗಿ ಇದ್ದದ್ದು ವಚನಕಾರರ ವೈಚಾರಿಕ ಪ್ರಖರತೆಯು ತಣ್ಣಗಾಗಿ ಅದೊಂದು ಸಾಂಪ್ರದಾಯಿಕ ಮತವಾಗಿ ನೆಲೆ ನಿಂತಿದ್ದ ಕಾಲದಲ್ಲಿ, ಅವರ ಆದರ್ಶ ಪ್ರಪಂಚದಲ್ಲಿ ಇದ್ದವರು ವಚನಕಾರರು : ಅವರ ತುಂಬೆಲ್ಲ ಅವರ ಭಕ್ತಿ, ವಿಚಾರ, ಆಚಾರ ವ್ಯವಹಾರಗಳು, ನಡೆನುಡಿಗಳಿಗಿದ್ದ ಹೊಂದಾಣಿಕೆ, ಸಾಹಸ ಇತ್ಯಾದಿಗಳೇ. ಅವನು ದೈಹಿಕವಾಗಿ ಇದ್ದದ್ದು ಯಾವ ದೃಷ್ಟಿಯಿಂದಲೂ ತನಗೆ ಒಪ್ಪಿಗೆಯಾಗದ ಸಮಾಜದ ಮಧ್ಯೆ. "ಹೀಗೆ ನಿರ್ಜೀವ ಸಮಾಜವೊಂದಕ್ಕೆ ವಚನಕಾರರ ಆಲೋಚನೆಯ ಹೊಸ ರಕ್ತವನ್ನು ಹರಿಸುವ ಪ್ರಯತ್ನ ಅವನದಾಯಿತು.

---

೨. ಸರ್ವಜ್ಞ - ಒಂದು ಸಮೀಕ್ಷೆ, ಎಂ. ಚಿದಾನಂದಮೂರ್ತಿ, ಪುಟ - ೧೨

ಅವನ ರಚನೆಗಳು ವಚನಕಾರರ ವಚನಗಳ ಬಗ್ಗೆ ಅಷ್ಟೇ ಸ್ವತಂತ್ರ ವಿಚಾರವಾದಿಯೊಬ್ಬನ ಭಾಷ್ಯವೆಂದರೂ ತಡೆದೀತು".[೩]

"ಸರ್ವಜ್ಞನ ವಚನಗಳು ಬರಿಯ ನೀತಿಯ ಕಾವ್ಯವಲ್ಲ. ಅನುಭವ, ತತ್ವ, ಭಕ್ತಿ ಎಲ್ಲವೂ ಇರುವ ಜೀವನ ಸತ್ವದ ನಿಚ್ಚಳವಾದ ಕಾಣ್ಕೆ ಅತ್ಯಂತ ಸಹಜವಾದ ರಸಾನುಭವವಾಗಿ ಹೊಮ್ಮುತ್ತದೆ. ಸಮಗ್ರತೆಯಲ್ಲಿ ವಚನಕಾರರ ಮಾತಿನ ಘನತೆಯ ಹೋಲಿಕೆಯಿದ್ದರೂ ವಚನಕಾರರ ಗಾಂಭೀರ್ಯವನ್ನು ಕಾಣುವುದಿಲ್ಲ. ಸರ್ವಜ್ಞನ ವಚನಗಳು ಜನತೆಯ ಜ್ಞಾನ ಕೋಶಗಳು, ಸ್ಫೂರ್ತಿ ವಾಕ್ಯಗಳು, ಗಾದೆ ಮಾತುಗಳು. ವಚನ ಸಾಹಿತ್ಯ ಸಂದರ್ಭದಲ್ಲಿ ಬೆಳಗಿದ ದೇಸಿತತ್ವವು ಸರ್ವಜ್ಞನಲ್ಲಿ ಸಾರ್ಥಕ್ಯವನ್ನು ಪಡೆದಿದೆ".[೪]

ವಚನಕಾರರಂತೆ ಸರ್ವಜ್ಞನೂ ಸಮಾಕಾಲೀನ ಸಮಾಜದ ಮೇಲ್ಮೆಗಾಗಿ ಮಿಡಿದಿದ್ದಾನೆ. ಅದರ ವ್ಯವಸ್ಥೆಯನ್ನು ಕಂಡು ಕಟುವಾಗಿ ಟೀಕಿಸಿದ್ದಾನೆ. ಇವನ ವಚನಗಳಲ್ಲಿ ಅಖಂಡವಾದ ವಿಚಾರಗಳಿವೆ. ಅಂತಹ ವಿಚಾರಗಳಲ್ಲಿ ಸಾಮಾಜಿಕ ಕಳಕಳಿಯುಳ್ಳ ವಚನಗಳು ತುಂಬಿವೆ. ಅಂತಹ ವಚನಗಳನ್ನು ಗುರುತಿಸಿ ಬಸವಣ್ಣನವರ ವಚನಗಳ ಜೊತೆ ತುಲನಾತ್ಮಕವಾಗಿ ನೋಡುವುದು ಈ ನಿಬಂಧದ ಮುಖ್ಯ ವಿಚಾರವಾಗಿದೆ.

ಪ್ರಸ್ತುತ ಈ ನಿಬಂಧದಲ್ಲಿ ಆರು ಅಧ್ಯಾಯಗಳಿದ್ದು ಮೊದಲನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಕುರಿತು ಹೇಳಲಾಗಿದೆ

ಬಸವಣ್ಣ ಮತ್ತು ಸರ್ವಜ್ಞರ ಕಾಲ, ಸ್ಥಳ, ಜೀವನ ಪರಿಚಯ ಎಂಬ ಎರಡನೆಯ ಅಧ್ಯಾಯದಲ್ಲಿ ಬಸವಣ್ಣ ಮತ್ತು ಸರ್ವಜ್ಞರ ಬಗೆಗಿನ ಕಾಲ ವಿಚಾರಗಳು, ಅವರ ಜನನ ಸ್ಥಳ, ಅವರಿಗೆ ಸಂಬಂಧಿಸಿದ ವಿಶೇಷ ವಿಚಾರಗಳು ಇತ್ಯಾದಿ ವಿಚಾರಗಳನ್ನು ವಿಶೇಷವಾಗಿ ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಬಸವಣ್ಣನವರ ವಚನಗಳಲ್ಲಿ ಕಂಡು ಬರುವ ಜಾತಿ ವ್ಯವಸ್ಥೆಯ ವಿರೋಧ, ಬ್ರಾಹ್ಮಣ ವರ್ಗದ ಟೀಕೆ, ಅಂದಿನ ಸಮಾಜದಲ್ಲಿ ಅಸ್ಥಿತ್ವದಲ್ಲಿದ್ದ ಮೂಢ ನಂಬಿಕೆ, ಕಂದಾಚಾರಗಳ ವಿಡಂಬನೆ, ಮಾನವೀಯ ಬದುಕಿಗೆ ಅನಿವಾರ್ಯವೆನಿಸಿದ ನೀತಿಯುತ ಮೌಲ್ಯಗಳನ್ನು ಕುರಿತ ವಿಚಾರಗಳು ಹಾಗೂ ಒಟ್ಟಾರೆ ಅವರ ಸಮಾಜದ ಕಳಕಳಿಯ ವಿಚಾರಗಳ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಸರ್ವಜ್ಞನ ವಚನಗಳಲ್ಲಿ ಕಂಡುಬರುವ ಮತೀಯ ಆಚಾರ-ವಿಚಾರಗಳು, ವಿವಿಧ ವೃತ್ತಿ ನಿರತ, ವೃತ್ತಿಶೀಲರ ಬಗ್ಗೆ ವ್ಯಕ್ತಿಗತ ವರ್ತನೆಗಳ ಬಗ್ಗೆ ವ್ಯಸನಗಳ ಬಗ್ಗೆ ಸಂಸಾರ ಪಥದ ಬಗ್ಗೆ ಈ ಮೊದಲಾದ ಸಾಮಾಜಿಕ ಕಳಕಳಿಯ ವಿಚಾರಗಳನ್ನು ಕುರಿತು ಸ್ಥೂಲಚಿತ್ರಣವಿದೆ.

ಬಸವಣ್ಣ ಮತ್ತು ಸರ್ವಜ್ಞರ ವಚನಗಳಲ್ಲಿ ಸಾಮಾಜಿಕ ಕಳಕಳಿಯ ತೌಲನಿಕ ವಿವೇಚನೆಯನ್ನು

---

೩. ಅಡಿ ಟಿಪ್ಪಣಿ ೨ರಂತೆ, ಪುಟ - ೧೫

೪. ಕನ್ನಡ ಸಾಹಿತ್ಯ ಚರಿತ್ರೆ, ರಂ.ಶ್ರೀ. ಮುಗಳಿ, ಪುಟ - ೩೦೬

ಕುರಿತಂತೆ ಐದನೆಯ ಅಧ್ಯಾಯದಲ್ಲಿ ವಿವೇಚನೆ ನಡೆಸಲಾಗಿದೆ.

ಆರನೆಯ ಅಧ್ಯಾಯ ಸಮಾರೋಪವಾಗಿದ್ದು ಇದುವರೆವಿಗೂ ಈ ನಿಬಂಧದಲ್ಲಿ ಕಂಡುಕೊಂಡ ಫಲಿತಗಳನ್ನು ಈ ಭಾಗದಲ್ಲಿ ಬಿಂಬಿಸಲಾಗಿದೆ. ಇದು ಪ್ರಸ್ತುತ ವಿಷಯದ ಅಧ್ಯಯನದ ಫಲಶೃತಿಯಾಗಿರುತ್ತದೆ. ಇದುವರೆಗಿನ ಅಧ್ಯಯನದ ಫಲಿತಗಳನ್ನು ಹಾಗೂ ಒಟ್ಟು ಅಧ್ಯಾಯಗಳ ವಿಷಯ ವೈಶಿಷ್ಟ್ಯಗಳನ್ನು ಈ ಭಾಗದಲ್ಲಿ ವಿವರಿಸಲಾಗಿದೆ.

ಅಧ್ಯಾಯ - ೨

ಬಸವಣ್ಣ ಮತ್ತು ಸರ್ವಜ್ಞರ ಕಾಲ, ಸ್ಥಳ, ಜೀವನ ಪರಿಚಯ

ಮರ್ತ್ಯದ ಮನದ ಮೈಲಿಗೆಯ ಕಳೆಯಲೆಂದು ಜನಿಸಿದ ವಿಶ್ವವಿಭೂತಿಗಳ ಸಾಲಿನಲ್ಲಿ ಕಲ್ಯಾಣ ಶರಣರ ಹೆಸರು ಚಿರಸ್ಮರಣೀಯವೆನಿಸಿದೆ. ಕನ್ನಡಿಗರ ಜಂಗು ಜೀವನಕ್ಕೆ ವಜ್ರಸಾಣಿ ಎನಿಸಿದ ಅವರ ಆಂದೋಲನ ನಮ್ಮ ನಾಡ ಇತಿಹಾಸದಲ್ಲಿ ಕಣ್ಣುಕುಕ್ಕಿಸುವ ಅಮರ ಪುಟವೊಂದನ್ನು ನಿರ್ಮಿಸಿದೆ. ೧೨ನೆಯ ಶತಮಾನದಲ್ಲಿ ಆವಿಷ್ಕಾರಗೊಂಡ ಈ ಆಂದೋಲನದ ಕೇಂದ್ರ ಶಕ್ತಿ ಭಕ್ತಿ ಭಂಡಾರಿ ಬಸವಣ್ಣನವರು.

ಬಸವಣ್ಣನವರು ಹನ್ನೆರಡನೆಯ ಶತಮಾನದ ಕರ್ನಾಟಕದಲ್ಲಿನ ಬಹುಮುಖ ಕ್ರಾಂತಿಗೆ ಕಾರಣನಾದ ಮಹಾಪುರುಷರಾಗಿದ್ದಾರೆ. ಅವರು ವಿಶ್ವ ವಿಭೂತಿಗಳಲ್ಲಿ ಮಹತ್ವದ ಸ್ಥಾನಕ್ಕೆ ಅರ್ಹರಾಗಿದ್ದಾರೆ. ಇಂತಹ ಪ್ರಾಚೀನ ಕಾಲದ ಮಹಾಪುರುಷರ ಬಾಹ್ಯ ಜೀವನದ ಕೆಲವು ವಿಚಾರಗಳು ಖಚಿತವಾಗದೆ ಇರುವುದು ಸಾಮಾನ್ಯ ಸಂಗತಿಯಾಗಿದೆ. ಇದು ಬಸವಣ್ಣ ಹಾಗೂ ಸರ್ವಜ್ಞರಿಬ್ಬರಿಗೂ ಅನ್ವಯಿಸುತ್ತದೆ.

ಬಸವೇಶ್ವರರ ಕಾಲ :

ಬಸವಣ್ಣನವರು ನಿಸ್ಪೃಹಿಯಾಗಿದ್ದರು. ಲೌಕಿಕರಾದ ಸಾಮಾನ್ಯರಂತೆ ಅವರು ತಮ್ಮ ಚರಿತ್ರೆಯ ದಾಖಲೆಗಳನ್ನು ಉಳಿಸುವತ್ತ ಗಮನಕೊಡುವವರಾಗಿರಲಿಲ್ಲ. ಅವರನ್ನು 'ಅವತಾರ ಪುರುಷ', 'ಪವಾಡ ಪುರುಷ' ಎಂದು ಭಾವಿಸಿ ಬಣ್ಣಿಸುದುದೂ ಉಂಟು. ಹೀಗಾಗಿ ಅವರ ಚರಿತ್ರೆಯ ಕೆಲವು ವಿವರಗಳು ಇಂದಿಗೂ ಸಹ ವಿವಾದಾಸ್ಪದವೆನಿಸಿದೆ. ಆದರೆ ತೀವ್ರವಾದ ಭೂಮಿಗೆ ಇಳಿಯದೆ, ಬಹುಮಟ್ಟಿಗೆ ಗ್ರಾಹ್ಯವೆನಿಸುವ ಅಂಶಗಳನ್ನು ಗಮನಿಸಿ ಬಸವಣ್ಣನವರ ಜೀವನ ಚರಿತ್ರೆಯನ್ನು ರೂಪಿಸುವುದು ಸಾಧ್ಯವಿದೆ. ಬಾಳಿನ ಬಾಹ್ಯ ಘಟನೆಗಳಿಗಿಂತ ಬಸವಣ್ಣನವರ ಆಂತರಿಕ ಜೀವನ, ಆತನ ಸಂದೇಶಗಳು ಮೌಲಿಕವಾಗಿವೆ.

ಬಸವಣ್ಣನವರ ಜೀವನ ಚರಿತ್ರೆಗೆ ಸಂಬಂಧಪಟ್ಟಂತೆ ಅವರ ಕಾಲದ ವಿಚಾರವನ್ನು ನಾವು ಮೊದಲು ಪರಿಶೀಲಿಸಬೇಕು. ಸಂಸ್ಕೃತ 'ಬಸವಪುರಾಣ'ದಲ್ಲಿ ಉಕ್ತವಾದ ಭಾರತೀಯ ಕಾಲಮಾನದ ವಿವರಗಳನ್ನು ಆಧರಿಸಿ ಬಸವಣ್ಣನವರ ಜನ್ಮಕಾಲದ ವಿವರಗಳನ್ನು ನಿರ್ಧರಿಸುವ ಪ್ರಯತ್ನ ಮೊದಲಿಗೆ ನಡೆಯಿತು. ಆ ವಿವರಗಳ ಗಣನೆಯಿಂದ ಕ್ರಿ.ಶ. ೧೧೧೫ ಬಸವಣ್ಣನವರ ಜನ್ಮಕಾಲವೆಂದು ಒಂದು ಅಭಿಪ್ರಾಯವಾದರೆ, ೧೧೦೬ ಎಂದು ಬೇರೊಂದು ಅಭಿಪ್ರಾಯ ಬಂದಿತು. "ಬಸವಣ್ಣನವರ ಬಾಳಿನ ಅವಧಿ ೩೬ ವರುಷವೆಂಬ ಪರಂಪರೆಯ ಅಭಿಪ್ರಾಯವನ್ನು ಒಪ್ಪಿಕೊಂಡು ಹರ್ಡೇಕರ ಮಂಜಪ್ಪನವರು ಕ್ರಿ.ಶ. ೧೧೩೨ ಬಸವಣ್ಣನವರು ಜನ್ಮತಳೆದ ವರ್ಷವೆಂದು ನಿರ್ಧರಿಸಿದರು".[೧]

ಮರ್ತ್ಯಕ್ಕೆ ದಿವ್ಯ ಬೆಳಕಿನ ರೂಪದಲ್ಲಿ ಬಂದ ಮಹಾಪುರುಷರ ವಿಷಯದಲ್ಲಿ ಜನ್ಮ

---

೧. ಸ.ಕ.ಸಾ. ಚರಿತ್ರೆ, ಸಂ-೩, ಬೆ.ವಿ.ವಿ, ಪುಟ - ೯೫

ಜನ್ಮಾಂತರದ ಕಥೆಗಳು ಕೇಳಿ ಬರುವುದು ಸ್ವಾಭಾವಿಕ. ಈ ಮಾತಿಗೆ ಬಸವಣ್ಣನವರು ಹೊರತಲ್ಲ. ಅವರೇ ತಮ್ಮದೊಂದು ವಚನದಲ್ಲಿ :

"ಅಯ್ಯಾ ಏಳೇಳು ಜನ್ಮದಲಿ ಶಿವಭಕ್ತವಾಗಿ
ಬಾರದಿರ್ದೊಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ.
ಪ್ರಥಮ ಭವಾಂತರದಲ್ಲಿ ಶಿಲಾದನೆಂಬ ಗಣೇಶ್ವರನ ಮಾಡಿ
ಹೆಸರಿಟ್ಟು ಕರೆದು ನಿಮ್ಮ ಭೃತ್ಯನ ಮಾಡಿ ಎನ್ನನಿರಿಸಿಕೊಂಡಿದ್ದಿರಯ್ಯಾ
ಎರಡನೆಯ ಭವಾಂತರದಲ್ಲಿ ಸ್ಕಂದನೆಂಬ ಗಣೇಶ್ವರನ ಮಾಡಿ
ಹೆಸರಿಟ್ಟು ಕರೆದು ನಿಮ್ಮ ಕಾರುಣ್ಯವ ಮಾಡಿಕೊಂಡಿರ್ದಿರಯ್ಯ
ಮೂರನೆಯ ಭವಾಂತರದಲ್ಲಿ ನೀಲಲೋಹಿತನೆಂಬ ಗಣೇಶ್ವರನ ಮಾಡಿ
ಹೆಸರಿಟ್ಟು ಕರೆದು ನಿಮ್ಮ ಲೀಲಾವಿನೋದದಿಂದಿರಿಸಿಕೊಂಡಿದ್ದಿರಯ್ಯಾ
ನಾಲ್ಕನೆಯ ಭವಾಂತರದಲ್ಲಿ ಮನೋಹರನೆಂಬ ಗಣೇಶ್ವರನ ಮಾಡಿ
ಹೆಸರಿಟ್ಟು ಕರೆದು ನಿಮ್ಮ ಮನಃಪ್ರೇರಕನಾಗಲೆಂದಿರಿಸಿಕೊಂಡಿದ್ದಿರಯ್ಯಾ
ಐದನೆಯ ಭವಾಂತರದಲ್ಲಿ ಕಾಲಲೋಚನನೆಂಬ ಗಣೇಶ್ವರನ ಮಾಡಿ
ಹೆಸರಿಟ್ಟು ಕರೆದು ಸರ್ವಕಾಲ ಸಂಹಾರವ ಮಾಡಿಸುತ್ತಿದ್ದಿರಯ್ಯಾ
ಆರನೆಯ ಭವಾಂತರದಲ್ಲಿ ವೃಷಭನೆಂಬ ಗಣೇಶ್ವರನ ಮಾಡಿ
ಹೆಸರಿಟ್ಟು ಕರೆದು ನಿಮ್ಮ ಒಕ್ಕುದ ಮಿಕ್ಕುದಕ್ಕೆ ಯೋಗ್ಯನಾಗಿರಲೆಂದು
ಇರಿಸಿಕೊಂಡಿರ್ದಿರಯ್ಯಾ".

ಎಂದು ಹೇಳಿದುದನ್ನು ಗಮನಿಸಿದರೆ ಅವರ ಪೂರ್ವಜನ್ಮಗಳು ಆರು ಎಂದು ತಿಳಿದು ಬರುತ್ತದೆ.[೨]

"ಆರು ಜನ್ಮದವ ಬಸವಣ್ಣನೆಂಬರು ಈಗಾರು ಮಾತು ಕೇಳಲಾಗದು"[೩] ಎಂದು ಮಡಿವಾಳ ಮಾಚಿದೇವನ ವ್ಯಾಜಸ್ತುತಿ ರೂಪದ ಹೇಳಿಕೆಯನ್ನು ಇಲ್ಲಿ ಸ್ಮರಿಸಬಹುದು. ಈ ಆರು ಜನ್ಮಗಳ ಮುಂದಣ ಏಳನೆಯ ಜನ್ಮವೇ ಶ್ರೀ ಬಸವಣ್ಣನವರು.

ಬಸವಣ್ಣನವರಿಗೆ ಸಂಬಂಧಿಸಿದಂತೆ
ಹಿರಿಯೂರು ಶಾಸನ
ಅರ್ಜುನವಾಡ ಶಾಸನ
ಚೌಡದಾನ ಶಾಸನ
ಕಲ್ಲೇದೇವರ ಶಾಸನ
ಮರಡಿಪುರ ಶಾಸನ
ಹೊಯ್ಸಳ ಸೋಮೇಶ್ವರನ ಕಣ್ಣಾನೂರು ಶಾಸನ - ಇತ್ಯಾದಿ ಶಾಸನಗಳಲ್ಲಿ ಬಸವಣ್ಣನವರ ಬಗ್ಗೆ

೨. ಶ್ರೀ ಬಸವೇಶ್ವರರು, ಬಸವಣ್ಣನವರ ಜೀವನ ಚರಿತ್ರೆ, ಎಂ.ಎಂ. ಕಲಬುರ್ಗಿ, ಪುಟ-೫೬
೩. ಅಡಿಟಿಪ್ಪಣಿ ೨ರಂತೆ, ಪುಟ-೫೬

ಹೆಚ್ಚು ಮಾಹಿತಿಗಳು ಲಭ್ಯವಾಗುತ್ತವೆ. ಈ ಶಾಸನಗಳಲ್ಲದೆ, ಕನ್ನಡ ಸಾಹಿತ್ಯದ ಪ್ರಮುಖ ಕವಿವರ್ಯರಿಂದ ರಚಿತವಾದ ಗ್ರಂಥಗಳು ಸಹ ಅವರ ಬಗ್ಗೆ ಮಾಹಿತಿ ನೀಡುತ್ತವೆ. ಅವುಗಳಲ್ಲಿ - ಹರಿಹರನ 'ಬಸವರಾಜ ದೇವರರಗಳೆ', ಭೀಮಕವಿಯ 'ಕನ್ನಡ ಬಸವ ಪುರಾಣ', ಷಡಕ್ಷರಿ ದೇವನ 'ವೃಷಭೇಂದ್ರವಿಜಯ', ಸಿಂಗಿರಾಜನ 'ಅಮಲ ಬಸವನ ಚಾರಿತ್ರ್ಯ', ಲಕ್ಕಣ್ಣ ದಂಡೇಶನ 'ಶಿವ ತತ್ವ ಚಿಂತಾಮಣಿ' ಇವೇ ಮುಂತಾದ ಗ್ರಂಥಗಳಲ್ಲಿ ಬಸವಣ್ಣನವರ ಜೀವನ ಚಿತ್ರಗಳು ನಮಗೆ ಸಿಗುತ್ತವೆ.

ಸಿಂಗಿರಾಜ ಪುರಾಣದಲ್ಲಿ ಮಾಸ, ತಿಥಿ, ವಾರಗಳನ್ನು ಹೇಳಿದ್ದರೂ ಅಲ್ಲಿ ಸಂವತ್ಸರದ ಉಲ್ಲೇಖವಿಲ್ಲ. ಎಲ್ಲ ವಿವರಗಳು ಲಕ್ಕಣ್ಣ ದಂಡೇಶನ ಶಿವ ತತ್ವ ಚಿಂತಾಮಣಿಯಲ್ಲಿ ಉತ್ತಮವಾಗಿದೆ. ಅವುಗಳನ್ನು ಆಧರಿಸಿದ ಗಣನೆಯಿಂದ ಅವರ ಜನ್ಮವರ್ಷ ಕ್ರಿ.ಶ. ೧೧೪೦ ಎಂಬ ಒಂದು ಅಭಿಪ್ರಾಯವಿದೆ. ಆದರೆ ವಿಕ್ರಮ ಸಂವತ್ಸರ ಗಣನೆಯಿಂದ ಜನ್ಮಕಾಲ ಕ್ರಿ.ಶ. ೧೧೨೧ಕ್ಕೆ ಸರಿಹೊಂದುವುದೆಂಬ ಅಭಿಪ್ರಾಯವೂ ಬಂದಿದೆ. ಈ ಅಭಿಪ್ರಾಯಕ್ಕೆ ಹೆಚ್ಚಿನ ಬೆಂಬಲವಿದೆ. ಶ್ರೀ ಬಸವೇಶ್ವರ ಅಷ್ಟಶತಮಾನೋತ್ಸವದ ಸಂದರ್ಭದಲ್ಲಿ ವಿದ್ವಾಂಸರ ಮಂಡಲಿಯೊಂದು ಸೇರಿ ಈ ಬಗೆಗೆ ವಿಪುಲ ಚರ್ಚೆ ನಡೆಸಿತು. ಈ ಮಂಡಲಿಯು ಬಸವೇಶ್ವರರ ಜನ್ಮಕಾಲ ಕ್ರಿ.ಶ. ೧೧೨೧ ವೈಶಾಖ ಶುದ್ಧ ಅಕ್ಷಯ ತೃತೀಯ ಎಂಬ ನಿರ್ಣಯವನ್ನು ಸ್ವೀಕರಿಸಿತು. ಇದನ್ನೇ ನಾವೀಗ ಬಸವಣ್ಣನ ಜನ್ಮಕಾಲವೆಂದು ಇಟ್ಟುಕೊಳ್ಳಬೇಕಾಗಿದೆ. ಪ್ರಸಿದ್ಧ ಸಂಶೋಧಕರಾದ ಎಂ. ಚಿದಾನಂದ ಮೂರ್ತಿಯವರು ಸಹ 'ಬಸವಣ್ಣನವರು' ಎಂಬ ತಮ್ಮ ಗ್ರಂಥದಲ್ಲಿ ಅವರ ಕಾಲ ಕ್ರಿ.ಶ. ೧೨ನೆಯ ಶತಮಾನದ ಮಧ್ಯಭಾಗವೆಂದು ತಿಳಿಸಿದ್ದಾರೆ.

ಜನ್ಮಸ್ಥಳ ಮತ್ತು ಜೀವನ ವಿಚಾರಗಳು :

ಬಸವಣ್ಣನವರ ಜನ್ಮಸ್ಥಳದ ಬಗೆಗೆ ಹೆಚ್ಚಿನ ವಿವಾದವಿಲ್ಲ. ಹಾಗೆಯೇ ತಾಯಿ-ತಂದೆಗಳ ಹೆಸರಿನ ಬಗೆಗೆ ಬಹುಮಟ್ಟಿಗೆ ಏಕಾಭಿಪ್ರಾಯವಿದೆ. ಬಿಜಾಪುರ ಜಿಲ್ಲೆಯ ಬಾಗೇವಾಡಿ ಇವರ ಜನ್ಮಸ್ಥಳ. ಪಕ್ಕದ ಇಂಗಳೇಶ್ವರ ಬಸವಣ್ಣನವರ ತಾಯಿಮನೆ. ಬಾಗೇವಾಡಿಯು ಅಂದು ಪ್ರಸಿದ್ಧವಾದ ಅಗ್ರಹಾರವಾಗಿತ್ತು. ಇದರ ಅಧಿಪತಿ 'ಮಾದಿರಾಜ', ಮಾದಿರಾಜನ ಪತ್ನಿ - ಮಾದಲಾಂಬೆ'. ಇವರ ಮಗನಾಗಿ ಬಸವಣ್ಣನವರು ಕ್ರಿ.ಶ. ೧೧೩೧ರಲ್ಲಿ ಜನಿಸಿದರು. ಬಸವೇಶ್ವರರಿಗೆ 'ದೇವರಾಜ' ಎನ್ನುವ ಅಣ್ಣ, 'ನಾಗಮ್ಮ' ಎಂಬ ಅಕ್ಕ ಇದ್ದರು ಎಂದು ತಿಳಿದುಬರುತ್ತದೆ. ಬಾಲ್ಯದಲ್ಲಿಯೇ ತಂದೆ-ತಾಯಿಗಳನ್ನು ಕಳೆದುಕೊಂಡ ಬಸವಣ್ಣನವರು ಮುತ್ತಜ್ಜಿಯಾದ ಮುತ್ತಬ್ಬೆಯ ಹಾರೈಕೆಯಲ್ಲಿ ಬೆಳೆದರು. ಹುಟ್ಟಿದ ಎಂಟು ವರ್ಷಗಳಲ್ಲಿಯೇ ಅತ್ಯಂತ ಬುದ್ಧಿವಂತರಾಗಿದ್ದ ಬಸವಣ್ಣ ಮಾನವೀಯ ತತ್ವಗಳನ್ನು ತನ್ನ ನಡತೆಯಲ್ಲಿ ಅಳವಡಿಸಿಕೊಂಡು ಮಹಾವ್ಯಕ್ತಿಯ ಗುಣಗಳನ್ನು ಪಡೆದುಕೊಂಡಿದ್ದರು.

ಬಸವಣ್ಣನವರು ತಮಗೆ ಉಪನಯನವಾಗುವ ಸಂದರ್ಭದಲ್ಲಿ ಅದನ್ನು ಒಪ್ಪದೆ, ತಿರಸ್ಕರಿಸಿದರು. ವೈದಿಕ ಧರ್ಮದ ಚತುರ್ವರ್ಣವನ್ನು ಒಪ್ಪದೆ, ಮೇಲು-ಕೀಳು ಭಾವನೆಯ ಜಾತಿ

ವ್ಯವಸ್ಥೆಯನ್ನು ಅವರು ಬಾಲ್ಯದಲ್ಲಿಯೇ ತಿರಸ್ಕಾರ ಮಾಡಿದರೆಂದು ತಿಳಿದು ಬರುತ್ತದೆ. ಆ ಕಾರಣದಿಂದಾಗಿ ಅವರು ಬಾಗೇವಾಡಿಯನ್ನು ತೊರೆದು ಅಕ್ಕ ಭಾವರ ಊರಾದ ತಪ್ಪಡಿ ಅಥವಾ ಸಂಗಮ ಕ್ಷೇತ್ರಕ್ಕೆ ಬಂದು ತಮ್ಮ ಮುಂದಿನ ಬದುಕನ್ನು ಪ್ರಾರಂಭಿಸಿದರು.

ಸಂಗಮ ಕ್ಷೇತ್ರದಲ್ಲಿ ಜಾತವೇದ ಮುನಿಗಳು (ಈಶಾನ್ಯ ಗುರುಗಳು) ಬಸವಣ್ಣನವರ ವಿಚಾರಧಾರೆಗಳನ್ನು ಮೆಚ್ಚಿಕೊಂಡ ಇವರು ಬಸವಣ್ಣನವರಿಗೆ ದೀಕ್ಷೆಯನ್ನು ನೀಡಿ ಗುರುಗಳಾಗಿ ನಿಂತರು. ಅನೇಕ ಧಾರ್ಮಿಕ, ಸಾಮಾಜಿಕ ವಿಷಯಗಳನ್ನು ಜಾತವೇದ ಮುನಿಗಳಿಂದ ಕಲಿತ ಬಸವಣ್ಣನವರಿಗೆ ಕೃಷ್ಣ ಮತ್ತು ಮಲಪ್ರಭ ನದಿಗಳ ಸಂಗಮಕ್ಷೇತ್ರವು ಅವರ ಪೂರ್ಣ ವ್ಯಕ್ತಿತ್ವದ ಬೆಳವಣಿಗೆಗೆ ತುಂಬಾ ಸಹಕಾರಿಯಾಯಿತು. ಸುಮಾರು ಒಂದು ದಶಕಗಳ ಕಾಲ ಸಂಗಮ ಕ್ಷೇತ್ರದಲ್ಲಿ ವಿದ್ಯಾರ್ಜನೆ ಮಾಡಿ ಸಕಲಗುಣ ಸಂಪನ್ನರಾದರು.

ಇತ್ತಕಡೆ ಮಂಗಳವಾಡದ ಬಿಜ್ಜಳನ ಆಸ್ಥಾನದಲ್ಲಿ ಮಹಾಮಂತ್ರಿಯಾಗಿದ್ದ ಬಸವಣ್ಣನ ಸೋದರ ಮಾವ 'ಬಲದೇವರಿಗೆ' ಬಸವಣ್ಣನವರ ವಿಚಾರ ತಿಳಿಯಿತು. ಬಸವಣ್ಣನನ್ನು ಮಂಗಳವಾಡಕ್ಕೆ ಕರೆಸಿಕೊಳ್ಳಲು ಪ್ರಯತ್ನಿಸಿದರು. ತನ್ನ ಮಗಳಾದ ಗಂಗಾಂಬಿಕೆಯನ್ನು ಬಸವಣ್ಣನಿಗೆ ವಿವಾಹ ಮಾಡಲು ಯತ್ನಿಸಿದನು. ಈಶಾನ್ಯ ಗುರುಗಳು ಕೂಡ ಈ ಅಭಿಪ್ರಾಯವನ್ನು ಮನ್ನಿಸಿ ಬಸವಣ್ಣನನ್ನು ಮಂಗಳವಾಡಕ್ಕೆ ಆಶೀರ್ವದಿಸಿ ಕಳುಹಿಸಿಕೊಟ್ಟರು. ಬಸವೇಶ್ವರ ಜೊತೆಯಲ್ಲಿ ಅಕ್ಕ ನಾಗಮ್ಮ ಮತ್ತು ಆಕೆಯ ಪತಿ ಹಾಗೂ ಮಗನಾದ ಶಿವಸ್ವಾಮಿ ಚನ್ನಬಸವಣ್ಣ ಎಲ್ಲರೂ ಮಂಗಳವಾಡಕ್ಕೆ ಬಂದರು. ಬಸವಣ್ಣನಿಗೆ ಗಂಗಾಂಬಿಕೆಯೊಡನೆ ವಿವಾಹವಾಯಿತು. ಸ್ವಲ್ಪ ಸಮಯದಲ್ಲೇ "ಗಂಗಾಂಬಿಕೆಯ ಗೆಳತಿ ಹಾಗೂ ಮಂಗಳವಾಡದ ಸಿದ್ದಣ್ಣ ಮಂತ್ರಿಯ ಮಗಳು ನೀಲಾಂಬಿಕೆಯನ್ನು ಬಸವಣ್ಣನವರು ಮದುವೆಯಾದರು".[೪] ಹೀಗೆ ಬಸವಣ್ಣರ ಮೊದಲನೆ ಹಂತದ ಬದುಕು ಮಂಗಳವಾಡದಲ್ಲಿ ಗಟ್ಟಿಯಾಗಿ ನೆಲೆಯೂರಿತು.

ದುಡಿಯದೇ ತಿನ್ನುವ ಹಕ್ಕಿಲ್ಲ ಎಂಬ ನಿಯಮದ ಅಡಿಯಲ್ಲಿ ಆಲೋಚಿಸುತ್ತಿದ್ದ ಬಸವಣ್ಣರಿಗೆ ಬಿಜ್ಜಳನ ಆಸ್ಥಾನದಲ್ಲಿ ಕರಣಿಕ ವೃತ್ತಿ ದೊರೆಯಿತು. ಕುಶಾಗ್ರಮತಿಗಳು, ಮೇಧಾವಿಗಳು, ಗಣಕದಲ್ಲಿ ಪ್ರತಿಭಾಶಾಲಿಗಳೂ ಆದ ಬಸವಣ್ಣರು ಪ್ರಾಮಾಣಿಕವಾಗಿ ಆ ವೃತ್ತಿಯಲ್ಲಿ ಮುಂದುವರೆದರು. ಅವರ ಪ್ರಾಮಾಣಿಕತೆ, ವ್ಯಕ್ತಿತ್ವ, ಪಾಂಡಿತ್ಯ, ಮೇಧಾವಿತನಗಳ ಕಾರಣದಿಂದಾಗಿ ಮಂಗಳವಾಡದ ಅನೇಕ ಅಧಿಕಾರಿಗಳೊಡನೆ, ಬಿಜ್ಜಳನ ಗೌರವಕ್ಕೂ ಪಾತ್ರರಾದರು. ಬಿಜ್ಜಳನಲ್ಲಿ ಮಹಾಮಂತ್ರಿಯಾಗಿದ್ದ ಬಲದೇವನ ಮರಣದ ತರುವಾಯ ಬಿಜ್ಜಳನು ಆ ಸ್ಥಾನವನ್ನು ಬಸವಣ್ಣರಿಗೆ ವಹಿಸಿದನು. ಇಲ್ಲಿಂದ ಬಸವಣ್ಣರ ಕಾರ್ಯಕ್ಷೇತ್ರ ವಿಸ್ತಾರವಾಯಿತು. ಬಿಜ್ಜಳನ ಅದೃಷ್ಟವೋ, ಬಸವಣ್ಣನವರ ಕಾಲಗುಣವೋ ರಾಜಕೀಯದಲ್ಲಿ ತೀವ್ರತರವಾದ ಬದಲಾವಣೆಯಾಯಿತು. ಅಂದಿನ ಕಲ್ಯಾಣದ ಅರಸರಾದ ಚಾಲುಕ್ಯರು ದುರ್ಬಲರಾಗಿದ್ದರು. ಇವರ ಸಾಮಂತನಾದ ಬಿಜ್ಜಳನು ಚಾಳುಕ್ಯ ಚಕ್ರವರ್ತಿ ತೈಲಪನನ್ನು ಮೂಲೆಗೆ ತಳ್ಳಿ ತಾನೇ ಸಿಂಹಾಸನಕ್ಕೆ ಒಡೆಯನಾದನು.

---

೪. ಕ.ಸಾ.ಚರಿತ್ರೆ, ನಂಜೇಗೌಡ, ಪುಟ-೧೫೧

ಅನಂತರ ಮಂಗಳವಾಡದಿಂದ ಕಲ್ಯಾಣಕ್ಕೆ ತನ್ನ ಅಧಿಕಾರವನ್ನು ಬದಲಾವಣೆ ಮಾಡಬೇಕಾಯಿತು. ಬಿಜ್ಜಳನೊಡನೆ ಬಸವಣ್ಣನವರು ಕಲ್ಯಾಣಕ್ಕೆ ಬರಬೇಕಾಯಿತು. ಆಗ ಇಡೀ ರಾಜ್ಯದ ಮಹಾಭಂಡಾರಿಯಾಗಿ ಬಸವಣ್ಣನವರ ಸೇವಾ ವ್ಯಾಪ್ತಿ ವಿಸ್ತಾರವಾಗಿ ಬೆಳೆಯಿತು. ಇವರ ಸೇವಾಕಾರ್ಯಗಳಿಂದಾಗಿ ಇಡೀ ರಾಜ್ಯದ ಎಲ್ಲ ಜನತೆಗೆ ಬಸವಣ್ಣನವರು ಚಿರಪರಿಚಿತರಾದರು. ರಾಜ್ಯದ ಹೊರಗೂ ಇವರ ಭಕ್ತಿಯ ಸೆಲೆ ಹರಡಿತು. ಇವರ ಧಾರ್ಮಿಕಸೇವೆ, ಸಾಮಾಜಿಕ ಸೇವೆ ಮತ್ತು ಸಾಹಿತ್ಯ ಸೇವೇಯಿಂದಾಗಿ ಬಿಜ್ಜಳನ ಕೀರ್ತಿ ಹೆಚ್ಚಿತು. ಬಿಜ್ಜಳನು ಕೂಡ ಬಸವಣ್ಣನವರ ಸೇವಾಕಾರ್ಯಕ್ಕೆ ಸ್ವತಂತ್ರ್ಯ ನೀಡಿದನು. ರಾಜಕೀಯ ವಹಿವಾಟುಗಳನ್ನು ನಿರ್ವಹಿಸುತ್ತಲೇ ಆಧ್ಯಾತ್ಮಿಕ ಸಾಮ್ರಾಜ್ಯದ ಚಕ್ರವರ್ತಿಯಾಗಿಯೂ ಮೆರೆದರು. ದೀನ ದಲಿತರನ್ನು ಉದ್ಧರಿಸುವ ಸಲುವಾಗಿ ಅವರನ್ನು ತನ್ನವರೆಂದು ಅಪ್ಪಿಕೊಳ್ಳುವ ಲೋಕಕಾರುಣ್ಯವನ್ನು ಹೊಂದಿ ಸಮಾಜದ ದೋಷಗಳನ್ನು ತಿದ್ದಿ ಸುಸ್ಥಿತಿಗೆ ತರುವುದರಲ್ಲಿ ಮಹತ್ತರವಾದ ಪಾತ್ರವಹಿಸಿದರು. ಈ ರೀತಿ ಬಹಳ ಎತ್ತರದ ವ್ಯಕ್ತಿಯಾಗಿ ಬೆಳೆದು ನಿಂತ ಬಸವಣ್ಣನವರನ್ನು ಕಂಡು ಕೆಲವರಿಗೆ ಆಗದಾಯಿತು.

ಕಲ್ಯಾಣದಲ್ಲಿ ಮಂತ್ರಿಯಾಗಿದ್ದುಕೊಂಡು ಅನೇಕ ಲೋಪ-ದೋಷಗಳನ್ನು ಬದಲಾಯಿಸಲು ಪ್ರಯತ್ನಿಸಿದರು. ಸಾಮಾನ್ಯ ವರ್ಗದವರ ಬಡವರ ಜಾತಿಹೀನರ ಬದುಕಿನ ದೇವರಾದರು. ಅನುಭವ ಮಂಟಪ ಮತ್ತು ಮಹಾಮಹಿಮೆಯನ್ನು ಕಟ್ಟಿ ದೇಶದ ನಾನ ಭಾಗಗಳಿಂದ ಭಕ್ತರನ್ನು ಕಲ್ಯಾಣಕ್ಕೆ ಬರುವಂತೆ ಮಾಡಿದರು. ಕಡೆಗೆ ಅಸ್ಪೃಶ್ಯರೆನಿಸಿದ ಹರಳಯ್ಯನ ಮಗನಿಗೂ, ಬ್ರಾಹ್ಮಣ ವಧು ಮಧುವರಸನ ಮಗಳಿಗೂ ತಾನೆ ನಿಂತು ವಿವಾಹ ನೆರವೇರಿಸಿದನು. ಇದು ಸಮಾಜದ ಮಹಾಕ್ರಾಂತಿಯ ಕೋಲಾಹಲವೆನಿಸಿತು. ಬಸವಣ್ಣರಿಂದ ವರ್ಣಸಂಕರವಾಯಿತೆಂದು ವಿರೋಧಿಗಳ ಗುಂಪು ಬಸವಣ್ಣನ ಮೇಲೆ ಹಗೆತನ ಕಾರಿತು.

ಬಿಜ್ಜಳ ಮತ್ತು ಬಸವಣ್ಣರಲ್ಲಿ ಭಿನ್ನಾಭಿಪ್ರಾಯಗಳು ಬಂದು ಬಸವಣ್ಣ ಅಧಿಕಾರವನ್ನು ತ್ಯಜಿಸಿ "ಕಲ್ಯಾಣವನ್ನು ಬಿಟ್ಟು ಸಂಗಮೇಶ್ವರ ಕ್ಷೇತ್ರಕ್ಕೆ ಬಂದು ಅಲ್ಲಿ ಕ್ರಿ.ಶ. ೧೧೬೭ರಲ್ಲಿ ಪರಮಾತ್ಮನಲ್ಲಿ ಐಕ್ಯವಾದರು".[೫] ಬಾಳಿದ ಮೂವತ್ತಾರು ವರ್ಷ ಅವಧಿಯಲ್ಲಿ ಮಹತ್ವಪೂರ್ಣ ಕಾರ್ಯ ಸಾಧಿಸಿದ ಬಸವೇಶ್ವರರು ಇಂದಿಗೂ ಅವರ ವಚನಗಳ ಮೂಲಕ ಅಜರಾಮರರಾಗಿದ್ದಾರೆ.

ಬಸವೇಶ್ವರರ ಸಂಕ್ಷಿಪ್ತ ವಿಚಾರಗಳು - (ವೈಯಕ್ತಿಕ)

ಕಾಲ	: ಕ್ರಿ. ಶ. ೧೧೩೧
ಹೆಸರು	: ಬಸವಣ್ಣ
ತಂದೆ	: ಮಾದರಸ
ತಾಯಿ	: ಮಾದಲಾಂಬಿಕೆ
ಜನ್ಮಸ್ಥಳ	: ಬಾಗೇವಾಡಿ
ಪತ್ನಿಯರು	: ಗಂಗಾಂಬಿಕೆ, ನೀಲಾಂಬಿಕೆ

೫. ಸ.ಕ.ಸಾ.ಚರಿತ್ರೆ, ಸಂ-೩, ಬೆ.ವಿ.ವಿ, ಪುಟ-೯೮

ಅಣ್ಣ	: ದೇವರಾಜ
ಅಕ್ಕ	: ನಾಗಮ್ಮ (ನಾಗಲಾಂಬಿಕೆ)
ಗುರು	: ಜಾತವೇದ ಮುನಿಗಳು (ಈಶಾನ್ಯ ಗುರುಗಳು)
ಸೋದರಳಿಯ	: ಚನ್ನ ಬಸವಣ್ಣ
ಭಾವ	: ಶಿವಸ್ವಾಮಿ, ನಾಗಲಾಂಬಿಕೆಯ ಪತಿ
ಮಕ್ಕಳು	: ಸ್ಥಿರಸ, ಬಾಲಸಂಗಯ್ಯ
ಮಾವ	: ಬಲದೇವ
ಅಂಕಿತ	: ಕೂಡಲಸಂಗಮದೇವ
ಕಾರ್ಯಕ್ಷೇತ್ರ	: ಮಂಗಳವಾಡ ಮತ್ತು ಕಲ್ಯಾಣ
ವೃತ್ತಿ	: ಕರಣಿಕ, ಕೋಶಾಧಿಕಾರಿ, ಭಂಡಾರಿ, ಮಂತ್ರಿ
ಮರಣ	: ಕ್ರಿ.ಶ. ೧೧೬೭
ಐಕ್ಯಸ್ಥಳ	: ಸಂಗಮೇಶ್ವರ
ರಾಜಾಶ್ರಯ	: ಬಿಜ್ಜಳ
ಸಾಹಿತ್ಯ ಕೃಷಿ	: ವಚನಗಳು
ಸಾಧನೆ	: ಮಹಾಮನೆ, ಅನುಭವ ಮಂಟಪ ಸ್ಥಾಪನೆ.

ಸರ್ವಜ್ಞ ಕವಿಯ ಕಾಲ, ಸ್ಥಳ, ಜೀವನ ಪರಿಚಯ :

ಕನ್ನಡ ಕುಲಕೋಟಿಯ ನಾಲಗೆಯ ಮೇಲೆ ನಲಿದಾಡುತ್ತಿರುವ ಸರ್ವಜ್ಞ ಓರ್ವ ಜಾನಪದ ಕವಿ. ಕನ್ನಡ ನೆಲದ ಅಂತಃಸತ್ವವನ್ನೆಲ್ಲಾ ತನ್ನಲ್ಲಿ ಮೈಗೂಡಿಸಿಕೊಂಡು ಸುಪುಷ್ಟವಾಗಿ ಬೆಳೆದ ಕುಲದೀಪಕ ಸರ್ವಜ್ಞ, ಜನಪದದ ಅಂತರ್ವಾಣಿಗೆ ಅಭಿವ್ಯಕ್ತಿ ಮಾಧ್ಯಮವಾದ ತ್ರಿಪದಿ, ಕರದಿ ಕಪ್ಪರವಿಡಿದು ಹಿರಿದಾದ ನಾಡನ್ನು ಪರಿವ್ರಾಜಕನಾಗಿ ಸುತ್ತಾಡಿದ ಮಣ್ಣಿನಮಗ ಸರ್ವಜ್ಞನ ಕಾವ್ಯದ ಅಭಿವ್ಯಕ್ತಿಗೆ ಮಾಧ್ಯಮವಾಯಿತು. ಇವನ ಕಾವ್ಯವಾಣಿಯ ಮಂತ್ರ ಸ್ಪರ್ಶದಿಂದ ತ್ರಿಪದಿಗೆ ನವನವೀನವಾದ ಓಜಸ್ಸು, ಶಕ್ತಿ ಪ್ರವಹಿಸಿತು, ಸಂಚಯನವಾಯಿತು. ಈ ಕಾರಣದಿಂದ ಸರ್ವಜ್ಞ 'ತ್ರಿಪದಿ ಚಕ್ರವರ್ತಿ' ಎಂದು ಹೇಳಬಹುದು.

'ಸರ್ವಜ್ಞ' ಈ ಹೆಸರು ತಂದೆ-ತಾಯಿಯರು ಇಟ್ಟ ಹೆಸರೊ ಇಲ್ಲವೆ ಕನ್ನಡ ಕುಲಬಾಂಧವರು ಕೊಟ್ಟ ಬಿರುದೋ ತಿಳಿಯದು. ಕನ್ನಡ ನಾಡಿನಾದ್ಯಂತ ತುಂಬ ಜನಮನ್ನಣೆ ಪಡೆದಿರುವ, ರಸಿಕರ ಮನವನ್ನು ತನ್ನ ವಚನಗಳಿಂದ ಕದ್ದಿರುವ, ವ್ಯಕ್ತಿ ವಿಶೇಷವಾದ ಮುದ್ರೆಯನ್ನು ಒತ್ತಿರುವ ಸರ್ವಜ್ಞ ಒಂದು ರೀತಿಯಲ್ಲಿ ಅಜ್ಞಾತಕವಿ, ಕುಲ, ಗೋತ್ರ, ಕಾಲ, ದೇಶಗಳು ನಿಶ್ಚಿತವಾಗಿ ತಿಳಿದು ಬರದಿರುವುದರಿಂದ ಈತನ ಬದುಕಿಗೆ ಸಂಬಂಧಿಸಿದಂತೆ ಹಲವು ದಂತಕಥೆಗಳು ಹುಟ್ಟಿಕೊಂಡಿವೆ.

ಸರ್ವಜ್ಞ ತನ್ನ ತ್ರಿಪದಿಗಳನ್ನು ರಚಿಸಿದ ಕಾಲದ ಬಗೆಗೆ ಏನನ್ನೂ ತಿಳಿಸಿಲ್ಲ. ಅಲ್ಲದೆ ಕೃತಿಯ ಮೊದಲಲ್ಲಿ ತನಗೆ ಪೂರ್ವಭಾವಿಯಾಗಿ ಕೃತಿರಚನೆ ಮಾಡಿದ ಕವಿಗಳಾರನ್ನು ಹೆಸರಿಸಿಲ್ಲ. ಹೀಗಾಗಿ ಸರ್ವಜ್ಞನ ಕಾಲದ ನಿರ್ಣಯ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸಮಸ್ಯೆಯಾಗಿದೆ. ಬೇಂದ್ರೆಯವರೇನೋ - 'ಅವನ ಜಾತಿ ಮಾನವ ಜಾತಿ, ಅವನ ಮತ ದೇವ ಮತ, ಅವನ ಕಾಲ ಸರ್ವಕಾಲ' ಎಂದು ಹೇಳಿದ್ದಾರೆ. "ಇದು ಅಂತಿಮ ಸತ್ಯಕ್ಕೆ ಸಂಬಂಧಿಸಿದ ಮಾತು. ಕವಿಯನ್ನು ರೂಪಿಸಲು ಕಾರಣವಾದ ವಾಸ್ತವ್ಯ ಸತ್ಯ ಇದಲ್ಲ. ಅವನ ಬದುಕಿನ ನಿಜವಾದ ವಿವರ ಬಹುತೇಕ ಪುರಾಣೀಕರಣ ಹೊಂದಿದೆ. ಅದರಿಂದ ವಿಷಯವನ್ನು ಹೊರತೆಗೆದು ಕವಿಯನ್ನು ರೂಪಿಸಿರುವ ಪರಿಸರವನ್ನು ಪುನಾರಚಿಸಿಬೇಕಾಗಿದೆ. ಸರ್ವಜ್ಞ ವಿರಕ್ತನಾದುದರಿಂದ ಇದೆಲ್ಲವನ್ನು ಹೇಳುವ ಗೋಜಿಗೆ ಹೋದಂತಿಲ್ಲ. ಆದರೂ ಕೆಲವೊಂದು ವಿಚಾರಗಳು ವಚನಗಳಲ್ಲಿ ನೇರವಾಗಿಯೋ, ಪರೋಕ್ಷವಾಗಿಯೋ ಪ್ರಸ್ತಾಪಗೊಂಡಿವೆ".[೬]

ಸರ್ವಜ್ಞ ಕವಿಯ ಕಾಲ :

ಸರ್ವಜ್ಞನ ಕಾಲವನ್ನು ನಿರ್ಧರಿಸಲು ಪ್ರಯತ್ನಿಸಿರುವ ಕನ್ನಡದ ವಿದ್ವಾಂಸರು ವಿಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವುಗಳೆಂದರೆ -

೧೫ನೆಯ ಶತಮಾನ	-	ಸಿದ್ದಯ್ಯ ಪುರಾಣಿಕ[೭]
೧೫ನೆಯ ಶತಮಾನ	-	ಜಿ.ಎಂ. ಉಮಾಪತಿ ಶಾಸ್ತ್ರಿ[೮]
ಕ್ರಿ.ಶ. ೧೫೬೦-೧೬೦೦	-	ಎಲ್. ಬಸವರಾಜು[೯]
೧೬೦೦ಕ್ಕಿಂತ ಮೊದಲು	-	ಆರ್. ನರಸಿಂಹಾಚಾರ್[೧೦]
೧೬ನೆಯ ಶತಮಾನ	-	ಚನ್ನಪ್ಪ, ಉತ್ತಂಗಿ[೧೧]
ಕ್ರಿ.ಶ. ೧೬೦೦	-	ಇ.ಪಿ. ರೈಸ್[೧೨]
ಕ್ರಿ.ಶ. ಸು. ೧೭೦೦	-	ರಂ.ಶ್ರೀ. ಮುಗಳಿ[೧೩]
ಕ್ರಿ.ಶ. ೧೮೦೦	-	ಎಫ್. ಕಿಟ್ಟೆಲ್[೧೪]

ಈ ಮೇಲಿನಂತೆ ಸರ್ವಜ್ಞನ ಕಾಲಾವಧಿ ಹದಿನೈದನೆಯ ಶತಮಾನದಿಂದ ಹದಿನೆಂಟನೆಯ ಶತಮಾನದವರೆಗೆ ನಾಲ್ಕು ಶತಮಾನಗಳ ಕಾಲವನ್ನು ವ್ಯಾಪಿಸಿದೆ. ಇವರು ತಮ್ಮ ಅಭಿಪ್ರಾಯಕ್ಕೆ ಕೊಡುವ ಕಾರಣಗಳು ಹೀಗಿವೆ.

---

೬. ಸರ್ವಜ್ಞನ ವಚನಗಳು, ಸಂ-ರಾಗೌ, ಪ್ರಸ್ತಾವನೆ
೭. ಉದ್ಧೃತ, ಸರ್ವಜ್ಞಮೂರ್ತಿಯ ವಚನಗಳು, ಸಂ-ಜಿ.ಎಂ. ಉಮಾಪತಿಶಾಸ್ತ್ರಿ, ಪುಟ-೨೮
೮. ಅಡಿಟಿಪ್ಪಣಿ ೭ರಂತೆ, ಪ್ರಸ್ತಾವನೆ, ಪುಟ-೨೮ರಿಂದ ೩೧
೯. ಸರ್ವಜ್ಞನಿಗೊಬ್ಬಗೆ ಒಬ್ಬಲೇಖಕಶಿಷ್ಯ, ಪ್ರಬುದ್ಧ ಕರ್ನಾಟಕ, ಪುಟ-೧೩೦ರಿಂದ ೧೩೧
೧೦. ಕರ್ನಾಟಕ ಕವಿಚರಿತೆ, ಸಂ-೨, ಪುಟ-೫೩೩
೧೧. ಅಡಿಟಿಪ್ಪಣಿ ೭ರಂತೆ, ಪ್ರಸ್ತಾವನೆ, ಪುಟ-೨೬
೧೨. A History of Kanarese Literature, ಪುಟ-೭೩
೧೩. ಕನ್ನಡ ಸಾಹಿತ್ಯ ಚರಿತ್ರೆ, ಪುಟ-೨೧೬
೧೪. ಅಡಿಟಿಪ್ಪಣಿ ೮ರಂತೆ, ಪ್ರಸ್ತಾವನೆ, ಪುಟ-೨೪

ವೇಮನ-ಸರ್ವಜ್ಞರ ಕೃತಿಗಳಲ್ಲಿ ಲಿಂಗಪೂಜೆ, ಶಿವಯೋಗ ಮಹಿಮೆ ಡಂಬಾಚಾರ ಖಂಡನ ಮೊದಲಾದ ವಿಷಯಗಳಲ್ಲಿ ಸಾಮ್ಯವಿದೆ. ಆದುದರಿಂದ ಇವರಿಬ್ಬರೂ ೧೫ನೆಯ ಶತಮಾನ ದಲ್ಲಿದ್ದವರು "ಇಬ್ಬರೂ ಒಬ್ಬರಿಂದೊಬ್ಬರು ಪ್ರಭಾವಿತರಾಗಿದ್ದರೂ ಆಗಿರಬಹುದು"[೧೫] - ಎಂಬುದು ಸಿದ್ದಯ್ಯ ಪುರಾಣಿಕರ ಅಭಿಪ್ರಾಯವಾಗಿದೆ.

ಜಿ.ಎಂ. ಉಮಾಪತಿ ಶಾಸ್ತ್ರಿಗಳವರಂತೆ ಕವಿ 'ಕಾಲಾಜ್ಞಾನ ಪದ್ಧತಿ'ಯಲ್ಲಿ ವೀರ ಬಸವಂತನ ಆಗಮನದ ವಿಷಯ ಸೂಚಿಸಿರುವನು.

ವೀರ ಬಸವಂತನು ಧೀರ ಬಿಜ್ಜಳ ತಾನು
ಮೀರಿಕಲಿದೇವಿ ನಡೆದಾನು ಅವನೊಡನೆ
ಹೋರುವವರಿಲ್ಲ ಸರ್ವಜ್ಞ.
ಇಂದುರಾಮವತಾರ ಸಂದುದಿರ್ಸಾಸಿರದ
ಮುಂದೆ ಬರುವನು ವೀರ ಬಸವಂತನು
ಕುಂದ ದಿಳೆಗೆಂದ ಸರ್ವಜ್ಞ.

(ಉತ್ತಂಗಿಯವರ ಸಂಪಾದಿತ ಕೃತಿ, ಕ್ರಮಾಂಕ, ೯೪೮ ಮತ್ತು ೯೫೦)[೧೬]

ಇಲ್ಲಿ ಸರ್ವಜ್ಞ ಮೂರ್ತಿಯು ಐತಿಹಾಸಿಕ ಘಟನೆಯೊಂದನ್ನು ನಮ್ಮ ಸ್ಮರಣೆಗೆ ತಂದು ಕೊಟ್ಟಿರುವನು. ವೀರ ಬಸವಂತನ ಉಲ್ಲೇಖವು 'ವ್ಯಾಸೋಕ್ತ ಸಂಸ್ಕೃತ ಪುರಾಣ'ದ ಕೊನೆಗೆ ಬರುತ್ತದೆ. ಕಷ್ಣ , ಗೋದಾವರಿ ನದಿಗಳ ಮಧ್ಯದ ಪವಿತ್ರ ಪ್ರದೇಶದಲ್ಲಿ ಹೇಲಾಪುರವೆಂಬ ಹೆಸರಾಂತ ಪಟ್ಟಣ. ಅಲ್ಲಿ ಕಂದೂಕರಿ (ಕುಂದಕೂರು) ವಂಶದ ರಾಜರು ಆಳುತ್ತಿದ್ದರು. ಈ ವಂಶದ ಪರಲಿಂಗ ರಾಜನ ಮಗ ಅಮೃತಲಿಂಗ, ಅವನ ಮಗ ಮಲ್ಲಿಕಾರ್ಜುನ ಸರ್ವಜ್ಞ, ಅವನಿಗೆ ಪಾಲಂಕ (ಪಲ್ಲಾಖ್ಯ) ಸದಾ ಶಿವ ಗುರುವಿನ ಕೃಪೆಯಿಂದ ಬಸವಾಂಶ ಸಂಭೂತ ಪುತ್ರನುದಿಸಿದನು. ಅವನೇ ವೀರ ಬಸವಂತನೆಂದು ಪ್ರಖ್ಯಾತಿ ಪಡೆದವನು. "ಇವನ ಕಾಲ ೧೪ನೆಯ ಶತಮಾನ. ಅವನನ್ನು ಸ್ಮರಿಸಿದ ಸರ್ವಜ್ಞ ಮೂರ್ತಿಯು ೧೫ನೆಯ ಶತಮಾನದವನೆಂದು ನಿರ್ಣಯಿಸಬಹುದು ಎಂದಿದ್ದಾರೆ".[೧೭]

ಎಲ್. ಬಸವರಾಜು ಅವರಂತೆ ಸರ್ವಜ್ಞ ಗುರುಭೋಧಾಮೃತ ಕರ್ತೃ ವಿರತ ಮಹಾಲಿಂಗನಗುರು "ವಿರತ ಮಹಲಿಂಗ ತನ್ನ ಗುರುಬೋಧಾಮೃತದಲ್ಲಿ ಆ ಬಿಟ್ಟ ಮಂಡೆಯ ಪ್ರಭುದೇವನನ್ನು ಆಗಿ ಹೋದ ಒಬ್ಬ ಪುರಾತನ ಶರಣನೆಂಬಂತೆ ಪ್ರಸ್ತಾಪಿಸಿರುವುದರಿಂದ ಮತ್ತು ಆ ಪ್ರಭುದೇವನು ಸರಿ ಸುಮಾರು ಎರಡನೆ ಗುಬ್ಬಿ ಮಲ್ಲಣ್ಣನ ಕಾಲ (ಕ್ರಿ.ಶ. ೧೫೩೦) ದವನಾದುದರಿಂದ ಅವನು (ಮಹಲಿಂಗ) ಅಲ್ಲಿಂದ ಒಂದು ತಲೆಮಾರಿನ ಕಾಲದಷ್ಟಾದರೂ ಈಚಿನವ (ಸು. ೧೫೬೦) ನಾಗಿರಬೇಕು. ಗುರು ಬೋಧಾಮೃತದ ಒಂದು ಕಾಗದದ ಪ್ರತಿ ಕ್ರಿ.ಶ.

೧೫. ಸರ್ವಜ್ಞ ಒಂದು ಸಮೀಕ್ಷೆ, ಎಸ್. ಶಿವಣ್ಣ, ಪುಟ-೭
೧೬. ಅಡಿಟಿಪ್ಪಣಿ ೧೫ರಂತೆ, ಪುಟ-೭ರಿಂದ ೮
೧೭. ಅಡಿಟಿಪ್ಪಣಿ ೮ರಂತೆ, ಪುಟ-೨೮ರಿಂದ ೩೧

೧೬೩೪ರಲ್ಲಿ ಲಿಖಿತವಾಗಿರುವುದರಿಂದ (ಕವಿ ಚರಿತೆ, ಸಂ-೨, ಪುಟ-೧೪೭) ಮಹಲಿಂಗನಾಗಲಿ ಅವನ ಗುರುವಾದ ಸರ್ವಜ್ಞನಾಗಲಿ - ಇಬ್ಬರೂ ಕ್ರಿ.ಶ. ೧೫೭೦ರಿಂದ ೧೬೦೦ರೊಳಗೆ ಬದುಕಿಬಾಳಿದವರಿರಬೇಕೆಂದೆನ್ನಲು ಯಾವ ಆತಂಕವೂ ಇಲ್ಲ.

ಸರ್ವಜ್ಞನಿಗೊಬ್ಬ ಕವಿ ಶಿಷ್ಯನಿದ್ದನೆಂಬುದು ಪತ್ತೆಯಾಗಿದ್ದು ತನಗೆ ತಾನೇ ಮಹತ್ವ ಪೂರ್ಣವಾಗಿರುವುದರ ಜೊತೆಗೆ, ಆ ಕವಿ ಶಿಷ್ಯನ ಕೃತಿ ಸರ್ವಜ್ಞನ ಜೀವಿತಾವಧಿಯನ್ನು ಗುರುತಿಸಲು ಉತ್ತರ ಮುಖಿಯೂ ಆದುದು ಅತ್ಯಂತ ನೆಮ್ಮದಿಯ ಮಾತು" [೧೮] ಎಂದಿದ್ದಾರೆ.

"ಆರ್. ನರಸಿಂಹಾಚಾರ್ಯರಂತೆ ೧೮೦೦ಕ್ಕೆ ಹಿಂದೆ ಬರೆದ ಈತನ ಗ್ರಂಥದ ಓಲೆಯ ಪ್ರತಿಗಳು ದೊರೆಯುವುದರಿಂದಲೂ ಅವುಗಳಲ್ಲಿ ಹಳೆಗನ್ನಡ 'ಐ' ಅಕ್ಷರವಿರುವುದರಿಂದಲೂ ಈತನ ಕಾಲವು ಸುಮಾರು ೧೭೦೦ಕ್ಕೆ ಈಚೆಗೆ ಇರಲಾರದೆಂದು ಊಹಿಸಬಹುದು".[೧೯]

ಉತ್ತಂಗಿ ಚನ್ನಪ್ಪನವರು ಕಿಟ್ಟೆಲ್ ಮೊದಲಾದವರ ಅಭಿಪ್ರಾಯಗಳನ್ನು ವಿಮರ್ಶಿಸಿ "ಸಂಶಯಾಸ್ಪದವಾದ ಮೂಲ ಕಾಲಗಳಲ್ಲಿ (೧೮, ೧೭, ೧೬ ನೆಯ ಶತಮಾನಗಳು) ೧೬ನೆಯ ಶತಮಾನವೇ ಕವಿಯ ಕಾಲಮೆಂದು ತಿಳಿಯುವುದು ಉತ್ತಮ ಪಕ್ಷವಾಗಿ ತೋರುತ್ತದೆ" [೨೦] ಎಂದಿದ್ದಾರೆ.

ಇ.ಪಿ. ರೈಸ್ ಸರ್ವಜ್ಞನ ಕಾಲದ ಬಗೆಗೆ ಚರ್ಚಿಸಿಲ್ಲ. ಅವನ ಹೆಸರಿನ ಮುಂದೆ ೧೬೦೦ಕ್ಕೆ ಪ್ರಶ್ನಾರ್ಥಕ ಚಿಹ್ನೆ ಹಾಕಿದ್ದಾರೆ.[೨೧] ರಂ.ಶ್ರೀ. ಮುಗಳಿಯವರು ಸರ್ವಜ್ಞನನ್ನು 'ಕುಮಾರ ವ್ಯಾಸಯುಗ'ದ (೧೫-೧೯ನೆಯ ಶತಕ) ಕವಿಗಳಲ್ಲಿ ಸೇರಿಸಿದ್ದು ಅವನ ಕಾಲದ ಬಗೆಗೆ ಚರ್ಚಿಸಿಲ್ಲ. ಆದಾಗ್ಯೂ ಕುಮಾರವ್ಯಾಸಯುಗದ ಪ್ರಮುಖ ಗ್ರಂಥಕಾರರ ಪಟ್ಟಿಯಲ್ಲಿ ಸರ್ವಜ್ಞನ ಕಾಲವನ್ನು ಕ್ರಿ.ಶ. ಸು. ೧೭೦೦ ಎಂದು ಸೂಚಿಸಿದ್ದಾರೆ.[೨೨]

ಎಲ್. ಬಸವರಾಜು ಅವರು ಕ್ರಿ.ಶ. ೭-೩-೧೬೩೬ರಲ್ಲಿ ವೆಂಕನಿಂದ ಪ್ರತಿಮಾಡಲ್ಪಟ್ಟ ಸರ್ವಜ್ಞನ ಹಸ್ತ ಪ್ರತಿಯೊಂದನ್ನು ವಿದ್ವಾಂಸರ ಗಮನಕ್ಕೆ ತಂದಿರುವುದಲ್ಲದೆ ಅದನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ೧೯ ಪದ್ಧತಿಗಳಿದ್ದು ೯೩೭ ತ್ರಿಪದಿಗಳಿವೆ. ಈ ಪ್ರತಿಯ ಒಂದು ಗಮನಾರ್ಹ ಅಂಶವೆಂದರೆ ಇಲ್ಲಿನ ತ್ರಿಪದಿಗಳ ಅಂಕಿತ 'ಸರ್ವಜ್ಞ' ಎನ್ನುವುದಕ್ಕೆ ಬದಲಾಗಿ 'ಪರಮಾರ್ಥ' ಎಂದಿದೆ.[೨೩] ವಿರಕ್ತ ತೋಂಟದಾರ್ಯ (ಸು. ೧೫೬೦) 'ಅನಾದಿ ವೀರಶೈವ ಸಂಗ್ರಹ'ವೆಂಬ ಕೃತಿಯನ್ನು ಕನ್ನಡದಲ್ಲಿ, ಗದ್ಯದಲ್ಲಿ ರಚಿಸಿದ್ದಾನೆ.[೨೪] ಈತ ತನ್ನ ಕೃತಿಯ ನಡುವೆ ಅಲ್ಲಲ್ಲಿ ಸಂಸ್ಕೃತ, ತೆಲುಗು, ಕನ್ನಡ ಭಾಷೆಗಳ ಕೃತಿಗಳಿಂದ ಉಲ್ಲೇಖಿಸಿದ್ದಾನೆ. ಕನ್ನಡದಲ್ಲಿ ಮಗ್ಗೆ ಮಾಯಿದೇವನ (ಕ್ರಿ.ಶ. ೧೪೩೦) 'ಶಿವಾಧವ', 'ಶಿವವಲ್ಲಭ' ಶತಕಗಳಿಂದ ಶಂಕರದೇವನ (ಸು. ೧೫೦೦) 'ಗುರುಶಂಕರೇಶ್ವರ ಶತಕ'ದಿಂದ ಹಾಗೂ ಸರ್ವಜ್ಞ ತ್ರಿಪದಿಗಳಿಂದ ಉದ್ಧರಿಸಿರುವನು.

---

೧೮. ಅಡಿಟಿಪ್ಪಣಿ ೯ರಂತೆ, ಪುಟ-೧೩೦ರಿಂದ ೧೩೧
೧೯. ಅಡಿಟಿಪ್ಪಣಿ ೧೦ರಂತೆ, ಪುಟ-೫೩೩
೨೦. ಉದ್ಧೃತ- ಅಡಿಟಿಪ್ಪಣಿ ೭ರಂತೆ, ಪುಟ-೨೬
೨೧.ಅಡಿಟಿಪ್ಪಣಿ ೧೨ರಂತೆ, ಪುಟ-೭೩
೨೨. ಅಡಿಟಿಪ್ಪಣಿ ೧೩ರಂತೆ, ಪುಟ-೨೧೬
೨೩. ಪರಮಾರ್ಥ (ಸರ್ವಜ್ಞನ ವಚನಗಳು), ಸಂ-ಎಲ್. ಬಸವರಾಜು
೨೪. ಪ್ರಕಾಶಕರು-ಎಂ.ಅಣ್ಣಾಜಪ್ಪ, ಮೈಸೂರು

ಇಲ್ಲಿ ಉಲ್ಲೇಖವಾಗಿರುವ ೫ ಸರ್ವಜ್ಞ ತ್ರಿಪದಿಗಳಲ್ಲಿ

ಮೂರ್ಖಂಗೆ ಬುದ್ಧಿಯನು - ಪುಟ ೩೭

ಜಾತಿ ಜಾತಿಗೆ ವೈರಿ - ಪುಟ ೩೯

ಆನೆ ನೀರಾಟದಲಿ - ಪುಟ ೪೨

ಎಂಬ ೩ ತ್ರಿಪದಿಗಳು ವೆಂಕನ ಪ್ರತಿಯಲ್ಲಿ ಕ್ರಮವಾಗಿ ೮೮೭, ೨೦೩, ೧೯೯ನೆಯ ಕ್ರಮಾಂಕದಲ್ಲಿನವೇ ಆಗಿವೆ ಎಂಬುದು ಗಮನಾರ್ಹ ಸಂಗತಿ.

ಇದರಿಂದ ಸರ್ವಜ್ಞನ ಕಾಲವನ್ನು ವೆಂಕನ ಪ್ರತಿಯ ಕಾಲವಾದ ಕ್ರಿ.ಶ. ೧೬೩೬ರಿಂದ ವಿರಕ್ತ ತೋಂಟದಾರ್ಯನ ಕಾಲವಾದ ಕ್ರಿ.ಶ. ೧೫೬೦ರ ಹಿಂದಕ್ಕೆ ಹಾಕಬೇಕಾಗುತ್ತದೆ.

"ವಿರತ ಮಹಲಿಂಗನ ಗುರುಬೋಧಾಮೃತದ ರಚನೆಯಲ್ಲಿ ಸರ್ವಜ್ಞನ ತ್ರಿಪದಿಗಳಿಂದಾಗಿರುವ ಪ್ರಭಾವವನ್ನು ಈಗಾಗಲೇ ವಿದ್ವಾಂಸರು ಗುರುತಿಸಿದ್ದಾರೆ".[೨೫] ವಿರತ ಮಹಲಿಂಗ ಸರ್ವಜ್ಞನ ಶಿಷ್ಯನೆಂಬ ಸಂಗತಿಯನ್ನು ಎಲ್. ಬಸವರಾಜು ಅವರು ತಮ್ಮ ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ. "ಅಲ್ಲದೆ ವಿರತ ಮಹಾಲಿಂಗ ಪ್ರಸ್ತಾಪಿಸಿರುವ ಬಿಟ್ಟ ಮಂಡೆಯ ಪ್ರಭುವಿನ ಕಾಲ ಸರಿಸುಮಾರು ಎರಡನೇ ಗುಬ್ಬಿ ಮಲ್ಲಣ್ಣನ ಕಾಲವೆಂದು (ಕ್ರಿ.ಶ. ೧೫೩೦) ಅದೇ ಲೇಖನದಲ್ಲಿ ತಿಳಿಸಿದ್ದಾರೆ.

ಗುರುಬೋಧಾಮೃತದಲ್ಲಿ ಉಲ್ಲೇಖಿತವಾದ ಬಿಟ್ಟ ಮಂಡೆಯ ಪ್ರಭು ಶಾ.ಶ. ೧೩೯೬ನೆಯ (ಕ್ರಿ.ಶ. ೧೪೭೪) ಗುಮ್ಮಳಾಪುರದ ತಾಮ್ರ ಶಾಸನೋಕ್ತನಾಗಿದ್ದಾನೆ".[೨೬] ಇವನನ್ನು ಹೆಸರಿಸುವ ವಿರತ ಮಹಲಿಂಗ ಒಂದು ತಲೆಮಾರಿನ ಕಾಲದಷ್ಟಾದರೂ ಈಚಿನವನಾದರೆ ವಿರತ ಮಹಲಿಂಗನ ಕಾಲ ಕ್ರಿ.ಶ. ೧೫೦೪ ಆಗುತ್ತದೆ. ಹೀಗಾಗಿ ವಿರತ ಮಹಲಿಂಗನ ಗುರು ಮತ್ತು ಹಿರಿಯ ಸಮಕಾಲೀನನಾದ ಸರ್ವಜ್ಞ ಕ್ರಿ.ಶ. ೧೫೦೦ ವೇಳೆಯಲ್ಲಿ ಜೀವಿಸಿದ್ದನೆಂದು ಭಾವಿಸಬಹುದು.

ಸರ್ವಜ್ಞನ ಸ್ಥಳ, ಜೀವನ ಪರಿಚಯ :

"ಸರ್ವಜ್ಞ ತಾನು ಜನಿಸಿದ ಪ್ರದೇಶವನ್ನು ಕುರಿತು 'ಜಾತಿಸ್ಮರಣ ಪದ್ಧತಿ'ಯಲ್ಲಿನ ಈ ಕೆಳಕಂಡ ತ್ರಿಪದಿಗಳಲ್ಲಿ ಖಚಿತವಾಗಿ ತಿಳಿಸಿದ್ದಾನೆ".[೨೭]

ಮಾಸನೂರ ಬಸವರಸ । ಕೂಸನೀಶನ ಕೇಳಲು
ಕಾಶಿಯೀಶನೊಳು ಪಡೆದವರ - ವದುನಡುವೆ
ಸೂಸಿತೆಂತೆನಲು ಪರಮಾರ್ಥ

ಅಂಬಲೂರೊಳೆಸೆವ । ಕುಂಬಾರಸಾಲೆಯಲಿ
ಇಂಬಿನ ಕಳೆ(ಯ) ಮಾಳಿಯೊಳು - ಬಸವರಸ
ನಿಂಬೆಟ್ಟನೆನ್ನ ಪರಮಾರ್ಥ.

೨೫. ಅಡಿಟಿಪ್ಪಣಿ ೯ರಂತೆ, ಪುಟ-೧೩೦ ಮತ್ತು ಪೀಠಿಕೆ-ಗುರುಬೋಧಾಮೃತಂ, ಸಂ-ಡಿ.ಸಿದ್ಧಗಂಗಯ್ಯ, ಪಿ. ಮರಿಬಸವಾರಾಧ್ಯ.
೨೬. ಶಾಸನಗಳಲ್ಲಿ ಶಿವಶರಣರು, ಸಂ-ಎಂ.ಎಂ. ಕಲಬುರ್ಗಿ, ಪುಟ-೧೪೭ರಿಂದ ೧೪೮
೨೭. ಅಡಿಟಿಪ್ಪಣಿ ೨೨ರಂತೆ, ಪರಮಾರ್ಥ, ಎಲ್. ಬಸವರಾಜು

ಇದರಿಂದ ಸರ್ವಜ್ಞ ಮಾಸನೂರ ಬಸವರಸ ಮತ್ತು ಅಂಬಲೂರ ಮಾಳಿಯರಿಗೆ ಜನಿಸಿದ ಸಂಗತಿ ಸ್ಪಷ್ಟವಾಗುತ್ತದೆ. ಅಲ್ಲದೆ ತನ್ನ ಬಾಲ್ಯವನ್ನು ಅಲ್ಲಿಯೇ ಕಳೆದನೆಂದು ಭಾವಿಸಬಹುದಾಗಿದೆ. ಹೀಗೆ ಮೇಲೆ ಉಕ್ತವಾಗಿರುವ ಮಾಸನೂರು, ಅಂಬಲೂರುಗಳು ಇಂದಿನ ಧಾರವಾಡ ಜಿಲ್ಲೆಯಲ್ಲಿದ್ದು ಅವುಗಳಿಗೆ ಪರಸ್ಪರ ೬ ಮೈಲಿಗಳ ಅಂತರವಿದೆ. ಅಂಬಲೂರಿಗೆ ಇಂದು ಅಬ್ಬಲೂರೆಂಬ ಹೆಸರಿದ್ದು ಇದು ಪ್ರಾಚೀನ ಐತಿಹಾಸಿಕ ಸ್ಥಾನವಾಗಿದ್ದುದಲ್ಲದೆ ಜೈನ, ಶೈವರುಗಳಿಗೆ ಸಂಬಂಧಿಸಿದ ಪ್ರಸಿದ್ಧ ಕ್ಷೇತ್ರವಾಗಿದ್ದಿತು.

ಚನ್ನಪ್ಪ ಉತ್ತಂಗಿಯವರು ಸರ್ವಜ್ಞನು ಅಬ್ಬಲೂರು - ಮಾಸನೂರು ಪ್ರದೇಶದವನೆಂಬುದಕ್ಕೆ ಈ ಕೆಳಕಂಡ ಕೆಲವು ಆಂತರಿಕ ಕಾರಣಗಳನ್ನು ಕೊಟ್ಟಿದ್ದಾರೆ.

೧. ಸರ್ವಜ್ಞನ ತ್ರಿಪದಿಗಳಲ್ಲಿ ಒರಸೆ, ಬಮ್ಮಿಗೆ, ದಾಯ, ಶಾನೆ, ಕಮ್ಮ, ಬೆರಣಿ, ಬಾಟೆ ಮೊದಲಾದ ಶಬ್ದಗಳು ಮೈಸೂರು - ಧಾರವಾಡ ಗಡಿನಾಡಿನ ಪ್ರದೇಶದವು.

೨. ಅಲ್ಲ ಅರಸಿನ ಉಂಟು । ಬೆಲ್ಲಗೆಣಸುಗಳುಂಟು
ನೆಲ್ಲೋಗರುಂಟು - ಮಲೆನಾಡ
ನಲ್ಲೆಂದರಾರು ಪರಮಾರ್ಥ.[೨೮]

ಎಂದು ಮಲೆನಾಡನ್ನು ಮೆಚ್ಚಿರುವುದನ್ನು ನೋಡಿದರೆ ಸರ್ವಜ್ಞನಿಗೆ ತನ್ನ ಜನ್ಮಭೂಮಿಯಾದ ಮಲೆನಾಡಿನ ಬಗೆಗೆ ವಿಶೇಷ ಅಭಿಮಾನವಿದೆ. ಅಲ್ಲದೆ ಸರ್ವಜ್ಞನು ನೆಲದೊಳಗೆ ಹಣ್ಣು ಬಿಡುವ ಹಲಸು, ಪಡಿಭತ್ತ, ಮಂಜಿನ ಮಳೆ ಮೊದಲಾದ ಮಲೆನಾಡಿನ ವಿಲಕ್ಷಣತೆಗಳನ್ನು ವಿಶೇಷವಾಗಿ ವರ್ಣಿಸಿರುವುದರಿಂದ ಅವನು ಅದೇ ನಾಡಿನವನಾಗಿರಬೇಕು.

೩. ಸರ್ವಜ್ಞನು ತ್ರಿಪದಿಗಳಲ್ಲಿ ಹೊಳೆ, ತೆಪ್ಪ, ಮೀನಿನ ಬಲೆ, ಲಂಗರ ಹಾಕಿದ ದೋಣಿ (ಛೈತ್ರ) ಮೊದಲಾದವುಗಳನ್ನು ಬಹಳವಾಗಿ ವರ್ಣಿಸಿರುವನು.

ತೆಪ್ಪವನು ನಂಬಿದರೆ । ತಪ್ಪದೆ ತಡಿಯಕ್ಕು
ಸರ್ಪಭೂಷಣನ ನೆನದರೆ - ಭವಮಾಲೆ
ತಪ್ಪಿ ಬದುಕುವರು ಪರಮಾರ್ಥ[೨೯]

ಗಡಿನಾಡಿನ ಸುಂಕ । ತಡಿಯಲಂಬಿಗಗೂಲಿ
ಮಡದಿಯರೊತ್ತೆ ಒಳಲಂಚ - ಇವು ನಾಲ್ಕು
ಅಡಿಯಟ್ಟರಿಲ್ಲ ಪರಮಾರ್ಥ[೩೦]

ಇಲ್ಲಿ ಕವಿಯು ಬಳಸಿರುವ ಉಪಮೆಗಳು ಮಲೆನಾಡು ಮತ್ತು ನದಿಯ ತೀರದ ಪ್ರದೇಶದಲ್ಲಿನ ಸನ್ನಿವೇಶ ದೃಶ್ಯಗಳಾಗಿವೆ. ಆದುದರಿಂದ ಸರ್ವಜ್ಞನು ಮಾಸನೂರಿನ ಎಡಬಲದ ಕುಮದ್ವತಿ ನದಿಯ ತೀರದ ನಿವಾಸಿಯಾಗಿದ್ದನೆಂದು ಊಹಿಸಬಹುದಷ್ಟೆ.

ಜಿ.ಎಂ. ಉಮಾಪತಿ ಶಾಸ್ತ್ರಿಗಳು ಸರ್ವಜ್ಞ ಅಬ್ಬಲೂರು- ಮಾಸೂರು ನಾಡಿನವನೇ

---

೨೮. ಅಡಿಟಿಪ್ಪಣಿ ೨೨ರಂತೆ, ಕ್ರಮಾಂಕ-೭೮೮
೨೯. ಅಡಿಟಿಪ್ಪಣಿ ೨೨ರಂತೆ, ಕ್ರಮಾಂಕ-೮೮೩
೩೦. ಅಡಿಟಿಪ್ಪಣಿ ೨೨ರಂತೆ, ಕ್ರಮಾಂಕ-೭೭೮

ಎನ್ನಲು ಈ ಕೆಳಕಂಡ ಅಂಶಗಳನ್ನು ಪ್ರಸ್ತಾಪಿಸಿರುವರು. ಅಬ್ಬಲೂರು - ಮಾಸೂರು ನಾಡು ಹುಟ್ಟು ವೀರರ ಜನ್ಮ ಭೂಮಿಯಾಗಿದ್ದಿತೆನ್ನುವುದಕ್ಕೆ ಆ ಊರುಗಳಲ್ಲಿ ಈಗಲೂ ಹೆಜ್ಜೆ-ಹೆಜ್ಜೆಗೂ ನೆಟ್ಟಿರುವ ವೀರರ ಮತ್ತು ಮಹಾಸತಿಯರ ಸ್ಮಾರಕ ಕಲ್ಲುಗಳೇ ಸಾಕ್ಷಿಯಾಗಿವೆ. ಸರ್ವಜ್ಞನು ಈ ನಾಡ ಸಾವಿಗಂಜದ ರಣವೀರರನ್ನು ಕಣ್ಣುಟ್ಟಿ ಕಂಡಿರಬೇಕು, ಅಂತೆಯೇ ಅವನ ತ್ರಿಪದಿಗಳಲ್ಲಿ ಅವರನ್ನು ಮನಸಾರೆ ಹೊಗಳಿದ್ದಾರೆ.

ಜಾತಿ ವೀರರು ಸತ್ತು । ಭೀತರೇನುಳಿದರೆ
ಜಾತಸ್ಸಮರಣಂಧ್ರುವವೆಂಬ - ಶ್ರುತಿಯಿರಲು
ಯಾತಕಂಜುವರು ಪರಮಾರ್ಥ.

ಅಡಿಯ ಮುಂದಿಡೆ ಸ್ವರ್ಗ । ಅಡಿಯ ಹಿಂದಿಡೆ ನರಕ
ಅಡಿಗಶ್ವಮೇಧ ಫಲಸ್ವಾಮಿ - ಕಾರ್ಯಕ್ಕೆ
ಮಡಿಯಲೇ ಬೇಕು ಪರಮಾರ್ಥ.[೩೧]

ತುರವಕಾಳಗ (ಗೋಗ್ರಹಣ), ಕಮರಿ, ಮಲ್ಲಯುದ್ಧ ಮೊದಲಾದ ಹೋರಾಟಗಳಲ್ಲಿ ಕಾದಿ ಮಡಿದು ವೀರ ಸ್ವರ್ಗ ಪಡೆದ ರಣಧೀರರ ಶೌರ್ಯಮಯ ಜೀವನದ ಜೀವಂತ ಶಬ್ದ ಚಿತ್ರಗಳನ್ನು ಸರ್ವಜ್ಞನ ತ್ರಿಪದಿಗಳಲ್ಲಿ ಕಾಣುತ್ತೇವೆ. ಅಲ್ಲದೆ 'ಕೊಲಲಾಗದೆಂಬ ಜೈನರ ಮತವೆನ್ನ ತಲೆಯ ಮೇಲಿರಲಿ' - ಎಂದು ಜೈನ ಧರ್ಮವನ್ನು ಮನದುಂಬಿ ಹೊಗಳಿದ ಸರ್ವಜ್ಞನು

ಮುತ್ತು-ಮೂರುತಿಯೇಕೆ । ತೊತ್ತೇಕೆ ಗುರುಗಳಿಗೆ
ಬತ್ತಿದ ಕೆಬಿಗೆ ಮೃಗವೇಕೆ - ಸವಣರಿಗೆ
ಮಿಥ್ಯತಾನೇಕೆ ಪರಮಾರ್ಥ

ಕೊಲ್ಲದಿರ್ಪುದೆ ಧರ್ಮ । ಬಲ್ಲರಿಗೆ ಸಮ್ಮತವು
ಅಲ್ಲದೆ ಮೀರಿ ಕೊಲುವವನು - ನರಕದಲಿ
ನಿಲ್ಲದೆ ಮಾಣ ಪರಮಾರ್ಥ.[೩೨]

ಎಂದು ನುಡಿದಿರುವುದಕ್ಕೆ ಕಾರಣವಿಲ್ಲದಿಲ್ಲ. ಶರಣರು ತಪ್ಪಾಡಿದಂದು, ಕೊಲೆ ಮಾಡಿದಂದು ಪ್ರಳಯದ ವಿಪರೀತರಳಾದವೆಂದು ಸೂಚ್ಯವಾಗಿ ನುಡಿರುವ ಸರ್ವಜ್ಞನ ವಚನಗಳು ಏಕಾಂತ ರಾಮಯ್ಯಗಳ ಕಾಲದ ಘಟನೆಯನ್ನು ನೆನಪಿಗೆ ತರುವಂತಿವೆ ಎಂದಿದ್ದಾರೆ.

ಸರ್ವಜ್ಞ, ಅಬ್ಬಲೂರು - ಮಾಸೂರುಗಳ ಪರಿಸರದವನೆ ಆದರೂ ಆತ ಸಮಗ್ರ ಕನ್ನಡನಾಡನ್ನು ಸಂಚರಿಸಿದ್ದಾನೆ. ಅಬ್ಬಲೂರು ಧಾರವಾಡ ಜಿಲ್ಲೆಯ ಹಿರೇಕೆರೂರಿಗೆ ಸಮೀಪದಲ್ಲಿರುವ

೩೧. ಅಡಿಟಿಪ್ಪಣಿ ೨೨ರಂತೆ, ಕ್ರಮಾಂಕ-೫೮೮, ೫೮೯
೩೨. ಅಡಿಟಿಪ್ಪಣಿ ೨೨ರಂತೆ, ಕ್ರಮಾಂಕ-೫೯೭, ೨೫೮

ಒಂದು ಗ್ರಾಮವಾಗಿದೆ. ಕವಿಯ ಪರಿಚಯಕ್ಕೆ ಹೊರಟಾಗ ಅವನ ಮತವನ್ನು ವಿಚಾರ ಮಾಡುವುದು ಒಂದು ಸಂಪ್ರದಾಯ ಸರ್ವಜ್ಞನು ತನ್ನ ವಚನಗಳಲ್ಲಿ ಅನೇಕ ಸಲ ಶಿವನನ್ನು ಭಕ್ತಿಯಿಂದ ನೆನೆದಿದ್ದಾನೆ. ಅಲ್ಲದೆ ಗುರು-ಲಿಂಗ-ಜಂಗಮ, ಷಟಸ್ಥಲ, ಅಷ್ಟಾವರಣಗಳನ್ನು ವಿವರವಾಗಿ ಹೇಳಿದ್ದಾನೆ. ಅಂತೆಯೇ ಎ.ಆರ್. ಕೃಷ್ಣಶಾಸ್ತ್ರಿಗಳವರು "ಸರ್ವಜ್ಞನು ವೀರಶೈವನೆನ್ನಬಹುದು" [೩೩] ಎಂದಿದ್ದಾರೆ.

ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಈಗಿನ ಮಟ್ಟಿಗೆ ಸರ್ವಜ್ಞನ ಹುಟ್ಟಿದ ಊರು ಅಬ್ಬಲೂರು, "ಅವನ ಕಾಲ ಕ್ರಿ.ಶ. ೧೩೦೦ ಮತ್ತು ೧೫೦೦ರ ಮಧ್ಯವೆಂದು ಪರಿಗಣಿಸಬಹುದು".[೩೪]

ಸರ್ವಜ್ಞರ ಸಂಕ್ಷಿಪ್ತ ವಿಚಾರಗಳು : (ವೈಯಕ್ತಿಕ)

ಕಾಲ : ಕ್ರಿ.ಶ. ಸು - ೧೩೦೦ರಿಂದ ೧೫೦೦ರ ಮಧ್ಯಭಾಗ.

ಹೆಸರು : ಸರ್ವಜ್ಞ

ತಂದೆ : ಬಸವರಸ

ತಾಯಿ : ಮಾಳಿ

ಜನನ ಸ್ಥಳ : ಅಬ್ಬಲೂರು

ಅಂಕಿತ : ಸರ್ವಜ್ಞ- ಪರಮಾರ್ಥ

ಸಾಹಿತ್ಯ ಕೃಷಿ : ವಚನಗಳು

ಛಂದೋರೂಪ : ತ್ರಿಪದಿ

ಗುರು : ಸೋಮಶಂಕರ

---

೩೩. ಸರ್ವಜ್ಞ ಎ.ಆರ್. ಕೃಷ್ಣಶಾಸ್ತ್ರಿ ಪುಟ-೮

೩೪. ಸರ್ವಜ್ಞ ಕವಿ - ಜೀವನ ಹಾಗೂ ಕಾವ್ಯ, ಜಿ.ಎಂ. ಉಮಾಪತಿಶಾಸ್ತ್ರಿ ಪುಟ-೨೪

ಅಧ್ಯಾಯ - ೩

ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಕಳಕಳಿ

ಬಸವಣ್ಣನವರು ಸಮಾಜದ ಬಗ್ಗೆ ವಿಚಾರ ಮಾಡಲು ಕಾರಣವೇನು ? ಆತ್ಮೋನ್ನತಿಯ ಮಾರ್ಗವನ್ನಷ್ಟೇ ಅವರು ಹೇಳಿದ್ದರೆ ಆಗುತ್ತಿರಲಿಲ್ಲವೇ ಎಂದು ಕೇಳಬಹುದು. ನಿಜ, ಹಾಗಾಗ ಬಹುದಿತ್ತು. ಹಾಗಾಗಿದ್ದರೆ ಬಸವಣ್ಣನವರಿಗೆ ಈಗ ದೊರೆತ ಸ್ಥಾನ ದೊರೆಯುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಬಸವಣ್ಣನವರ ಸಾಮಾಜಿಕ ಕಳಕಳಿಯನ್ನು, ವಿಚಾರವಾದವನ್ನು ಪ್ರಸ್ತಾಪಿಸಬೇಕಾಗಿದೆ. 'ಸಾಮಾಜಿಕ' ಎಂಬುದು ಒಂದು ಪ್ರತ್ಯೇಕವಾದ ಅಂಶವೆಂದೂ, ಇದು ಮತ್ತಿತರ ಅಂಶಗಳಿಗಿಂತ ಭಿನ್ನವಾದುದೆಂದೂ ಸಾಮಾನ್ಯವಾಗಿ ಭಾವಿಸಿ, ಈ ನಂಬುಗೆಯಿಂದ ಬಸವಣ್ಣನವರ ಚಿಂತನೆಗಳನ್ನು ವಿಶ್ಲೇಷಿಸಲಾಗುತ್ತದೆ. ಆದರೆ ಇದು ಸಾಧುವಲ್ಲ. ಏಕೆಂದರೆ ಸಾಮಾಜಿಕ ಎಂಬುದು ವ್ಯಾಪಕವಾದದ್ದು, ಜೀವನದ ಎಲ್ಲ ಅಂಶಗಳನ್ನೂ ತನ್ನೊಳಗೆ ಇರಿಸಿಕೊಂಡಿರುವಂಥದ್ದು. ಧಾರ್ಮಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ನೈತಿಕ, ಇತ್ಯಾದಿಗಳೆಲ್ಲಾ ಸಾಮಾಜಿಕ ವರ್ಣ ವೈವಿಧ್ಯಗಳು.

ಸಾಮಾಜಿಕದಂತೆ ಈ ವರ್ಣವೈವಿಧ್ಯಗಳೂ ತಮತಮಗೆ ಸೂಕ್ತವಾದ ಮೌಲ್ಯಗಳನ್ನು ಪಡೆದಿರುತ್ತವೆ. ಮತ್ತು ತಮ್ಮೊಳಗೆ ಈ ಮೌಲ್ಯಗಳನ್ನೂ, ಇತರ ವೈಲಕ್ಷಣ್ಯಗಳನ್ನೂ ಹಂಚಿಕೊಂಡಿರುತ್ತವೆ. ಕಾಲದೇಶಗಳಿಗೆ ಅನುಗುಣವಾಗಿ ಇವುಗಳಲ್ಲಿ ಯಾವುದಾದರೂ ಒಂದು ಬಲಿಷ್ಠಗೊಂಡು ಇಡೀ ಸಮಾಜದ ಮೇಲೆ ತನ್ನ ಪ್ರಭಾವ ಮುದ್ರೆಯನ್ನು ಒತ್ತುತ್ತದೆ. ಧರ್ಮ ನಮ್ಮ ಜೀವನ ಸರ್ವಸ್ವವನ್ನೂ ನಿಯಂತ್ರಿಸುವ ಪ್ರಬಲ ಶಕ್ತಿಯಾಗಿ ಬಹಳ ಹಿಂದೆಯೇ ಪರಿಣಮಿಸಿತು. ಅದೇ ನಮ್ಮ ಶಕ್ತಿಯೂ ಆಯಿತು; ದೌರ್ಬಲ್ಯವೂ ಆಯಿತು. ಕಾಲಕ್ರಮದಲ್ಲಿ ಧರ್ಮ ಎಲ್ಲರನ್ನು ಒಟ್ಟುಗೂಡಿಸುವ ವೈಚಾರಿಕ ಶಕ್ತಿಯಾಗುವುದಕ್ಕೆ ಬದಲಾಗಿ ಸಮಾಜವನ್ನು ಹರಿದು ಹಂಚುವ ಜಡ ವ್ಯವಸ್ಥೆಯಾಗಿ ಪರಿಣಮಿಸಿತು. ಸಾಮಾಜಿಕ ಮೇಲು-ಕೀಳುಗಳೂ ಆರ್ಥಿಕ ಏರು-ಪೇರುಗಳೂ ಧಾರ್ಮಿಕ ಅಂಗೀಕಾರವನ್ನು ಪಡೆದವು. ಧರ್ಮಶಾಸ್ತ್ರಗಳು ಆಯಾವರ್ಣಗಳ ಕರ್ತವ್ಯವನ್ನು ಖಚಿತಗೊಳಿಸಿದವು. ಮೇಲು ವರ್ಣಗಳಲ್ಲಿ ನೀವು ಸ್ವಲ್ಪ ಹೆಚ್ಚು-ಕಡಿಮೆಯಾದರೂ ಕೆಳವರ್ಗಗಳಂತೂ ಅದನ್ನು ಮೀರಿ ನಡೆಯುವ ಹಾಗಿರಲಿಲ್ಲ.

ಹೀಗೆ ನಮ್ಮ ಧರ್ಮ, ಒಂದು ಕಡೆಯಲ್ಲಿ ಚತುರ್ವರ್ಣಗಳು, ಮೇಲು-ಕೀಳುಗಳು ಪುರೋಹಿತಶಾಹಿಯ ಹಿಡಿತದಲ್ಲಿದ್ದರೆ, ಇನ್ನೊಂದು ಕಡೆಯಲ್ಲಿ ಧರ್ಮದ ಉದಾತ್ತ ತತ್ವಗಳಿಂದ ವಂಚಿತರಾದ ಜನಸಾಮಾನ್ಯರಲ್ಲಿ ಅಂಧಶ್ರದ್ಧೆ, ಮೂಢನಂಬಿಕೆ, ನೂರಾರು ದೇವತೆಗಳಿಂದ ಕೂಡಿದ ಅರ್ಥಹೀನ ಆಚರಣೆಗಳೂ ರೂಢಿಯಲ್ಲಿದ್ದವು. ಕಾಳಿ, ಮಾರಿ, ದುರ್ಗಿ ಮೊದಲಾದ ದೇವತೆಗಳ ಉಗ್ರಉಪಾಸನೆಗಳೂ, ಬಲಿಗಳೂ ನಡೆಯುತ್ತಿದ್ದವು. ಜನಸಾಮಾನ್ಯರ ಧಾರ್ಮಿಕ ಆಚರಣೆಗಳನ್ನು ಮತ್ತು ಸಾಮಾಜಿಕ ವ್ಯವಹಾರಗಳನ್ನೂ ಜನಪ್ರಿಯ ಅಜ್ಞಾನ ನೂರಾರು ರೂಪಗಳಲ್ಲಿ ನಿಯಂತ್ರಿಸುತ್ತಿತ್ತು. ಅನೇಕ ವೇಳೆಗಳಲ್ಲಿ ಅವರ ಅಜ್ಞಾನವೇ ಉಳ್ಳವರ ಬಂಡವಾಳವಾಗುತ್ತಿತ್ತು. ಇದನ್ನು ಪ್ರತಿಭಟಿಸುವ ಪ್ರಯತ್ನವನ್ನು ಬೌದ್ಧ ಮತ್ತು ಜೈನ ಧರ್ಮಗಳು ಮಾಡಿದವು.

ಇಡೀ ವ್ಯವಸ್ಥೆಯನ್ನೇ ಪ್ರಶ್ನಿಸಿ ಅದರ ವಿರುದ್ಧ ಸಿಡಿದು ನಿಲ್ಲುವ ಮೊತ್ತಮೊದಲನೆಯ ಪ್ರಯತ್ನ ನಡೆದದ್ದೇ ಬಸವಣ್ಣನವರಿಂದ, ಅದು ವಚನ ಚಳುವಳಿಯ ಮೂಲಕ ಅನ್ಯಾಯವೆಂದು ಕಂಡದನ್ನು ಪ್ರತಿಭಟಿಸಿ ನಿಲ್ಲುವ ಕ್ರಾಂತಿಕಾರಿ ಮನೋಧರ್ಮ ಬಸವಣ್ಣನವರದು. ಚಿಕ್ಕಂದಿನಲ್ಲಿಯೇ ಉಪನಯನವನ್ನು ವಿರೋಧಿಸಿದ ಹುಟ್ಟು ಕ್ರಾಂತಿಕಾರಿ ಬಸವಣ್ಣನವರು. ಬಾಲ್ಯದಿಂದಲೇ ಪ್ರಾರಂಭವಾದ ಪ್ರತಿಭಟನೆ ಜೀವನದುದ್ದಕ್ಕೂ ಸಾಗಿ ಅಂದಿನ ಸಾಮಾಜಿಕ ಮೌಲ್ಯಗಳನ್ನು ಪ್ರತಿಭಟಿಸುತ್ತಾ ಪ್ರವಾಹಕ್ಕೆ ವಿರುದ್ಧವಾಗಿ ಈಜಬೇಕಾಯಿತು ಬಸವಣ್ಣನವರು.

ಮೇಲು-ಕೀಳುಗಳು ಅಂದು ಒಪ್ಪಿಕೊಂಡ ಮೌಲ್ಯವಾಗಿದ್ದವು. ಎಲ್ಲರು ಸಮಾನರು ಎನ್ನುವುದು ತತ್ವದಲ್ಲಿ ಮಾತ್ರ ಉಳಿದು ಎಲ್ಲರಿಗೂ ಸಮಾನ ಅವಕಾಶಗಳು ಎಂಬುದು ಕಲ್ಪನೆಗೂ ಮೀರಿದ ಕನಸಿನ ಮಾತಾಗಿತ್ತು. ಜೀವನದ ಉನ್ನತ ಸೌಲಭ್ಯಗಳು ಕೆಲವರಿಗೆ ಮಾತ್ರ ಸೀಮಿತವಾಗಿದ್ದವು. ಎಲ್ಲರಿಗೂ ವಿದ್ಯಾಭ್ಯಾಸ ಎನ್ನುವುದಂತೂ ಊಹೆಗೂ ಮೀರಿತ್ತು. ಶಿಕ್ಷಣ ಕೆಲವರಿಗೆ ಮಾತ್ರ ಸೀಮಿತವಾಗಿದ್ದು ವೇದ, ಉಪನಿಷತ್ತು ಮೊದಲಾದ ಗ್ರಂಥಗಳು ಕೆಲವರ ಗುತ್ತಿಗೆಯಾಗಿದ್ದವು.

ಅಂದಿನ ಪುರೋಹಿತಶಾಹಿ ಮತ್ತು ಅರಸೊತ್ತಿಗಳ ಪೋಷಕತ್ವದಲ್ಲಿ ದುರ್ವ್ಯವಸ್ಥೆಗೀಡಾಗಿದ್ದ ಸಾಮಾಜಿಕ ಜಡತೆ ಮತ್ತು ಸಾಂಪ್ರದಾಯಿಕ ವ್ಯಕ್ತಿನಿಷ್ಠೆ ಇವುಗಳ ಸಂಘರ್ಷಗಳನ್ನು ಸಮರ್ಪಕವಾದ ಮುಂದಾಲೋಚನೆಯಿಂದ ಪರಿಭಾವಿಸಿ ಸಮಾಜದ ಚಲನಶೀಲತೆಗಾಗಿ 'ಜಂಗಮ' ತತ್ವವನ್ನು ಬಸವಣ್ಣ ಸಾರಿದರು. ಇವರ ಜಂಗಮ ಭಾವ ಎರಡು ಅರ್ಥಗಳನ್ನೊಳಗೊಂಡಿದೆ. ಮೊದಲನೆಯದು ಸಮಾಜ, ಎರಡನೆಯದು ಸಮಾಜದ ತತ್ವಗಳನ್ನು ಪ್ರಚರಗೊಳಿಸಿ ಅನುಷ್ಠಾನದಲ್ಲಿ ತರಲು ಪ್ರಯತ್ನಿಸುವ ಹರಿಕಾರ-ಜಂಗಮ. ಸಮಾಜ ಮತ್ತು ಜಂಗಮಗಳೆರಡೂ ಅವಿನಾಭಾವ ಸಂಬಂಧ ಮತ್ತು ಅವಿನಾಭಾವ ಅಸ್ತಿತ್ವವನ್ನು ಹೊಂದಿವೆ.

ಧರ್ಮವನ್ನು ದೇವಾಲಯಗಳಿಂದ ಹೊರಗೆ ತಂದದ್ದು ಬಸವಣ್ಣನವರ ಮಹಾಸಾಧನೆ. ದೇವಾಲಯಗಳು ಅಂದಿನ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದವು. "ಹಬ್ಬ-ಹರಿದಿನಗಳಲ್ಲಿ ಜನ ಒಟ್ಟಾಗಿ ಸೇರುವ ಗ್ರಾಮಕೇಂದ್ರಗಳಾಗಿದ್ದವು. ಜೊತೆಗೆ ದೇವಾಲಯಗಳು ಅತಿಯಾಗಿ ಬೆಳೆದು ಪುರೋಹಿತಶಾಹಿಯ ಆಶ್ರಯಸ್ಥಾನಗಳೂ ಆಗಿದ್ದವು. ಶ್ರೀಮಂತಿಕೆಯ ಆಗರಗಳಾಗಿ ಎಲ್ಲ ಬಗೆಯ ಅಧಃಪತನಕ್ಕೆ ಕಾರಣಗಳಾಗಿದ್ದವು. ಕಲೆಯ ನೆಪದಲ್ಲಿ ಪ್ರಾರಂಭವಾದ ನರ್ತಕಿಯರ ಸೇವೆ ದೇವದಾಸಿ ಪದ್ಧತಿಯಾಗಿ ಬೆಳೆದು ದೇವಾಲಯಗಳನ್ನು ಕಲುಷಿತಗೊಳಿಸಿತ್ತು".[೧] ಆದ ಕಾರಣದಿಂದಲೇ ಬಸವಣ್ಣನವರು ಸ್ಥಾವರಕ್ಕೆ ಬದಲಾಗಿ ಜಂಗಮಕ್ಕೆ ಮಹತ್ವ ಕೊಟ್ಟರು ಮತ್ತು ತಮ್ಮ ವಚನದಲ್ಲಿ ಸ್ಥಾವರ ವಿರೋಧಿ ನಿಲುವನ್ನು ತಳೆಯುತ್ತಾರೆ.

ಉಳ್ಳವರು ಶಿವಾಲಯ ಮಾಡುವರು
ನಾನೇನ ಮಾಡುವೆ ಬಡವನಯ್ಯಾ
ಎನ್ನ ಕಾಲೆಕಂಭ ದೇಹವೆ ದೇಗುಲ

---

೧. ವಚನ ಚಳುವಳಿ, ಹೆಚ್. ತಿಪ್ಪೇರುದ್ರಸ್ವಾಮಿ, ಪುಟ-೨೧

ಶಿರವೆ ಹೊನ್ನ ಕಲಶವಯ್ಯ
ಕೂಡಲಸಂಗಮದೇವಾ, ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ಸ್ಥೂಲವಾಗಿ ಹೇಳುವುದಾದರೆ 'ಸ್ಥಾವರ'ವು ಎಲ್ಲ ಬಗೆಯ ಜನವಿರೋಧಿ ಮನೋಭಾವಕ್ಕೆ ಸಂಕೇತವಾಗಿಯೂ, 'ಜಂಗಮ'ವು ಬಸವಣ್ಣನು ಕಂಡರಿಸಿಕೊಂಡ ಜೀವಪರವಾದ ಧೋರಣೆಗೆ ಸಂಕೇತವಾಗಿಯೂ ನಿಲ್ಲುತ್ತದೆ. ಸಾಮಾಜಿಕ ಸ್ತರದಲ್ಲಿಯೂ ಬಸವಣ್ಣನ ಆಲೋಚನೆ ಸ್ಥಾವರ-ಜಂಗಮಗಳ ವೈರುಧ್ಯದ ಹಿನ್ನೆಲೆಯಲ್ಲಿಯೇ ನಡೆಯುತ್ತದೆ.

ಬಸವಣ್ಣನವರು ಧರ್ಮ ಯಾವುದು? ಎಂದು ವಿವರಿಸಿದ ಬಗೆ ಅತ್ಯುತ್ತಮವಾದುದು. ದಯೆ, ಧರ್ಮ, ವಿನಯಗಳು ಮಾನವ ಬದುಕಿನ ಕಲ್ಯಾಣಗುಣಗಳು ಎಂದು ಸಾರಿದರು. ಅಂತಹ ಉದಾತ್ತವಾದ ಭಾವನೆಗಳಿಗೆ ಅವರ ಈ ವಚನವನ್ನು ನೋಡಬಹುದು.

ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯು
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.

ದಯವಿಲ್ಲದ ಧರ್ಮ ಬಹುಕಾಲ ಬದುಕಲಾರದೆಂಬ ಸತ್ಯವನ್ನು ಬಸವಣ್ಣನವರು ಎತ್ತಿ ಹಿಡಿದಿದ್ದಾರೆ. ಚರಿತ್ರೆಯೂ ಇದಕ್ಕೆ ಉದಾಹರಣೆಯಾಗಿದೆ. 'ದಯೆ' ಎಂಬ ಮಾತು ಒಂದು ವಿಶಿಷ್ಟವೂ, ವಿಶಾಲವೂ, ಆದ ಅರ್ಥದಲ್ಲಿ ಹೇಳಲ್ಪಟ್ಟಿದೆ. "ಒಂದು ಧರ್ಮ ಉಳಿಯಬೇಕಾದರೆ, ಉಳಿದು ಬೆಳೆಯಬೇಕಾದರೆ ಸಕಲ ಪ್ರಾಣಿಗಳ ಬಗ್ಗೆಯೂ ಅನುಕಂಪ, ಕರುಣೆ ಇರಬೇಕು ಎಂಬ ಮಾತು ಲೋಕೋಪಯೋಗಿಯಾದುದು. ಆದುದರಿಂದಲೇ ಆ ದಯೆ ಧರ್ಮದ ಮೂಲ. ಮುಂದೆ ಅದು ಶಾಖೋಪಶಾಖೆಗಳಾಗಿ ಒಡೆದು ಬೆಳೆಯಬಹುದು".[೨] ಈ ಬಗೆಯ ಮಾತುಗಳು ಜನತೆಯ ಚಿತ್ತವನ್ನು ತಟ್ಟಿದವು, ಮುಚ್ಚಿದವು. ಬಸವಣ್ಣನವರು ನಿರ್ದಾಕ್ಷಿಣ್ಯವಾಗಿ, ನಿಷ್ಠುರವಾಗಿ ನುಡಿದರೂ ಅವರು ದಯೆಯ ದ್ಯೋತಕವಾಗಿದ್ದರು. ನಯ-ವಿನಯಗಳ ಸಾಕಾರ ರೂಪಿಯಾಗಿದ್ದರು. ಇವು ಇತರರಲ್ಲೂ ಇರಬೇಕೆಂದು ಬಯಸಿದ ವ್ಯಕ್ತಿ ಬಸವಣ್ಣ.

ಅಂದಿನ ಧಾರ್ಮಿಕ, ಸಾಮಾಜಿಕ ಪರಿಸರವನ್ನೂ ಜನಸಾಮಾನ್ಯರ ಅಜ್ಞಾನವನ್ನೂ ಕಂಡು ಬಸವಣ್ಣನವರು ಮರುಗಿದರು. ಧರ್ಮದ ಬಹುದೊಡ್ಡ ತತ್ವಗಳನ್ನು ಅದಕ್ಕೆ ವಿರುದ್ಧವಾಗಿ ಸಂಕುಚಿತ ನಡೆಯಲ್ಲಿ ತೊಡಗಿರುವ ಉತ್ತಮರನ್ನು ಕಂಡು ಕೆರಳಿ

ಏನಯ್ಯಾ, ವಿಪ್ರರು ನುಡಿದಂತೆ ನಡೆಯರು; ಇದೆಂತಯ್ಯಾ?
ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ!
ಕೂಡಲಸಂಗಮದೇವಯ್ಯಾ ಹೊರೆಯರ ಬಸುರಲ್ಲಿ

೨. ವಿವೇಚನೆ, ಹ.ಕ. ರಾಜೇಗೌಡ, ಪುಟ-೮೪

ವಿಪ್ರರು ಹುಟ್ಟಿ ಗೋಮಾಂಸವ ತಿಂಬುರೆಂಬುದಕ್ಕೆ ಇದೆ ದೃಷ್ಟ

ಎಂದು ಉದ್ಗಾರ ತೆಗೆಯುತ್ತಾರೆ.

ನಡೆ-ನುಡಿಗಳ ಸಂಬಂಧದಲ್ಲಿ ಹೊಲೆತನವನ್ನು ಗುರುತಿಸುವ ಬಸವಣ್ಣನವರು ಅಶುದ್ಧತೆಯನ್ನು ಹೊಸ ರೀತಿಯಲ್ಲಿ ವಿವರಿಸುತ್ತಾರೆ. ನುಡಿಗಿಂತ ಮೊದಲು ನಡೆಯನ್ನು, ಬೋಧನೆಗಿಂತ ಮೊದಲು ಸಾಧನೆಯನ್ನು ಬಸವಣ್ಣನವರು ಕಾರ್ಯಗತಗೊಳಿಸಿದರು.

ಬಸವಣ್ಣನವರ ವಚನಗಳು ಹಿಂದೂ ಧಾರ್ಮಿಕ, ಸಾಮಾಜಿಕ ವ್ಯವಸ್ಥೆಯು ರೂಪಿಸಿದ್ದ ಶುದ್ಧ-ಅಶುದ್ಧತೆಯ ಕಲ್ಪನೆಯನ್ನು ನಿರಾಕರಿಸುತ್ತವೆ. ಶಾಶ್ವತ ಅಶುದ್ಧತೆಯ ಒತ್ತಾಯಗಳಿಂದ ಸಾಮಾಜಿಕವಾಗಿ ಚಲಿಸಲಾಗದ ವರ್ಗವಾಗಿದ್ದ ಹಿಂದುಳಿದವರ ಬಗ್ಗೆ ಹೊಸ ಕಾಳಜಿಗಳನ್ನು ಬಸವಣ್ಣನವರ ವಚನಗಳಲ್ಲಿ ಕಾಣಬುಹುದು. "ಹುಟ್ಟೇ ಕಾರಣವಾಗಿ ಜಾತಿ ಹಾಗೂ ಅಸ್ಪ ೃಶ್ಯತೆಯ ಮಿತಿಗಳಿಗೆ ಒಳಗಾಗುತ್ತಿದ್ದ ಸ್ಥಾವರ ಹಾಗೂ ಕಠೋರ ನಿಯಮಗಳು ಇಲ್ಲಿ ತಿರುಗು-ಮುರುಗಾಗುತ್ತವೆ".[೩]

ಕೊಲುವನೇ ಮಾದಿಗ ಹೊಲಸು ತಿಂಬುವನೇ ಹೊಲೆಯ!
ಕುಲವೇನೊ ಅವಂದಿರ ಕುಲವೇನೊ?
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲಸಂಗನ ಶರಣರೆ ಕುಲಜರು!

ಜಾಗತಿಕ ಮಾನವನ ಹಕ್ಕು ಬಾಧ್ಯತೆಗಳ ಪ್ರಣಾಳಿಕೆಯ ಹಿನ್ನೆಲೆಯಲ್ಲಿ 'ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು' ಎಂಬ ಮಾತು ತೀರಾ ಸಹಜವಾಗಿ ಕಾಣಬಹುದು. ಆದರೆ ಎಂಟು ನೂರು ವರ್ಷಗಳ ಹಿಂದಿನ ಹಿಂದೂ ಸಮಾಜದಲ್ಲಿ ಇದು ಊಹಿಸಲಿಕ್ಕೂ ಆಗದ ಧರ್ಮದ್ರೋಹವಾಗಿ ಪರಿಗಣಿತವಾಗಿತ್ತು. ಅವರವರ ಕರ್ಮಕ್ಕನುಗುಣವಾಗಿ ಆಯಾ ವರ್ಣಜಾತಿಗಳಲ್ಲಿ ಜನ್ಮವೆತ್ತಿದ ಜನ, ಅದಕ್ಕನುಗುಣವಾಗಿ ನಡೆದುಕೊಳ್ಳುವುದೇ ಸನಾತನ ಧರ್ಮವಾಗಿತ್ತು. ಅದರ ಪ್ರಕಾರ ಶೂದ್ರರು, ಅಸ್ಪೃಶ್ಯರಿಗೆ ವಿದ್ಯಾಭ್ಯಾಸವಿರಲಿಲ್ಲ. ಅವರವರು ಕೈಗೊಂಡ ಉದ್ಯೋಗಗಳೇ ಜಾತಿಗಳಾಗಿ ಪರಿಣಮಿಸುತ್ತಿದ್ದವು.

ಇದನ್ನು ತೀವ್ರವಾಗಿ ಪ್ರತಿಭಟಿಸಿ ಅದಕ್ಕೆ ಮೊದಲ ಬಾರಿಗೆ ಪ್ರಬಲವಾದ ಏಟನ್ನು ಕೊಟ್ಟಿದ್ದು ಬಸವಣ್ಣ. "ಬಸವಣ್ಣನವರ ಯಾವುದೇ ವಿಚಾರವನ್ನು ಕುರಿತ ಪ್ರತಿಭಟನೆ, ತಿರಸ್ಕಾರಗಳಿಗೆ ಮೂಲಕಾರಣ ಆದರಲ್ಲಿ ಇರುವ ಮಾನವಕೃತ ವರ್ಣಶ್ರೇಣಿಯ ಕುಲ-ಜಾತಿ-ವರ್ಣ-ಲಿಂಗ ಭೇದಾದಿ ತಾರತಮ್ಯಗಳು".[೪] ಅದರಲ್ಲೂ ಮುಖ್ಯವಾಗಿ ಕಾರಣವಾಗಿದ್ದು ಜಾತಿ ವ್ಯವಸ್ಥೆ.

ಬಸವಣ್ಣನವರಲ್ಲಿ ಅಗಾಧ ಸಿಟ್ಟು, ಪ್ರತಿರೋಧ, ಅಸಹನೆಗಳು ಉಂಟಾಗಲು ಕಾರಣ ವರ್ಣ ವ್ಯವಸ್ಥೆ. ಜಾತೀಯ ವಿಷಮತೆ-ಮೌಢ್ಯಗಳನ್ನು ವ್ಯವಸ್ಥಿತವಾಗಿ ಬಿತ್ತಿ ಯಥಾವತ್ತಾಗಿ ಕಾಪಾಡಿಕೊಳ್ಳುತ್ತಾ ಬಂದಿರುವುದು. ಆದ್ದರಿಂದಲೇ ಬಸವಣ್ಣ ಜನ್ಮಾಧಾರಿತ ಕುಲ-ಜಾತಿ

೩. ವೀರಶೈವ ಧರ್ಮ ದರ್ಶನ, ಯು.ಆರ್. ಅನಂತಮೂರ್ತಿ, ಪುಟ-೨೯೫
೪. ಬಸವಣ್ಣನವರ ಕ್ರಾಂತಿಮಾರ್ಗ, ಕೆ.ಎ. ಲತಾ, ಪುಟ-೭೧

ತಾರತಮ್ಯಗಳನ್ನು ಪ್ರಶ್ನಿಸುತ್ತಾ ವಿಚಾರ ಪೂರ್ವಕವಾಗಿ ವಿಶ್ಲೇಷಿಸಿದ್ದಾರೆ.

ಎಲ್ಲ ಮಾನವರಲ್ಲೂ ಜೀವ ಸೃಷ್ಟಿಯಾಗುವ ಶಾಶ್ವತ ಪ್ರಾಕೃತಿಕ ವ್ಯವಹಾರಗಳು ಒಂದೇ ಬಗೆಯವು. ಹುಟ್ಟಿದ ಮಾನವರಲ್ಲಿ ಆಸೆ - ಆಮಿಷ, ರೋಷ - ಹರುಷದ ವಿಷಯಗಳು ಒಂದೇ. ಹೀಗಿರುವಲ್ಲಿ ಶ್ರೇಷ್ಠ ಕುಲಜನೆಂಬುದಕ್ಕೆ ಆವುದು ದೃಷ್ಟ ? ಶ್ರೇಣಿಕೃತ ವರ್ಣ ವ್ಯವಸ್ಥೆಯಿಂದ ಪ್ರಯೋಜನವೇನು ? ಜನರಲ್ಲಿರುವ ಸ್ಪಷ್ಟವಾದ ಭಿನ್ನತೆ ಹುಟ್ಟಿನಿಂದ ಬಂದವಲ್ಲ. ಜೀವನೋಪಾಯಕ್ಕಾಗಿ ಉಂಟಾದವು. ಅವರವರ ಗುಣ-ಕರ್ಮಗಳ ಮೇಲೆ ಜಾತಿಗಳು ನಿರ್ಮಿತವಾದುದನ್ನು ಬಸವಣ್ಣನವರು ಮನಗಾಣಿಸುತ್ತಾರೆ.

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ
ಕರ್ಣದಲಿ ಜನಿಸಿದವರುಂಟೇ? ಜಗದೊಳಗೆ?
ಇದು ಕಾರಣ ಕೂಡಲಸಂಗಮದೇವಾ
ಅಂಗಸ್ಥಲವನರಿದವನೆ ಕುಲಜ.

ಹೊಲೆಯೊಳಗೆ ಹುಟ್ಟಿ ಕುಲವರಸುವೆ,
ಎಲವೊ, ಮಾತಂಗಿಯ ಮಗ ನೀನು!
ಸತ್ತುದನೆಳೆವನೆತ್ತಣ ಹೊಲೆಯ ?
ಹೊತ್ತು ತಂದು ನೀವು ಕೊಲುವಿರಿ.
ಶಾಸ್ತ್ರವೆಂಬುದು ಹೋತಿಂಗೆ ಮಾರಿ
ವೇದವೆಂಬುದು ನಿಮಗೆ ತಿಳಿಯದು
ನಮ್ಮ ಕೂಡಲಸಂಗಮನ ಶರಣರು
ಕರ್ಮವಿರಹಿತರು, ಶರಣ ಸನ್ನಿಹಿತರು, ಅನುಪಮಚಾರಿತ್ರರು
ಅವರಿಗೆ ತೋರಲು ಪ್ರತಿಯಿಲ್ಲವೋ.

ಹೊಲೆಯ ಮಾದಿಗ ಭಕ್ತನಾದಡೆ ಆತನ ಮನೆಯ ಸೊಣಗಂಗೆ
ಪಂಚಮಹಾವಾದ್ಯದಲ್ಲಿ ಸನ್ಮಾನನೆಯ ಮಾಡೆನೆ ?
ನೆಲನನುಗ್ಘಡಿಪೆ, ಉಘೇ, ಚಾಂಗು, ಭಲರೆ ಎಂದು!
ಕುಲದಲಧಿಕ ಹಾರುವಂಗೆ, ಸಿದ್ಧಿಗೆಯ್ಯಸಲೆ!
ನಿಮ್ಮ ಶರಣರ ಮಹಿಮೆ ಘನಕ್ಕೆ ಘನ!
ಎಲೆ ಕೂಡಲಸಂಗಮದೇವಾ, ನಿಮ್ಮ ನಂಬದವನೆ ಹೊಲೆಯ!

‘ಶರಣ ಕಲ್ಪನೆಯು, ಹಾರುವನಿಗೆ ಅಧಿಕ’ ಎನ್ನುವ ಬಸವಣ್ಣನ ಮಾತುಗಳು, ಶುದ್ಧತೆಯ ಅಂಶವನ್ನು ಬಸವಣ್ಣ ಬ್ರಾಹ್ಮಣ ವರ್ಗದ ಶುದ್ಧತೆಯ ತಾತ್ವಿಕ ನೆಲೆಗಳ ಜೊತೆಗೆ ಹೋಲಿಸಿ ಹೇಳಿದಂಥವುಗಳೇ ಆಗಿವೆ ಎನ್ನುವುದನ್ನು ಸೂಚಿಸುತ್ತವೆ. ಭಕ್ತ ವರ್ಗದ ಅಂತರಂಗ-ಬಹಿರಂಗ ಶುದ್ಧತೆಯಾಗಲಿ, ನಡತೆಯಲ್ಲಿನ ಶುದ್ಧತೆಯಾಗಲೀ, ಬಸವಣ್ಣ ಅಪೇಕ್ಷಿಸಿದ ಶುದ್ಧತೆಯ ಪ್ರಮಾಣಗಳೇ ಆಗಿವೆ. “ಹೀಗಾಗಿ, ಈ ವರ್ಗದ ಕಡೆಗೆ ಮುಖ್ಯವಾಗಿ ಕೆಳವರ್ಗದವರಿಗೆ ನೀಡಿದ ಆಹ್ವಾನವು ಬ್ರಾಹ್ಮಣ ವರ್ಗದ ಶುದ್ಧತೆಯ ಕಲ್ಪನೆಗಳಿಗೆ ಸಮಾನಾಂತರವಾದ ಬೆಳವಣಿಗೆಯಾಗಿದ್ದು, ಆ ಸಾಮಾಜಿಕ ವ್ಯವಸ್ಥೆಗೆ ಕೊಟ್ಟ ದೊಡ್ಡ ಪೆಟ್ಟೇ ಆಗಿದೆ”.[೫]

ಬಸವಣ್ಣ ಹಿಂಸಾಮೂಲವಾದ ಯಜ್ಞ-ಯಾಗಾದಿಗಳಲ್ಲಿ ನಿರತವಾದ ಕುಲವನ್ನು ಅರಸುವ ವೇದಜಡರನ್ನು ಹೀಯಾಳಿಸುತ್ತಾರೆ. ಹುಟ್ಟುಕುಲದಿಂದಲೇ ಉತ್ತಮರಾದೆವು ಎಂಬುವವರನ್ನು ಹಿಂದಿನ ಹಿರಿಯರ ಉದಾಹರಣೆಗಳನ್ನು ಕೊಟ್ಟು ಖಂಡಿಸುತ್ತಾರೆ.

ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ;
ಮಂಡೋದರಿ ಕಪ್ಪೆಯ ಮಗಳು!
ಕುಲವನರಸದಿರಿಂಭೋ! ಕುಲದಿಂದ ಮುನ್ನೇನಾದಿರಿಂ ಬೋ!
ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದುರ್ವಾಸ ಮಚ್ಚಿಗ ಕಶ್ಯಪ ಕಮ್ಮಾರ,
ಕೌಂಡಿನ್ಯನೆಂಬ ಋಷಿ ಮೂರು ಭವನವನರಿಯೆ ನಾವಿದ, ಕಾಣಿ ಬೋ!
ನಮ್ಮ ಕೂಡಲಸಂಗನ ವಚನವಿಂತೆಂದುದು:
ಶ್ವಪಚೋಪಿಯಾದಡೇನು, ಶಿವಭಕ್ತನೇ ಕುಲಜಂ ಬೋ

ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಗೌತಮಮುನಿಗೆ ಗೋವೇಧೆಯಾಯಿತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಬಲಿಗೆ ಬಂಧನವಾಯಿತು.
ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಕರ್ಣನ ಕವಚ ಹೋಯಿತು.

ಪುರಾಣಗಳ ವಿವರಗಳು ಇಲ್ಲಿ ಉಪಯೋಗಿಸಲ್ಪಟ್ಟ ರೀತಿಯನ್ನು ಗಮನಿಸಬಹುದಾಗಿದೆ. ಪುರಾಣಗಳ ಟೀಕೆಯು ಬಸವಣ್ಣನ ವಚನಗಳಲ್ಲಿ ಬಹುಸಂಖ್ಯೆಯಲ್ಲಿ ಸಿಗುತ್ತದೆ. ಬ್ರಾಹ್ಮಣ ಹಾಗೂ ಶೂದ್ರ ವರ್ಗಗಳ ನಡುವೆ, ಸಾಂಸ್ಕೃತಿಕ ಸಂಬಂಧಗಳನ್ನು ನೆಲೆಯೂರುವಂತೆ ಮಾಡುವಲ್ಲಿ ಪುರಾಣಗಳ ಪಾತ್ರವು ಮಹತ್ವದ್ದೇ ಆಗಿದೆ. ಹೀಗಾಗಿ ಇವುಗಳನ್ನು ನಿರಾಕರಿಸಬೇಕೆನ್ನುವ ಬಸವಣ್ಣನ ಧೋರಣೆಯು ಮೂಲಭೂತವಾಗಿ ಶ್ರೇಣೀಕೃತ ಮೌಲ್ಯಗಳನ್ನು ಹೊಂದಿಯೇ, ಹಿಂದೂ ಧಾರ್ಮಿಕ ವ್ಯವಸ್ಥೆಯ

೫. ಬಸವ ಸಾಹಿತ್ಯ, ಬಸವರಾಜ ಕಲ್ಗುಡಿ, ಪುಟ-೬೮

ಒಂದೇ ತಳಹದಿಯ ಮೇಲೆ ಇದ್ದಂಥ ವರ್ಗಗಳಿಗೆ ಒಟ್ಟು ಆ ವ್ಯವಸ್ಥೆಯ ಕೆಟ್ಟ ಅಂಶಗಳನ್ನು ಎತ್ತಿ ತೋರಿಸಬೇಕೆನ್ನುವುದೇ ಆಗಿದೆ.

ಸಮಾಜದಲ್ಲಿ ವರ್ಣ-ಜಾತಿ ವ್ಯವಸ್ಥೆ ವೈಯಕ್ತಿಕ ಸಾಧನೆಗೂ ಸಾಮಾಜಿಕ ಒಳಿತಿಗೂ ಅಡ್ಡಿಯಾಗಿ ವಿಷದಂತೆ ವ್ಯಾಪಿಸಿರುವುದನ್ನು ಕಂಡು,

ಜಾತಿವಿಡಿದು ಸೂತಕವನರಸುವೆ
ಜ್ಯೋತಿವಿಡಿದು ಕತ್ತಲೆಯನರಸುವೆ
ಇದೇಕೋ ಮರುಳುಮಾನವಾ?
ಜಾತಿಯಲ್ಲಿ ಅಧಿಕನೆಂಬೆ
ವಿಪ್ರ ಶತಕೋಟಿಗಳಿದ್ದಲ್ಲಿ ಫಲವೇನು?
ಭಕ್ತ ಶಿಖಾಮಣಿ ಎಂದುದು ವಚನ.
ನಮ್ಮ ಕೂಡಲಸಂಗನ ಶರಣರ ಪಾದ ಪುರುಷವ ನಂಬು,
ಕೆಡಬೇಡ ಮಾನವಾ.

ಎಂಬ ಮಾತಿನಲ್ಲಿ ಜಾತಿಗಳನ್ನೆಲ್ಲ ನಿರಾಕರಿಸಿ ಸದಾಚಾರ ಸನ್ಮಾರ್ಗಗಳ ಭಕ್ತಿ ಜೀವನವನ್ನು ಎತ್ತಿ ಹಿಡಿಯುವ ಕಳಕಳಿಯಿದೆ. ಸನ್ಮಾರ್ಗದಲ್ಲಿದ್ದವರೇ ಒಂದು ಜಾತಿ, ದುರ್ಮಾರ್ಗಿಗಳದ್ದೇ ಇನ್ನೊಂದು ಜಾತಿ. ಬಸವಣ್ಣ ಮಾನವ ವರ್ಗದಲ್ಲಿ ಮಾಡಿದ್ದು ಈ ಎರಡೇ ಜಾತಿಗಳನ್ನು. ಇವುಗಳನ್ನು ಪಾರಿಭಾಷಿತವಾಗಿ 'ಭಕ್ತ', 'ಭವಿ' ಎಂದು ಕರೆದರು. "ಲಿಂಗ ಕಟ್ಟಿದ ಮಾತ್ರಕ್ಕೆ ಭಕ್ತನಲ್ಲ, ಆಚರಣೆಯಿಂದ ದೊಡ್ಡವನಾಗುತ್ತಾನೆಯೇ ಹೊರತು ಹುಟ್ಟಿದ ಉತ್ತಮ ಕುಲದಿಂದಾಗಲೀ ಹಣ. ಅಧಿಕಾರಗಳಿಂದಾಗಲೀ ಅಲ್ಲ".[೬]

ಕೃತ್ರಿಮ ಶ್ರೇಷ್ಠತೆಯ ಜನಿವಾರವನ್ನು ಹರಿದೊಗೆದು ಇಡೀ ವೈದಿಕಶಾಹಿಯ ವಿರುದ್ಧ ಬಂಡಾಯ ಹೂಡಿದ್ದು ಬಸವಣ್ಣನವರ ವೈಶಿಷ್ಟ್ಯ. ಕುಲಮದ ಎಲ್ಲ ಅಹಂಕಾರಗಳಿಗಿಂತ ದೊಡ್ಡದು. ಅದರಲ್ಲೂ ಸಮಾಜದ ಸರ್ವಸೌಲಭ್ಯಗಳೂ ಕುಲದಿಂದಲೇ ನಿರ್ಣಯವಾಗುತ್ತಿದ್ದ ಅಂದಿನ ಸಮಾಜದಲ್ಲಿ ಅದರ ಉಪಟಳ ಅಪಾರ. ಅದರ ನಿರ್ಮೂಲನೆಗಾಗಿಯೇ ಬಸವಣ್ಣನವರು ಅತಿ ಹೆಚ್ಚಿನ ಮಹತ್ವ ಕೊಟ್ಟರು. ತಮ್ಮನ್ನು ಅದರಲ್ಲಿ ತೊಡಗಿಸಿಕೊಂಡು ಉಳಿದವರಿಗೆ ಮಾರ್ಗದರ್ಶಕರಾದರು. ಉತ್ತಮಕುಲ, ಉನ್ನತ ಅಧಿಕಾರ, ಪ್ರಖರ ಪಾಂಡಿತ್ಯ, ಬೆರಗುಗೊಳಿಸುವ ಬುದ್ಧಿವಂತಿಕೆ, ರೂಪ-ಎಲ್ಲವೂ ಇದ್ದ ಬಸವಣ್ಣನವರು ಇವುಗಳೊಂದಕ್ಕೂ ಅಧೀನರಾಗದೆ ಮೀರಿನಿಂತದ್ದು ಅವರ ಸಾಧನೆಯ ಒಂದು ಪವಾಡ. ಹೆಜ್ಜೆ-ಹೆಜ್ಜೆಗೂ ತಮ್ಮ ಉತ್ತಮಿಕೆಯ ಅಹಂಕಾರವನ್ನು ನಿರಸನಗೊಳಿಸಿಕೊಳ್ಳುತ್ತಾ ಸಮಾಜದ ಸಾಮಾನ್ಯರೊಡನೆ ತಮ್ಮನ್ನು ಏಕೀಭವಿಸಿಕೊಳ್ಳುವ ಅವರ ನಿರಂತರ ಜಾಗೃತಿ ಇಡೀ ಜಗತ್ತಿನ ಸಾಧಕರಲ್ಲಿಯೇ ಅಪೂರ್ವವಾದುದು.

ಉತ್ತಮ ಕುಲದಲ್ಲಿ ಹುಟ್ಟಿದನೆಂಬ

---

೬. ವಚನ ಚಳುವಳಿ, ಎಚ್. ತಿಪ್ಪೇರುದ್ರಸ್ವಾಮಿ, ಪುಟ-೨೧

ಕಷ್ಟತನದ ಹೊರೆಯ ಹೊರಿಸದಿರಯ್ಯಾ,
ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯ !
ದಾಸಯ್ಯ ಶಿವದಾನವನೆರೆಯ, ನೋಡಯ್ಯಾ
ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ.
ಉನ್ನತಮಹಿಮ ಕೂಡಲಸಂಗಮದೇವಾ, ಶಿವಧೋ! ಶಿವಧೋ!!

ಎಂದು ಉತ್ತಮ ಕುಲದ ಕಷ್ಟತನದ ಹೊರೆಯನ್ನು ಕಳೆದುಕೊಳ್ಳ ಬಯಸುತ್ತಾರೆ; ಆ ಪ್ರಯತ್ನದಲ್ಲಿ ಕಕ್ಕಯ್ಯ, ದಾಸಯ್ಯ, ಚೆನ್ನಯ್ಯ ಮೊದಲಾದ ದಲಿತರೊಡನೆ ತಮ್ಮ ಸಂಬಂಧವನ್ನು ಬೆಸೆದುಕೊಳ್ಳುತ್ತಾರೆ.

ಕುಲಮದವನ್ನು ಕಳೆದುಕೊಳ್ಳುವ ಅವರ ಕಳಕಳಿ ಇನ್ನೂ ಅನೇಕ ವಚನಗಳಲ್ಲಿ ತುಂಬಾ ಪರಿಣಾಮಕಾರಿಯಾಗಿ ಬಂದಿದೆ.

ಅಪ್ಪನು ನಮ್ಮ ಮಾದರ ಚೆನ್ನಯ್ಯ;
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ;
ಚಿಕ್ಕಯ್ಯನೆಮ್ಮಯ್ಯ ಕಾಣಯ್ಯಾ;
ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ-
ಎನ್ನನೇತಕ್ಕರಿಯರಿ, ಕೂಡಲಸಂಗಯ್ಯಾ ?

ಎಮ್ಮ ತಾಯಿ ನಿಂಬಿಯವ್ವೆ; ನೀರನೆರೆದುಂಬಳು;
ಎಮ್ಮಯ್ಯ ಚೆನ್ನಯ್ಯ; ರಾಯ ಕಂಪಣವ ಹೊರುವ
ಎಮಗೆ ಆರೂ ಇಲ್ಲವೆಂಬಿರಿ
ಎಮ್ಮಕ್ಕ ಕಂಚಿಯಲ್ಲಿ ಬಾಣಸನ ಮಾಡುವಳು;
ಎಮಗೆ ಆರೂ ಇಲ್ಲವೆಂಬಿರಿ
ಎಮ್ಮ ಅಜ್ಜರ ಅಜ್ಜರು ಪಡೆದ ಭಕ್ತಿಯ ನಿಮ್ಮ ಕೈಯಲು ಕೊಂಬೆ,
ಕೂಡಲಸಂಗಮದೇವಾ.

ಹಾರುವ ಜಾತಿಯಲ್ಲಿ ಹುಟ್ಟಿದ ತಪ್ಪಿಗಾಗಿ ತಮ್ಮನ್ನು ತಾವೇ ಹಂಗಿಸಿಕೊಳ್ಳುವ ನೆವದಿಂದ ಬಸವಣ್ಣನವರು ಆ ಜಾತಿಯ ಜನ ಸಮಾಜಕ್ಕೆ, ನಾಡಿಗೆ ಹಾಗೂ ದೇವರಿಗೆ ಎಸಗಿದ ಅಪಚಾರವನ್ನು ಮಾರ್ಮಿಕವಾಗಿ ಬಯಲಿಗೆಳೆಯುತ್ತಾರೆ; ಅವರ ದೋಷ ದೌಷ್ಟ್ಯಗಳನ್ನು ಹೊಣೆಗಾರಿಕೆಯನ್ನೆಲ್ಲ ತಾವೇ ಹೊತ್ತುಕೊಂಡವರಂತೆ, ಓದಿದವರ ಕಣ್ಣಲ್ಲಿ ನೀರೊಸರುವಂತೆ, ದೈನ್ಯದಿಂದ ದೈಯೆನ್ನುತ್ತಾರೆ. "ಕಷ್ಟಜಾತಿಯ ಜನ್ಮದಲಿ ಜನಿಸಿದೆ, ಎನಗಿದು ವಿಧಿಯೇ! ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ, ಅನು ಹಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯ

ಎಂದು ಬಗೆ ಬಗೆಯಾಗಿ ಹಲುಬುತ್ತಾರೆ, ಹಾಗೆ ಹುಟ್ಟಿದ್ದೇ ಒಂದು ಪ್ರಾರಬ್ಧಕರ್ಮವೆಂದು ಭಾವಿಸುತ್ತಾರೆ".[೭]

ಅಯ್ಯಾ, ನಿಮ್ಮ ವಂಶಾವಳಿಯಲು ಒಬ್ಬ ತೊತ್ತಿನ ಮಗ ಹುಟ್ಟಿದ;
ಆತನ ತೊತ್ತಿನ ಮಗ ನಾನಯ್ಯ,
ಕೂಡಲಸಂಗಮದೇವರ ಮಂಚದ ಕೋಡೇರಿ ಬಂದ
ತೊತ್ತಿನ ಮಗ ನಾನಯ್ಯ.

ಹರನು ಮೂಲಿಗನಾಗಿ, ಪುರಾತರೊಳಗಾಗಿ,
ಬಳಿಬಳಿಯಲು ಬಂದ ಮಾದಾರನ ಮಗ ನಾನಯ್ಯ.
ಕಳಿದ ಹೊಲೆಯನೆಮ್ಮಯ್ಯ, ಜಾತಿಸೂಚಕ,
ಮಾದಾರನ ಮಗ ನಾನಯ್ಯ
ಪನ್ನಗಭೂಷಣ ಕೂಡಲಸಂಗಯ್ಯಾ
ಚೆನ್ನಯ್ಯನೆನ್ನ ಮುತ್ತಯ್ಯನಜ್ಜನಪ್ಪನಯ್ಯಾ.
ಕಷ್ಟ ಜಾತಿ ಜನ್ಮದಲ್ಲಿ ಜನಿಯಿಸಿದೆ ಎನ್ನ,
ಎನಗಿದು ವಿಧಿಯೆ ಕೂಡಲಸಂಗಮದೇವಾ ?

ಎಂದು ತಾವು ಹುಟ್ಟಿದ ಉತ್ತಮ ಜಾತಿಯ ಅಹಂಕಾರವನ್ನು ನಿರಸನಗೊಳಿಸಿಕೊಳ್ಳಲು ನಿರಂರವಾಗಿ ಹಾತೊರೆಯುತ್ತಾರೆ. ಇದರ ಅರ್ಥ ಆ ಅಹಂಕಾರ ಮತ್ತೆ-ಮತ್ತೆ ತಲೆಯೆತ್ತುತ್ತಿತ್ತು ಎಂದಲ್ಲ, ಆ ಅಹಂಕಾರ ಅಳಿದುದನ್ನೂ ಅರಿಯಗೊಡದ ನಿರಂಜನ ನಿಲುವು ಅವರದು. "ಆದರೆ ಲೌಕಿಕ ಜಗತ್ತು ಅವರನ್ನು ಆ ಹಿನ್ನೆಲೆಯಲ್ಲಿಯೇ ನೋಡಲು ಪ್ರಯತ್ನಿಸುತ್ತಿತ್ತು, ಮತ್ತೆ-ಮತ್ತೆ ಅದನ್ನು ಅವರ ನೆನಪಿಗೆ ತರುತ್ತಿತ್ತು. ಅದರಿಂದ ಅವರು ರೋಸಿ ಇಂತಹ ಮಾತುಗಳನ್ನು ಹೇಳಿರುವುದು ಕಾಣುತ್ತದೆ".[೮]

'ಬ್ರಾಹ್ಮಣನಾಗಿ ಹುಟ್ಟಿದ್ದು ನನ್ನ ತಪ್ಪೆ? ಅದು ನನ್ನ ವಿಧಿ' ಎಂದು ನೊಂದು ನುಡಿಯುತ್ತ ಆ ಹೊರೆಯಿಂದ ತಪ್ಪಿಸಿಕೊಂಡಿರುವುದಾಗಿ ಹೇಳುತ್ತಾರೆ.

ಸೆಟ್ಟಿಯೆಂಬೆನೆ ಸಿರಿಯಾಳನ?
ಮಡಿವಾಳನೆಂಬೆನೆ ಮಾಚಯ್ಯನ?
ಡೋಹರನೆಂಬೆನೆ ಕಕ್ಕಯ್ಯನ?
ಮಾದಾರನೆಂಬೆನೆ ಚನ್ನಯ್ಯನ?
ಆನು ಹಾರುವನೆಂದೆಡೆ ಕೂಡಲಸಂಗಯ್ಯ ನಗುವನಯ್ಯಾ.

ಎನ್ನುತ್ತಾರೆ. ಹುಟ್ಟಿನಿಂದ ಅವರು ಹಾರುವರೆಂದು ಹೇಳುತ್ತಿರುವವರನ್ನು ಕಂಡು ಹುಟ್ಟಿನ ಮಹತ್ವವನ್ನು

೭. ಬಸವ ಸಂಹಿತೆ, ದೇಜಗೌ, ಪುಟ-೪೨
೮. ಅಡಿಟಿಪ್ಪಣಿ ೬ರಂತೆ, ಪುಟ-೨೨

ನಿರಾಕರಿಸುತ್ತಾ ಒಂದು ಕಡೆ ಹೀಗೆ ಹೇಳುತ್ತಾರೆ.

ಚೆನ್ನಯ್ಯನ ಮನೆಯ ದಾಸನ ಮಗನು;
ಕಕ್ಕಯ್ಯನ ಮನೆಯ ದಾಸಿಯ ಮಗಳು-
ಇವರಿಬ್ಬರೂ ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು.
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲಸಂಗಮದೇವ ಸಾಕ್ಷಿಯಾಗಿ.

ಎಂಥ ಭಯಂಕರವಾದ ನಿವೇದನೆ? ಘೋರತಮವಾದ ಪ್ರಾಯಶ್ಚಿತ್ತ? ತಮ್ಮವರೆಸಗಿದ ಪಾಪದ ನಂಜನ್ನೆಲ್ಲ ಈ ರೀತಿ ಮೊಗೆ ಮೊಗೆದು ಈಂಟಿದ ಆಚಾರ್ಯ ಸಂತರು ಜಗತ್ತಿನಲ್ಲಿ ಅತಿ ವಿರಳ; ಇಲ್ಲವೆಂದರೂ ತಪ್ಪಾಗದು. ಈ ವಾಕ್ಯವನ್ನೊದಿದಂತೆಲ್ಲ ಬಸವಣ್ಣನವರು ಉನ್ನತವಾಗಿ ಬೆಳೆ ಬೆಳೆದು, ಅವರ ಮಕುಟ ಆಕಾಶದಲ್ಲಿ ಲಯವಾಗಿ ದೃಷ್ಟಿಗೆ ದುರ್ಗಮವಾಗುತ್ತದೆ. ಹುಟ್ಟಿದ ವಂಶವನ್ನು ದೊಡ್ಡದು ಮಾಡಿ ಹೇಳಿಕೊಳ್ಳುವುದನ್ನು ನಿರಾಕರಿಸಲು ಇಷ್ಟು ದೂರ ಹೋಗಿ ಇಂತಹ ಕಠಿಣವಾದ ಮಾತುಗಳನ್ನಾಡಿದ್ದಾರೆ.

ಬ್ರಾಹ್ಮಣ ವರ್ಗದ ಬಗ್ಗೆ ಅಪಾರ ಸಿಟ್ಟು, ಆಕ್ರೋಶಗಳಿರುವುದನ್ನೂ ಬಸವಣ್ಣನವರ ವಚನಗಳಲ್ಲಿ ಕಾಣಬಹುದು. ಬ್ರಾಹ್ಮಣ ವರ್ಗದಲ್ಲಿ ನಡೆ-ನುಡಿಗಿರುವ ಅಪಾರ ಅಂತರ ಬಸವಣ್ಣನವರ ಅಪಾರ ಟೀಕೆಗೆ ಗುರಿಯಾಯಿತು.

ಇಟ್ಟಿಯ ಹಣ್ಣ ನರಿ ತಿಂದು ಸೃಷ್ಟಿ ತಿರುಗಿತ್ತೆಂಬಂತೆ
ಮಟ್ಟಿಯನಿಟ್ಟು ದ್ವಿಜರ ಮಾತದೇಕೆ ?
ಹಗಲುಗಾಣದ ಗೂಗೆ ಇರುಳಾಯಿತೆಂದಡೆ,
ಜಗಕ್ಕೆ ಇರುಳಪ್ಪದೆ ಮರುಳೆ?
ಹೋಮದ ನೇಮದಲ್ಲಿ ಹೋತನ ಕೊಂದು ತಿಂಬ
ಅನಾಮಿಕರೊಡನಾಡಿ ಗೆಲುವುದೇನು,
ಕೂಡಲಸಂಗಮದೇವಾ.

ಬ್ರಾಹ್ಮಣ ವರ್ಗದಲ್ಲಿದ್ದ ಹಲವು ಅರ್ಥವಿಲ್ಲದ ಬಹಿರಂಗ ಆಚಾರಗಳನ್ನು ಸಹ ಬಸವಣ್ಣನವರು ವಿಡಂಬಿಸಿದರು.

ಮೀಂಬುಲಿಗನ ಹಕ್ಕಿಯಂತೆ ನೀರ ತಡಿಯಲ್ಲಿದ್ದು
ಮೂಗ ಹಿಡಿದು ಧ್ಯಾನವ ಮಾಡುವರಯ್ಯಾ;
ಬಿಟ್ಟ ಮಂಡೆವೆರಸಿ ಬಾಯ ಮಿಡುತಿಸುತ
ಕಣ್ಣ ಮುಚ್ಚಿ, ಬೆರಳನೆಣಿಸುವರಯ್ಯಾ
ನಿಮ್ಮ ಕೈಯಲಿ ಕಟ್ಟಿದ ದರ್ಭೆಯ ಹುಲ್ಲು

ಕೂಡಲಸಂಗನರಿಯದೆ ಮೊರೆಯಿಡುವಂತೆ!

ನೀರ ಕಂಡಲ್ಲಿ ಮುಳುಗುವರಯ್ಯಾ,
ಮರನ ಕಂಡಲ್ಲಿ ಸುತ್ತುವರಯ್ಯಾ!
ಬತ್ತುವ ಜಲವ, ಒಣಗುವ ಮರನ
ಮೆಚ್ಚಿದವರು ನಿಮ್ಮನೆತ್ತ ಬಲ್ಲರು?
ಕೂಡಲಸಂಗಮದೇವಾ.

ಕಣ್ಣಮುಚ್ಚಿ ಕನ್ನಡಿಯ ತೋರುವಂತೆ;
ಇರುಳು ಹಗಲಿನ ನಿದ್ರೆ ಸಾಲದೇ?
ಬೆರಳನೆಣಿಸಿ ಪರಮಾರ್ಥವ ಹಡೆವಡೆ
ಚೋದ್ಯವಲ್ಲವೆ? ಹೇಳಾ!
ಮೂಗ ಮುಚ್ಚಿ ಮುಕ್ತಿಯ ಬಯಸುವ
ನಾಚಿಕೆ ಇಲ್ಲದವರ ನಾನೇನೆಂಬೆ
ಕೂಡಲಸಂಗಮದೇವಾ?

ಧರ್ಮಾಂಧ ಶ್ರದ್ಧೆಯುಳ್ಳ ನಾಡಿನಲ್ಲಿ ಧಾರ್ಮಿಕ ಕ್ರಾಂತಿಯಾಗದೆ ಸಾಮಾಜಿಕ ಭದ್ರತೆಯನ್ನಾಗಲೀ, ರಾಷ್ಟ್ರ ಕಲ್ಯಾಣವನ್ನಾಗಲೀ ಸಾಧಿಸಲಾಗದೆಂದು ನಿಶ್ಚಯಿಸಿದ ಬಸವಣ್ಣನವರು 'ತತ್ವಗಳನ್ನು ಒಪ್ಪುವ ಉತ್ತಮ ವರ್ಗ ಅಥವಾ ಬ್ರಾಹ್ಮಣ ವರ್ಗ ಅದಕ್ಕೆ ವಿರುದ್ಧವಾಗಿ ನಡೆಯುವುದನ್ನು ಕಂಡು', ಕೆರಳಿ ಕಟುವಾಗಿ ಹೀಗೆ ಹೇಳುತ್ತಾರೆ.

ವೇದವನೋದಿದ ವಿಪ್ರರು ಹೊನಲಲ್ಲಿ ಹೋದ ಕೇಡ ನೋಡಿರೇ!
ಭರ್ಗೋ ದೇವಸ್ಯ ಧೀಮಹಿ ಎಂಬುದು
ಒಬ್ಬರಿಗಾಗಿ ವಿಚಾರವಿಲ್ಲ, ನೋಡಿರೆ!
ಕೂಡಲಸಂಗಮದೇವಾ.

ಬ್ರಾಹ್ಮಣ ವರ್ಗದ ಧಾರ್ಮಿಕ ನೆಲೆಗಳ ಹಾಗೂ ಆಚರಣೆಗಳ ಟೀಕೆ ಬಸವಣ್ಣವರ ವಚನಗಳಲ್ಲಿ ತೀಕ್ಷ್ಣವಾಗಿ ನಡೆದಿದೆ. ವೇದ, ಶಾಸ್ತ್ರ ಪುರಾಣಗಳನ್ನು ಬ್ರಾಹ್ಮಣರು ತಮ್ಮ ಸ್ವಾರ್ಥ ಸಾಧನೆಗಾಗಿ ಬಳಸಿಕೊಂಡಿದ್ದರಿಂದ ಬಸವಣ್ಣನವರ ಹರಿತ ನುಡಿ ವೇದ, ಶಾಸ್ತ್ರ ಪುರಾಣಗಳನ್ನು ಕಟ್ಟಿ ಹಾಕುತ್ತದೆ.

ನೀವು ಹಿರಿಯರೆಂಬಿರಿ, ಕರ್ಮಿಗಳು, ನೀವು ಕೇಳಿರಿ
ನಿಮ್ಮ ವೇದಶಾಸ್ತ್ರಂಗಳು ಆರನು ಹೊಗಳುತ್ತಿದ್ದಾವು?

ಓಂ ದ್ಯಾವಾ ಭೂಮೀ ಜನಯನ್ ದೇವ ಏಕೋ ದೇವ
ಎಂದು ಶ್ರುತಿ ಸ್ಮೃತಿಗಳು ಸಾರುತ್ತಲಿದ್ದಾವು.
ಗುರುಃ ವರ್ಣಾನಾಂ ಬ್ರಾಹ್ಮಣೋ ಎಂಬುದು ಹುಸಿ,
ವರ್ಣಾನಾಂ ಗುರುಃ ನಮ್ಮ ಕೂಡಲಸಂಗನ ಶರಣರು.

ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತಿದೆ!
ವೇದ ಘನವೆಂಬೆನೆ? ಪ್ರಾಣಿವಧೆಯ ಹೇಳುತ್ತಿದೆ!
ಶೃತಿ ಘನವೆಂಬೆನೆ? ಮುಂದಿಟ್ಟರಸುತ್ತಿದೆ!
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ,
ತ್ರಿವಿಧ ದಾಸೊಹದಲ್ಲಲ್ಲದೆ ಕಾಣಬಾರದು ಕೂಡಲಸಂಗಮದೇವ!

ವೇದಕ್ಕೆ ಹೊರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ.
ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯಿವೆ, ನೋಡಯ್ಯಾ.
ಮಹದಾನಿ ಕೂಡಲಸಂಗಮದೇವಾ,
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ.

ಯಜ್ಞ, ಯಾಗ, ಹವಿಸ್ಸು ಮುಂತಾದ ವೈದಿಕ ಆಚರಣೆಗಳ ಹೀಯಾಳಿಕೆಯು ಬಸವಣ್ಣನವರ ವಚನಗಳಲ್ಲಿನ ಪ್ರಮುಖ ಗುರಿಯಾಗಿದೆ. ವೇದ, ಪುರಾಣದಮಾತು, ವಿವರಗಳಿಂದಲೇ ಅವುಗಳ ಮಾನವೀಯ ಅಲ್ಲದ ಅಂಶಗಳನ್ನು ಹೇಳುವುದು ಬಸವಣ್ಣನವರು ಮುಖ್ಯವಾಗಿ ಅನುಸರಿಸಿದ ಕ್ರಮವಾಗಿದೆ.

ಹೋಮದ ನೆವದಲ್ಲಿ ಹೋತನು ಕೊಂದು ತಿಂಬ
ಅನಾಮಿಕರೊಡನಾಡಿ ಗೆಲಿವುದೇನು ?
ಕೂಡಲಸಂಗಮದೇವಾ.

ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವನ ಮನೆಯಲು
ಕಿಚ್ಚೆದ್ದು ಸುಡುವಾಗ ಬಚ್ಚಲ ನೀರ, ಬೀದಿಯ ದೂಳವ ಹೊಯ್ದು
ಬೊಬ್ಬಿಟ್ಟೆಲ್ಲರ ಕರೆವರಯ್ಯಾ
ಕೂಡಲಸಂಗಮದೇವನ ವಂದನೆಯ ಮರೆದು ನಿಂದಿಸುತ್ತಿದ್ದರು.

ಎನ್ನುವ ಈ ವಚನಗಳಲ್ಲಿ ಆಚರಣೆಗಳ ಅರ್ಥಹೀನತೆಯನ್ನು ಎತ್ತಿ ಹೇಳಲಾಗಿದೆ.

ಬಸವಣ್ಣನವರು ಧಾರ್ಮಿಕ ವ್ಯವಸ್ಥೆಯ ಮೂಲವನ್ನೇ ಹಿಡಿದು ಅಲ್ಲಾಡಿಸಿದರು. ಧರ್ಮವನ್ನು

ಅವರು ನಿರಾಕರಿಸಲಿಲ್ಲ; ಅದರ ಮೇಲೆ ದಟ್ಟವಾಗಿ ಬೆಳೆದು ಪರೋಪಜೀವಿ ಬಂದಳಿಕೆಗಳಂತಿದ್ದ ಸಂಪ್ರದಾಯಗಳನ್ನು ಕತ್ತರಿಸಿ ಹಾಕಿದರು. ಅತ್ಯಂತ ವೈಜ್ಞಾನಿಕವಾದ ವಿಚಾರ ನಿಷ್ಠೆಯಿಂದ ಅವುಗಳನ್ನು ಕಟುಪರೀಕ್ಷೆಗೆ ಒಳಪಡಿಸಿದರು. ಗಟ್ಟಿಯಾದವುಗಳನ್ನು ಉಳಿಸಿಕೊಂಡು ತಮ್ಮ ಅನುಭಾವದಿಂದ ಅವುಗಳಿಗೆ ಹೊಸ ಹೊಳಪನ್ನು ಕೊಟ್ಟರು. ಜೊಳ್ಳುಗಳನ್ನು ಜಾಲಾಡಿ, ಜೊಂಡುಗಳನ್ನು ಕಿತ್ತೆಸೆದರು. ಅದರಲ್ಲೂ ಮುಖ್ಯವಾಗಿ ಯಜ್ಞ, ಯಾಗಾದಿಗಳು ಮತ್ತು ಅದರ ಸುತ್ತ ಹರಡಿದ್ದ ಶೋಷಣೆಯ ಜಾಲಗಳು ಮೊದಲ ಏಟಿಗೆ ಒಳಗಾದವು. ಕರ್ಮಯಜ್ಞಕ್ಕಿಂತ ಜ್ಞಾನದ ಮೂಲಕ ಕೈಗೊಳ್ಳುವ ಅನುಸಂಧಾನವೇ ಶ್ರೇಷ್ಠವೆಂದು ಉಪನಿಷತ್ತಿಗಳು ಹೇಳಿದ್ದರೂ ಕರ್ಮಗಳ ಪ್ರಾಬಲ್ಯ ನಿಂತಿರಲಿಲ್ಲ. ಧರ್ಮದ ಹೆಸರಿನಲ್ಲಿ ಉತ್ತಮರೆಂದು ಹೇಳಿಕೊಂಡು ಪಶುಬಲಿ ಕೊಡುವುದು ಬಸವಣ್ಣನವರಿಗೆ ಅಸಹನೆಯನ್ನುಂಟು ಮಾಡಿತು. ಅದನ್ನು ಶಾಸ್ತ್ರಾಧಾರಗಳಿಂದ ಸಾರೋದ್ಧಾರವಾಗಿ ಬೆಳೆಸಿಕೊಂಡು ಬರುತ್ತಿರುವುದನ್ನು ಕಂಡು ಅವರು ಕೆರಳಿದರು. "ಮಾನವನಲ್ಲಿರುವ ಪಶ್ವಂಶಗಳನ್ನು ನೀತಿ ನಿಯಮಗಳಿಂದ, ಶಮದಮಾದಿಗಳಿಂದ ನಿಯಂತ್ರಿಸಿ, ದೇವಾಂಶಗಳನ್ನು ಆತ್ಮಾನುಸಂಧಾನದಿಂದ ವಿಕಸಿತಗೊಳಿಸುವುದೇ ಧರ್ಮ".[೯] ಎಂಬ ವಿವರಣೆ ಸ್ವೀಕಾರ ಯೋಗ್ಯವಾಗಿದೆ.

> ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು
> ಎಲೆ ಹೋತೇ ಅಳು ಕಂಡಾ!
> ವೇದವನೋದಿದವರ ಮುಂದೆ ಅಳು ಕಂಡಾ!
> ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ!
> ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವ.

ಎಂದು ಕಟಕಿಯಾಡಿದರು.

> ನಿಮ್ಮ ವಚನವೆನ್ನ ಪುಣ್ಯವೆಂಬುದು ಹುಸಿಯಾಯಿತ್ತು, ನೋಡಾ
> ಶಾಸ್ತ್ರದ ವಚನ ಹೋತಿಂಗೆ ಮಾರಿ;
> ಎಂತು ನಂಬುವೆನಯ್ಯಾ ?
> ನಾನು ಕೊಲ್ಲೆ, ನೇಣು ಕೊಂದಿತ್ತೆಂಬ ಸೂನೆಗಾರರನೇನೆಂಬೆ.
> ಕೂಡಲಸಂಗಮದೇವಾ.

ಇದರ ಜೊತೆಗೆ ಇಷ್ಟೇ ಖಂಡನೀಯವಾಗಿ ಅವರಿಗೆ ಕಂಡದ್ದು ಯಜ್ಞದ ಬೆಂಕಿಯಲ್ಲಿ ಸುರಿಯುವ ಹಾಲು-ತುಪ್ಪ ಮೊದಲಾದ ಆಹಾರ ಪದಾರ್ಥಗಳ ದುರ್ವ್ಯಯ. ಅಮೂಲ್ಯವಾದ ಆಹಾರ ವಸ್ತುಗಳನ್ನು ಸುಡುವುದನ್ನು ವಿರೋಧಿಸಿ ವೈಚಾರಿಕ ಪ್ರತಿಭಟನೆಯಿಂದ ಸಮಷ್ಟಿ ಮನಸ್ಸನ್ನು ಅದರ ವಿರುದ್ಧ ತಿರುಗಿಸಲು ಪ್ರಯತ್ನಿಸಿದರು. ಬೆಂಕಿಯೇ ದೈವವೆಂದು ನಂಬಿದವರನ್ನು ವಿಡಂಬಿಸಿದ ಬಸವಣ್ಣನವರು ಅವರ ಭಕ್ತಿಯನ್ನು ಕಂಡು ಕೆರಳಿದರು.

> ಹಾರುವನ ಭಕ್ತಿ ಒಡಿನೊಳಗೆ ಅಗೆಯ ಹೊಯ್ದಂತೆ;

---

೯. ಬಸವಣ್ಣನವರ ಜೀವನ ಹಾಗೂ ಸಂದೇಶ, ಸಿದ್ಧಯ್ಯ ಪುರಾಣಿಕ, ಪುಟ-೬೫

ಕಳೆಯಿಂಕೆ ಬೇರೊರದು, ಮೇಲೆ ಫಲವಾಗದು;
ಪ್ರಾಣಲಿಂಗದ ಪ್ರಸಾದವ ಮುಂದಿಟ್ಟುಕೊಂಡು
ಪ್ರಾಣಾಯ ಸ್ವಾಹಾ, ಅಪಾನಾಯ ಸ್ವಾಹಾ, ವ್ಯಾನಾಯ ಸ್ವಾಹಾ,
ಉದಾನಾಯ ಸ್ವಾಹಾ, ಸಮಾನಾಯ ಸ್ವಾಹಾ ಎಂಬ
ಕರ್ಮಿಗಳನೇನೆಂಬೆ, ಕೂಡಲಸಂಗಮದೇವಾ?

ಇಲ್ಲಿ ಗಮನಿಸಬೇಕಾದ ಮುಖ್ಯವಾದ ಮಾತು ಪ್ರಾಣಧಾರಣೆಗೆ ಅಗತ್ಯವಾದ ಪ್ರಸಾದವನ್ನು ಮುಂದಿಟ್ಟುಕೊಂಡು ಅದನ್ನು ಬೆಂಕಿಗೆ ಹಾಕಿ ಸುಡುತ್ತಿರುವ ಚಿತ್ರವನ್ನು ಕುರಿತದ್ದು. ಆಹಾರವನ್ನು ಬಹಳ ಪವಿತ್ರ ಭಾವನೆಯಿಂದ ಕಾಣುವ ಬಸವಣ್ಣನವರು ಅದನ್ನು ಬೆಂಕಿಗೆ ಸುಡುವುದನ್ನು ಕಂಡು ಸಹಿಸದಾದರು. ಮಹಾ ಯಜ್ಞಗಳದ್ದು ಉನ್ನತಮಟ್ಟದ ಶೋಷಣೆಯಾದರೆ ದೇವಾಲಯಗಳಲ್ಲಿ ನಡೆಯುತ್ತಿದ್ದ ನಿತ್ಯ ಹೋಮ, ಹವನಾದಿಗಳು, ಪೂಜಾ ಪರಿಕರ್ಮಗಳು ಜನಸಾಮಾನ್ಯರನ್ನು ದಿನ-ದಿನವೂ ಶೋಷಿಸುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದವು.

ಅಂತೆಯೇ ಸಮಾಜದ ಕೊಳಗಿನ ಹಂತಗಳಲ್ಲಿ ಧರ್ಮದ ಸ್ಥಿತಿ ಇನ್ನೂ ಶೋಚನೀಯವಾಗಿತ್ತು. ಕ್ಷುದ್ರ ದೇವತೆಗಳನ್ನೂ ಮಾರಿ ಮಸಣಿಗಳನ್ನೂ ಬೀರಯ್ಯ, ಕೇತಯ್ಯ, ಮೊದಲಾದ ಗ್ರಾಮ ದೇವತೆಗಳನ್ನು ಹಿಂಸಾಚಾರದಿಂದ ನೂರಾರು ಕುರಿ ಕೋಣಗಳ ಬಲಿಯನ್ನಿತ್ತು ಪೂಜಿಸುವ ಕ್ರೂರ ಪದ್ಧತಿ ಪ್ರಚಲಿತವಾಗಿತ್ತು. ಅಂಟು ಜಾಡ್ಯಗಳೂ ದೇವತೆಗಳಾಗಿದ್ದವು. ದೈವಗಳ ನಾನಾ ಸ್ವರೂಪವನ್ನು ತೋರುವ ಅನೇಕ ರಚನೆಗಳನ್ನು ನಾವು ಬಸವಣ್ಣನವರ ವಚನಗಳಲ್ಲಿ ಕಾಣಬಹುದು.

ಹಾಳು ಮೊರಡಿಗಳಲ್ಲಿ ಊರ ದಾರಿಗಳಲ್ಲಿ
ಕೆರೆ ಬಾವಿ ಹೂ ಗಿಡು ಮರಂಗಳಲ್ಲಿ
ಗ್ರಾಮಮಧ್ಯಂಗಳಲ್ಲಿ ಚೌಲಪಥ ಪಟ್ಟಣಪ್ರದೇಶದಲ್ಲಿ
ಹಿರಿಯಾಲದ ಮರದಲ್ಲಿ ಮನೆಯ ಮಾಡಿ,
ಕರೆವೆಮ್ಮೆ ಹಸುಗೂಸು, ಬಸುರಿ, ಬಾಣತಿ,
ಕುಮಾರಿ ಕೊಡಗೂಸು ಎಂಬುವರ ಹಿಡಿದುಂಬ ತಿರಿದುಂಬ
ಮಾರಯ್ಯ ಬೀರಯ್ಯ ಕೇಚರಗಾವಿಲ ಅಂತರಬೆಂತರ
ಕಾಳಯ್ಯ ದೂಳಯ್ಯ ಮಾಳಯ್ಯ ಕೇತಯ್ಯಗಳೆಂಬ ನೂರು ಮಡಿಕೆಗೆ
ನಮ್ಮ ಕೂಡಲಸಂಗಮದೇವ ಶರಣೆಂಬುವುದೊಂದೆ ದಡಿ ಸಾಲದೆ?

ಅರಗು ತಿಂದು ಕರಗುವ ದೈವವ,
ಉರಿಯ ಕಂಡಡೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ?
ಅವಸರ ಬಂದಡೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ?

ಅಂಜಿಕೆಯಾದಡೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ?
ಸಹಜಭಾವ ನಿಜೈಕ್ಯ ಕೂಡಲಸಂಗಮದೇವನೊಬ್ಬನೆ ದೇವ.

ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ,
ಹಣಿಗೆ ದೈವ ಬಿಲ್ಲನಾರಿ ದೈವ, ಕಾಣಿರೊ,
ಕೊಳಗ ದೈವ ಗಿಣ್ಣಿಲು ದೈವ ಕಾಣಿರೋ!
ದೈವ ದೈವವೆಂದು ಕಾಲಿಡಲಿಂಬಿಲ್ಲ.
ದೈವನೊಬ್ಬನೆ ಕೂಡಲಸಂಗಮದೇವ.

ಮಾರಿಕವ್ವೆಯ ನೋಂತು ಕೊರಳಲ್ಲಿ ಕಟ್ಟಿಕೊಂಬರು;
ಸಾಲ ಬಟ್ಟಡೆ ಮಾರಿಕೊಂಬರಯ್ಯಾ!
ಸಾಲ ಬಟ್ಟಡೆ ಅವರನೊತ್ತೆಯಿಟ್ಟು ಕೊಂಡುಂಬರಯ್ಯಾ
ಮಾರುವೋಗನೊತ್ತೆಯೋಗ
ನಮ್ಮ ಕೂಡಲಸಂಗಮದೇವ.

ಮೊರನ ಗೋಟಿಗೆ ಬಪ್ಪ ಕಿರುಕುಳದೈವಕ್ಕೆ
ಕುರಿಯನಿಕ್ಕಿಹೆವೆಂದು ನಲಿನಲಿದಾಡುವರು;
ಕುರಿ ಸತ್ತು ಕಾವುದೆ ಹರ ಮುಳಿದವರ?
ಕುರಿ ಬೇಡ ಮರಿ ಬೇಡ;
ಬರಿಯ ಪತ್ರೆಯ ತಂದು ಮರೆಯದೆ ಪೂಜಿಸು
ನಮ್ಮ ಕೂಡಲಸಂಗಮದೇವ.

ಮಾಯ, ಮಂತ್ರ, ಮಾಟ, ಶಕುನಾದಿಗಳಲ್ಲಿ ತಾಮಸಿಕ ಆರಾಧನೆ ವಿಜೃಂಭಿಸುತ್ತಿತ್ತು. ಇದು ಜನರನ್ನು ಅಂಧಶ್ರದ್ಧೆ, ಅವಿಚಾರಿತ ಕರ್ಮಗಳಲ್ಲಿ ಮುಳುಗಿಸಿತ್ತು. ಹೀಗೆ ಬಸವಣ್ಣನವರು ಒಂದು ಕಡೆ ಮೇಲು ವರ್ಗದ ಶೋಷಣೆ, ಇನ್ನೊಂದು ಕಡೆ ಜನಸಾಮಾನ್ಯರ ಈ ಅಜ್ಞಾನ ಎರಡನ್ನೂ ಕಂಡರು. ಒಂದೇ ಏಟಿನಿಂದ ಈ ಎರಡನ್ನೂ ಹೊಡೆದುರುಳಿಸುವ ವೈಚಾರಿಕ ಮಾರ್ಗವನ್ನು ರೂಢಿಸುವುದೇ ಬಸವಣ್ಣನವರ ಕೇಂದ್ರ ಬಿಂದುವಾಯಿತು. ಅದಕ್ಕಾಗಿ ಅವರು ಬಳಸಿಕೊಂಡ ಸಾಧನ ಇಷ್ಟಲಿಂಗ.

ಬುದ್ಧಿಶಕ್ತಿ ಶ್ರೇಷ್ಠವೆಂದೂ ದೈಹಿಕ ಶ್ರಮ ಕನಿಷ್ಠವೆಂದೂ ಪ್ರತಿಪಾದಿಸಿದ ವೈದಿಕ ಶಾಹಿಗೆ 'ದುಡಿಯುವುದು ನಿಮ್ಮ ಕರ್ಮ; ತಿನ್ನುವುದು ನಮ್ಮ ಧರ್ಮ' ಎಂಬುದೇ ಮೂಲ ಮಂತ್ರವಾಗಿದ್ದಾಗ,

ಕಾಯಕವೇ ಕೈಲಾಸವೆಂದು ಹೇಳಿ, 'ಶ್ರಮ'ಕ್ಕೆ ತಕ್ಕ ಗೌರವವನ್ನು ತಂದು ಕೊಟ್ಟು ಕಾಯಕ ತತ್ವದ ಮಹತ್ವವನ್ನು ಸಾರಿದವರು ಬಸವಣ್ಣ.

ಮಾಡುವ ಕೆಲಸದಲ್ಲಿ ಶ್ರದ್ಧೆ ಇದ್ದರೆ, ಶುದ್ಧಿ ಇದ್ದರೆ ಬಾಹ್ಯ ಸಂಗತಿಗಳು ಏನು ಮಾಡಿಯವು? ಎನ್ನಿಸಿರಬೇಕು. ತಮ್ಮ ತಪ್ಪನ್ನು ಅರಿತುಕೊಳ್ಳದೆ ಇನ್ನೊಬ್ಬರ ತಪ್ಪನ್ನು ಎತ್ತಿ ತೋರಿಸುವ, ಟೀಕಿಸುವ ಜನರನ್ನು ಕಂಡು ಬಸವಣ್ಣನವರು ಇಂಥ ಚಿತ್ರಣವನ್ನು ನೀಡಿದ್ದಾರೆ.

ಹಾವಾಡಿಗನು ಮೂಕೊರತಿಯು- ತನ್ನ ಕೈಯಲ್ಲಿ ಹಾವು-
ಮಗನ ಮದುವೆಗೆ ಶಕುನವ ನೋಡಹೋಹಾಗ
ಇದಿರಲ್ಲೊಬ್ಬ ಮೂಕೊರತಿಯ ಹಾವಾಡಿಗನ ಕಂಡು
ಶಕುನ ಹೊಲ್ಲೆಂಬ ಚದುರನ ನೋಡಾ!
ತನ್ನ ಸತಿ ಮೂಕೊರತಿ - ತನ್ನ ಕೈಯಲ್ಲಿ ಹಾವು!
ತಾನು ಮೂಕೊರೆಯ!
ತನ್ನ ಭಿನ್ನವನರಿಯದೆ ಅನ್ಯರನೆಂಬ
ಕುನ್ನಿಯನೇನೆಂಬೆ ಕೂಡಲಸಂಗಯ್ಯ.

ಬಸವಣ್ಣನವರು 'ಧರ್ಮ ಕೇವಲ ಕೆಲವರ ಗುತ್ತಿಗೆಯಲ್ಲ; ಎಲ್ಲರೂ ಧಾರ್ಮಿಕ ಆಚರಣೆಯಲ್ಲಿ ಸರ್ವಸಮಾನರು' ಎಂಬ ಅಂಶವನ್ನು ಜನ ಮನದಲ್ಲಿ ಖಚಿತವಾಗಿ ಪ್ರತಿಬಿಂಬಿಸಿದರು. ನನ್ನ ಪರವಾಗಿ ಇನ್ನಾರೋ ಪೂಜೆಯನ್ನು ಮಾಡುತ್ತಾರೆನ್ನುವುದು ಹಾಸ್ಯಾಸ್ಪದ. ನನ್ನ ಪೂಜೆಯನ್ನು ನಾನೇ ಮಾಡಿಕೊಳ್ಳಬೇಕು, ನನ್ನ ಉದ್ಧಾರವನ್ನು ನಾನೇ ಕಂಡುಕೊಳ್ಳಬೇಕು. 'ಉದ್ಧರೇದಾತ್ಮದಾತ್ಮಾನಂ' ಎಂದು ಭಗವದ್ಗೀತೆಯಲ್ಲಿ ಕೃಷ್ಣ ಹೇಳಿದ್ದೇನೋ ನಿಜ. ಆದರೆ ಮುಂದೆ ನಮ್ಮ ಧಾರ್ಮಿಕ ಬೆಳವಣಿಗೆ ಇದಕ್ಕೆ ವಿರುದ್ಧವಾಗಿ ಬೆಳೆದು ಬಂದಿತು. ದೇವಾಲಯಗಳಲ್ಲಿ ಪೂಜೆಯನ್ನು ಮಾಡುವ ಒಂದು ವರ್ಗವೇ ನಿರ್ಮಾಣವಾಯಿತು. ಮುಂದೆ ಅದು ಪುರೋಹಿತಶಾಹಿಯಾಗಿ ಜನಸಾಮಾನ್ಯರನ್ನು ಶೋಷಣೆ ಮಾಡಿತು. ತನ್ನ ಪೂಜೆಯನ್ನು ಇನ್ನಾರಿಗೋ ಒಪ್ಪಿಸುವವರನ್ನು ಕಂಡ ಬಸವಣ್ಣನವರು,

ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ?
ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವ ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ?
ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ,
ನಿಮ್ಮನೆತ್ತ ಬಲ್ಲರು, ಕೂಡಲಸಂಗಮದೇವಾ ?

ಪೌರೋಹಿತ್ಯದ ಅನಗತ್ಯತೆಯನ್ನೂ, ವ್ಯಕ್ತಿ ಸ್ವಾತಂತ್ರ್ಯದ ಆವಶ್ಯಕತೆಯನ್ನು ಬಸವಣ್ಣನವರು ಮೇಲಿಂದ ಮೇಲೆ ಪ್ರತಿಪಾದಿಸುತ್ತಾರೆ. ಆಧ್ಯಾತ್ಮ ಸಾಧನೆಯೆಂಬುದು ವ್ಯಾಪಾರವಲ್ಲ, ವಾಣಿಜ್ಯ

ವ್ಯವಹಾರವಲ್ಲ, ಜೀವನ ಯಾಪನೆಗಾಗಿ ಕೈಕೊಳ್ಳುವ ವೃತ್ತಿಯೂ ಅಲ್ಲ. ಈಶ್ವರ ಸಾಕ್ಷಾತ್ಕಾರಕ್ಕೆ ಸ್ವಾನುಭಾವವೇ ಪರಮಪ್ರಮಾಣ, ಅದೇ ಮೂಲಾಧಾರ; ಅಷ್ಟು ಮಾತ್ರವಲ್ಲ ಅವೆರಡೂ ಪರಸ್ಪರ ಭಿನ್ನವಾದುವಲ್ಲ. ಭಗವಂತ ಭಕ್ತರ ನಡುವೆ ನೇರ ಸಂಪರ್ಕವುಂಟಾದಾಗಲೇ ಸ್ವಾನುಭವ ಸಾಧ್ಯ ಎಂದು ಕಟುವಾಗಿ ಹೇಳುತ್ತಾರೆ. ತನಗೂ- ದೇವರಿಗೂ ಮಧ್ಯದಲ್ಲಿ ದಳ್ಳಾಳಿಗಳನ್ನು ತಂದುಕೊಳ್ಳಬಾರದೆಂದು ಬಸವಣ್ಣನವರ ಆಶಯ.

ಹಲವಾರು ಅನ್ಯಾಯ ಮಾರ್ಗಗಳಿಂದ ಅಪಾರವಾಗಿ ಧನ ಸಂಪಾದಿಸಿ ಆ ಪಾಪವನ್ನು ಕಳೆದುಕೊಳ್ಳುವ ಸಲುವಾಗಿ ದೇವರನ್ನು ಭಾಗಿಯನ್ನಾಗಿ ಮಾಡಿಕೊಳ್ಳುವವರನ್ನು ಕಂಡು ಬಸವಣ್ಣನವರು ಕೋಪಗೊಳ್ಳುತ್ತ

ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ!
ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ!
ನಮ್ಮ ಕೂಡಲಸಂಗನ ಶರಣರಿಗಲ್ಲದೆ
ಮಾಡುವ ಅರ್ಥ ವ್ಯರ್ಥ ಕಂಡಯ್ಯಾ.

"ಹನ್ನೆರಡನೆಯ ಶತಮಾನದ ಸಂದರ್ಭದಲ್ಲಿ ಅಸ್ತಿತ್ವದಲ್ಲಿದ್ದ ಜೈನ, ಬೌದ್ಧ, ವೈದಿಕ, ಧರ್ಮಗಳ ಮತ ಪ್ರಚಾರಕ್ಕೆ ಕಟ್ಟು ಬಿದ್ದು ಕೆಲವರು ಮತಾಂತರ ಹೊಂದಿತ್ತಿದ್ದುದನ್ನು ಕಂಡು ಬಾಳಿಗೆ ಹೇಗೆ ಒಂದೇ ಗೊನೆಯ ಹಾಗೆ ಬಾಳುವವನು ಒಂದು ಧ್ಯೇಯಕ್ಕೆ, ಧರ್ಮಕ್ಕೆ ಜೋತು ಬಿದ್ದಿರಬೇಕೆಂಬುದನ್ನು ಈ ವಚನವು ಸ್ಪಷ್ಟ ಪಡಿಸುತ್ತದೆ".[೧೦]

ಭಕ್ತರ ಕಂಡಡೆ ಬೋಳರಪ್ಪಿರಯ್ಯ;
ಸವಣರ ಕಂಡಡೆ ಬತ್ತಲೆಯಪ್ಪಿರಯ್ಯ;
ಹಾರುವರ ಕಂಡಡೆ ಹರಿನಾಮವೆಂಬಿರಯ್ಯಾ.
ಅವರವರ ಕಂಡಡೆ ಅವರವರಂತೆ.
ಎನಗೆ ಸೂಳೆಗೆ ಹುಟ್ಟಿದವರ ತೋರದಿರಯ್ಯ.
ಕೂಡಲಸಂಗಮದೇವರ ಪೂಜಿಸಿ, ಅನ್ಯ ದೈವಂಗಳಿಗೆರಗಿ
ಭಕ್ತರೆನಿಸಿಕೊಂಬ ಅಜ್ಞಾನಿಗಳ ನಾನೇನೆಂಬೆನಯ್ಯಾ!

ಬಸವಣ್ಣನವರ ಬದುಕಿನ ವೈಚಾರಿಕತೆಯನ್ನು ಕುರಿತು ಚಿಂತಿಸುವಾಗ, ನಾವು ಗಮನಿಸಬೇಕಾದ ಅಂಶವೆಂದರೆ ಅವರು ತಮ್ಮ ದೈನಂದಿನ ಬದುಕನ್ನು ಕಂಡ ರೀತಿ. ಧಾರ್ಮಿಕ ಆಚರಣೆಗಳನ್ನು ಖಂಡಿಸಿದ ಬಸವಣ್ಣನವರು ಜನಸಾಮಾನ್ಯರಲ್ಲಿದ್ದ ಅನೀತಿ, ಅಪನಂಬಿಕೆಗಳನ್ನು ಟೀಕಿಸಿದರು. ಮನೆಯ ಬಾಗಿಲಿಗೆ ಬಂದವರಿಗೆ ಅನ್ನ ಹಾಕದೇ ದೇವರಿಗೆ ನೈವೇದ್ಯವನ್ನಿಡುವ; ಹೊಟ್ಟೆಗೆ ಅನ್ನವಿಲ್ಲದ ಗೋಳಾಡುವ ಅಂಗವಿಕಲರಿಗೆ ಕಾಸುಹಾಕದೆ ಅರ್ಚಕ ಹಿಡಿದು ತಂದ ಮಂಗಳಾರತಿ ತಟ್ಟೆಗೆ ಕಾಸುಹಾಕುವ; ಆ ಮೂಲಕ ತಮಗೆ ದೈವ ಕೃಪೆ ಒದಗಿತೆಂದು ಸಂತೃಪ್ತಿಗೊಳ್ಳುವ

೧೦. ಬಸವ ಪರುಷ, ಹಾ.ಮಾ. ನಾಯಕ, ಪುಟ-೧೫೮

ಜನರ ಕುರುಡು ನಂಬಿಕೆಯನ್ನು ಖಂಡಿಸಿ, ವಿಪರ್ಯಾಸ ಪ್ರವೃತ್ತಿಯನ್ನು ಗೇಲಿಮಾಡಿ, ನೈಜ ದಾರಿಯತ್ತಾ ಅವರ ಗಮನ ಸೆಳೆದಿದ್ದಾರೆ.

ಕಲ್ಲುನಾಗರ ಕಂಡೆಡೆ ಹಾಲನೆರೆಯೆಂಬರು;
ದಿಟದ ನಾಗರ ಕಂಡೆಡೆ ಕೊಲ್ಲೊಂಬರಯ್ಯಾ!
ಉಂಬ ಜಂಗಮ ಬಂದಡೆ ನಡೆಯೆಂಬರು;
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ!
ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನವ ಮಾಡಿದಡೆ,
ಕಲ್ಲ ತಾಗಿದ ಮಿಟ್ಟೆಯಂ ತಪ್ಪರಯ್ಯಾ.

ನಾಗಂಗೆ ಹೊಸತನಿಕ್ಕಿಹೆವೆಂಬರು;
ನಾಗ ಬಂದಡೆ ಕೋಲ ಕಳೆದುಕೊಂಬರು!
ಆಗದಯ್ಯಾ! ಜಂಗಮ ಲಿಂಗವೆಂಬ ಶಬ್ದವಾಗದಯ್ಯಾ!
ಕೂಡಲಸಂಗಮದೇವರಲ್ಲಿ ಸಿಂಧೂಬಲ್ಲಾಳಂಗಲ್ಲದೆ ಆಗದಯ್ಯಾ.

ಜಂಗಮ ಸೇವೆಗಿಂತ ಲಿಂಗ ಸೇವೆಯೇ ಮೋಕ್ಷದಾಯಕವೆಂದು ನಂಬಿ ನಡೆಯುತ್ತಿದ್ದ ಜನಗಳಿಗೆ, ವಾಸ್ತವ ಜೀವನದ ಅರಿವು ಮಾಡಿಕೊಡಲು ಬಸವಣ್ಣನವರು ಪ್ರಯತ್ನಿಸಿದರು.

ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರನೆರೆದಡೆ
ಮೇಲೆ ಪಲ್ಲವಿಸಿತ್ತು ನೋಡಾ!
ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದಡೆ
ಮುಂದೆ ಸಕಲ ಪದರ್ಥವನೀವನು.
ಆ ಜಂಗಮದ ಹರನೆಂದು ಕಂಡು ನರನೆಂದು ಭಾವಿಸಿದಡೆ
ನರಕ ತಪ್ಪದು, ಕಾಣಾ, ಕೂಡಲಸಂಗಮದೇವಾ.

ಮರದ ಎಲೆಗೆ ನೀರು ಬಿಟ್ಟರೆ ಅದು ಚಿಗುರುವುದಿಲ್ಲ; ಬೇರಿಗೆ ನೀರು ಹೊಯ್ದರೆ ಮೇಲೆ ಪಲವಿಸುತ್ತದೆ. ಹಾಗೆಯೇ ಜಂಗಮನಿಗೆ ಬಡಿಸಿದರೆ ಲಿಂಗಕ್ಕೆ ತಲುಪಿ ಸಮಾಧಾನಗೊಳ್ಳುತ್ತದೆ. 'ಜನಸೇವೆಯೇ ಜನಾರ್ಧನನ ಸೇವೆ, ದೇವ ಸೇವೆಯೇ ಈಶ ಸೇವೆ' ಎಂಬ "ಈ ಯುಗದ ಘೋಷಣೆಗಳಿಗೆ ಬಸವಣ್ಣನವರ ಮಾತು ಮುಂಜಾವಿನ ಕೋಳಿ ಕೂಗಿದಂತಿದೆ".[೧೧] - 'ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು'.

ಅಂದಿನ ಸಮಾಜದಲ್ಲಿ ಕೆಲವು ಜನರು ಈ ಲೋಕದಲ್ಲಿ ಏನೇ ಮಾಡಿದರೂ ಚಿಂತೆಯಿಲ್ಲ; ಬಡವರ ತಲೆ ಹೊಡೆದು ಹಣ ಸಂಪಾದಿಸಿದರೂ ಮುಪ್ಪಿನ ಸಮಯದಲ್ಲಿ ಪುರಾಣ, ಪುಣ್ಯಕಥೆಗಳನ್ನು ಕೇಳಿದರೆ, ದೇವಸ್ಥಾನ, ಕೆರೆ-ಕುಂಟೆ ಕಟ್ಟಲು ಹಣ ಸಹಾಯ ಮಾಡಿದರೆ, ಪರಪೀಡನ ಮಾಡಿದ್ದರೂ

೧೧. ಅಡಿಟಿಪ್ಪಣಿ ೧೦ರಂತೆ, ಪುಟ-೧೫೭

ಕರಾಡತನ ಮಾಡುವ ಸಭೆಗಳಲ್ಲಿ ಭಾಗವಹಿಸಿದರೆ ಸನ್ಮಾರ್ಗಿಗಳೆಂದೂ ಪರಲೋಕದಲ್ಲಿ ಸದ್ಗತಿಗೆ ಸಂಚಕಾರವನ್ನು ಕೊಟ್ಟಂತೆ ಆಯಿತೆಂದೂ ನಂಬಿಕೊಂಡು ಅನ್ಯಾಯ ಮಾಡುತ್ತಿದ್ದಿರಬಹುದು. ಇಂಥ ವಿಪರ್ಯಾಸವನ್ನು ಕಂಡ ಬಸವಣ್ಣನವರು ಅವರ ಪೊರೆ ಬೆಳೆದ ಕಣ್ಣಿಗೆ ನೇತ್ರ ಚಿಕಿತ್ಸೆ ಮಾಡಿದರು.

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ;
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ;
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ,
ಕೂಡಲಸಂಗಮದೇವಾ.

ತಮ್ಮ ನಡೆ-ನುಡಿಗಳಿಂದ ಈ ಲೋಕದಲ್ಲಿ ಗಳಿಸಿದ್ದೇ ಪರಲೋಕದಲ್ಲಿ ಸಿಕ್ಕುವುದು-ಎಂಬ ಬತ್ತಲೆ ದಿಟವನ್ನು, ಕತ್ತಲಿನಲ್ಲಿ ತಡಕಾಡುವ ಡಾಂಭಿಕ ಜನಕ್ಕೆ ಹೇಳಿ ಅನ್ಯ ಲೋಕದ ಚಿಂತ ಬಿಟ್ಟು ಈ ಲೋಕದಲ್ಲಿ ಸರಿಯಾಗಿ ಬಾಳುವ ದೀಕ್ಷೆ ಕೊಡುತ್ತಾರೆ.

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿಭೋ!
ಸತ್ಯವ ನುಡಿವುದೆ ದೇವಲೋಕ; ಮಿಥ್ಯವ ನುಡಿವುದೆ ಮರ್ತ್ಯಲೋಕ.
ಆಚಾರವೇ ಸ್ವರ್ಗ, ಅನಾಚಾರವೇ ನರಕ
ಕೂಡಲಸಂಗಮದೇವಾ, ನೀವೆ ಪ್ರಮಾಣು.

ಪುಣ್ಯ ಪಾಪಗಳೆಂಬವು ತಮ್ಮ ಇಷ್ಟವು ಕಂಡಿರೆ,
ಅಯ್ಯಾ ಎಂದಡೆ ಸ್ವರ್ಗ, ಎಲವೊ ಎಂದಡೆ ನರಕ!
ದೇವಾ, ಭಕ್ತ, ಜೀಯಾ ಎಂಬ ನುಡಿಯೊಳಗೆ
ಕೈಲಾಸ ಮೈದುವುದೆ ಕೂಡಲಸಂಗಮದೇವಾ.

ಸಮಾಜ ವ್ಯಕ್ತಿಗಳಿಂದ ಕೂಡಿದ್ದು, ಸಮಾಜದ ಉದ್ಧಾರವೆಂದರೆ ವ್ಯಕ್ತಿಗಳ ಉದ್ಧಾರ. ಪ್ರತಿಯೊಬ್ಬರೂ ನೆಟ್ಟಗೆ, ನೇರಗೆ ಆದರೆ ಸಮಾಜವೂ ಪರೋಕ್ಷವಾಗಿ ನೆಟ್ಟಗೆ, ನೇರಗೆ ಆದಂತೆ. ಅವರವರ ಮನೆಯ ದೀಪವನ್ನು ಅವರವರೇ, ಹಚ್ಚಿಕೊಂಡರೆ ಯಾರೂ ಯಾರ ಮನೆಯ ದೀಪವನ್ನೂ ಹಚ್ಚಬೇಕಾಗಿಲ್ಲ; ಅವರ ಮನೆಯ ಕತ್ತಲೆಯನ್ನು ಕಳೆದೆವೆಂದು ಕೊಚ್ಚಿಕೊಳ್ಳಬೇಕಾಗಿಲ್ಲ. ತಮ್ಮ ಮನೆಯನ್ನು ಕತ್ತಲೆಯ ಗಣಿಯನ್ನಾಗಿ ಮಾಡಿಕೊಳ್ಳದಿರುವ ಬಗ್ಗೆ ಎಚ್ಚರವನ್ನು ಈ ವಚನದಲ್ಲಿ ಕಾಣಬಹುದು.

ಲೋಕದ ಡೊಂಕ ನೀವೇಕೆ ತಿದ್ದುವಿರಿ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲಸಂಗಮದೇವ!

ಪರರ ಚಿಂತೆ ನಮಗೇಕಯ್ಯಾ? ನಮ್ಮ ಚಿಂತೆ ನಮಗೆ ಸಾಲದೇ ?
ಕೂಡಲಸಂಗಯ್ಯ ಒಲಿದಾನೊ ಒಲ್ಲನೋ ಎಂಬ ಚಿಂತೆ
ಹಾಸಲುಂಟು, ಹೊದೆಯಲುಂಟು.

ಎಂದು ತಿಳಿಯ ಹೇಳಿದರು. ಅದರಂತೆ ಬಹಿರಂಗದ ಮೆರೆತವನ್ನು ನಿಂದಿಸಿ ಅಂತರಂಗ ಶುದ್ಧಿಯ ಹಿರಿಯ ಮೌಲ್ಯ ಸಾರಿದರು.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ;
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ,
ಇದೇ ನಮ್ಮ ಕೂಡಲಸಂಗಮದೇವನೊಲಿಸುವ ಪರಿ.

ಮಾನವನ ಮನಃಶುದ್ಧಿಗೆ ಮೊದಲು ಮನ್ನಣೆ ಕೊಡಬೇಕೆಂದು ಹೇಳಿದ ಬಸವಣ್ಣನವರು ಸ್ವಧರ್ಮಿಯರೆನ್ನದೆ, ಪರಧರ್ಮಿಯರೆನ್ನದೆ ತಪ್ಪಿತಸ್ಥರನ್ನೆಲ್ಲ ತಿದ್ದಿದರು, ನೇರ್ಪುಗೊಳಿಸಿದರು :

ಒಳಗೆ ಕುಟಿಲ, ಹೊರಗೆ ವಿನಯವಾಗಿ ಭಕ್ತರೆನಿಸಿಕೊಂಬವರ
ಬಲ್ಲನೊಲ್ಲನಯ್ಯಾ ಲಿಂಗವು
ಅವರು ಸತ್ಪಥಕ್ಕೆ ಸಲ್ಲರು ಸಲ್ಲರಯ್ಯಾ
ಒಳ ಹೊರಗೊಂದಾಗದವರಿಗೆ
ಅಳಿಯಾಸೆದೋರಿ ಬೀಸಾಡುವನವರ
ಜಗದೀಶ ಕೂಡಲಸಂಗಮದೇವಾ.

ಸಾರ! ಸಜ್ಜನರ ಸಂಗವ ಮಾಡುವುದು;
ದೂರ! ದುರ್ಜನರ ಸಂಗ ಬೇಡವಯ್ಯಾ,
ಆವ ಹಾವಾದಡೇನು? ವಿಷವೊಂದೆ,
ಅಂತವರ ಸಂಗ ಬೇಡವಯ್ಯಾ.
ಅಂತರಂಗ ಶುದ್ಧವಿಲ್ಲದವರ ಸಂಗ
ಸಿಂಗಿ ಕಾಳಕೂಟ ವಿಷವೊ, ಕೂಡಲಸಂಗಮದೇವಾ.

ಬಸವಣ್ಣನವರು ಸಿದ್ಧಾಂತ ಲೋಲುಪರಲ್ಲ, ನಿಚ್ಚಟ ಅನುಷ್ಠಾನಶೀಲರು. ಸೋಗು ಬೂಟಾಟಿಕೆಗಳಿಗೂ ಅವರಿಗೂ ಬಲು ದೂರು. ಸಮಾಜದ ಕುಂದುಕೊರತೆಗಳನ್ನು ಸುಳ್ಳು ವಂಚನೆಗಳನ್ನು ಢಾಂಬಿಕತೆಯನ್ನು ಆಶುಕವಿತೆಯಂತಿರುವ ಈ ವಚನ ವಿಡಂಬಿಸುತ್ತದೆ.

ಎಲವೊ, ಎಲವೋ, ಪಾಪಕರ್ಮವ ಮಾಡಿದವನೇ,
ಎಲವೊ, ಎಲವೋ ಬ್ರಹ್ಮೇತಿಯ ಮಾಡಿದವನೇ,
ಒಮ್ಮೆ ಶರಣೆನ್ನೆಲವೋ!
ಒಮ್ಮೆ ಶರಣೆನ್ನದೆ ಪಾಪಕರ್ಮ ಓಡುವುವು.
ಸರ್ವಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದವು.
ಒಬ್ಬಗೆ ಶರಣೆನ್ನು, ನಮ್ಮ ಕೂಡಲಸಂಗಮದೇವಂಗೆ.

ಬಸವಣ್ಣನವರು ಸಮಾಜದಲ್ಲಿ ಭ್ರಾತೃತ್ವ ಭಾವನೆಯಿರಬೇಕೆಂದು ಆಶಿಸಿದವರು. ಅನ್ಯೋನ್ಯತೆ, ಸಹಕಾರ ಸಮಾಜದ ಅಡಿಗಲ್ಲು ಎಂಬುದರ ಅರಿವು ಬಸವಣ್ಣನವರಿಗೆ ಇತ್ತು. ಆದರೆ ಸಮಾಜದಲ್ಲಿ ಕಂಡುಬರುವ ಅಸಹಕಾರ, ವೈಷಮ್ಯ, ಸ್ವಾರ್ಥ ಮುಂತಾದ ಗುಣಗಳನ್ನು ಕಂಡು ಮನುಷ್ಯರಿಗಿಂತ ಪಶು-ಪಕ್ಷಿಗಳೆಷ್ಟೋ ಈ ನಿಟ್ಟಿನಲ್ಲಿ ಬಹುಪಾಲು ವಾಸಿಯೆನಿಸಿರಬೇಕು.

ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು?
ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನ್ನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದಡೆ ಕಾಗೆ ಕೋಳಿಗಿಂತ ಕರಕಷ್ಟ
ಕೂಡಲಸಂಗಮದೇವಾ!

'ಎಲ್ಲವೂ ಎಲ್ಲರಿಗಾಗಿ, ಎಲ್ಲರಿಂದ' - ಎಂಬ ಇಂದಿನ ಸರ್ವೋದಯ ಸಮಾಜದ ಬೀಜ ಮಂತ್ರವನ್ನು ಬಸವಣ್ಣನವರು ಕಂಡು ಸಾರಿದ್ದರು ಎಂಬುದು ಆಶ್ಚರ್ಯಕರ. ಬಸವಣ್ಣನವರಲ್ಲಿದ್ದ ಇಂಥ ಬಹುಮುಖ ಪ್ರತಿಭೆಯನ್ನು ಕಂಡೇ 'ಕಾಯಕ ರೋಗಿ', 'ಯುಗಪುರುಷ', 'ಭಕ್ತಿ ಭಂಡಾರಿ' ಇತ್ಯಾದಿ ರೀತಿಯಲ್ಲಿ ಸಂಬೋಧಿಸುವುದು ಅರ್ಥಪೂರ್ಣವಾಗಿದೆ.

ಕಂಡ ಭಕ್ತರಿಗೆ ಕೈಮುಗಿವಾತನೆ ಭಕ್ತ
ಮೃದುವಚನವೆ ಸಕಲ ಜಪಂಗಳಯ್ಯ,
ಮೃದುವಚನವೆ ಸಕಲ ತಪಂಗಳಯ್ಯ.
ಸದುವಿನಯವೆ ಸದಾಶಿವನೊಲುಮೆಯಯ್ಯಾ,
ಕೂಡಲಸಂಗಯ್ಯನಲ್ಲದೊಲ್ಲನಯ್ಯಾ.

ಏನಿ ಬಂದಿರಿ, ಹದುಳವಿದ್ದಿರೆ ಎಂದರೆ
ನಿಮ್ಮೈಸಿರಿ ಹಾರಿ ಹೋಹುದೆ?
ಕುಳ್ಳಿರೆಂದಡೆ ನೆಲ ಕುಳಿಹೋಹುದೆ?
ಒಡನೆ ನುಡಿದಡೆ ಶಿರ-ಹೊಟ್ಟೆಯೊಡೆವುದೆ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿರ್ದೊಡೆ,

ಕೆಡಹಿ ಮೂಗಕೊಯ್ಯದೆ ಮಾಣ್ಬನೆ ಕೂಡಲಸಂಗಮದೇವರು.

ಎಂಬುದಾಗಿ ಹೇಳಿದ್ದಾರೆ.

ಸಾಮಾಜಿಕ ಕ್ರಾಂತಿಗೆ ಕಾರಣರಾದ ಬಸವಣ್ಣನವರು ಆರ್ಥಿಕ ಚಳುವಳಿಗೂ ಕಾರಣರಾದರು. ಹಣವನ್ನು ಮಾಯೆ ಎಂದು ನಿರಾಕರಿಸದೆ ಹಣ ಪವಿತ್ರವಾದದ್ದು, ಮಾನವನ ಎಲ್ಲ ಚಟುವಟಿಕೆಗಳಿಗೂ ಮೂಲಭೂತವಾದದ್ದು. ಆದರೆ ಅದೇ ಸರ್ವಸ್ವವಲ್ಲ, ಕೊನೆಯ ಗುರಿಯಲ್ಲ, ಕೊನೆಯ ಗುರಿಯನ್ನು ಸಾಧಿಸುವ ನಿಮಿತ್ತ ಸಾಧನ. ಇದನ್ನು ತಿರಸ್ಕರಿಸುವಂತಿಲ್ಲ, ಪವಿತ್ರ ಸಾಧನವಾಗಿ ಪರಿವರ್ತಿಸಿಕೊಳ್ಳಬೇಕು ಎಂಬುದು ಅವರ ದೃಷ್ಟಿ. ನಿಜವಾಗಿ ನೋಡಿದರೆ ಎಲ್ಲಾ ಸಾಮಾಜಿಕ ವ್ಯವಸ್ಥೆಯ ಅಡಿಗಲ್ಲು ಅರ್ಥವ್ಯವಸ್ಥೆ, ಒಂದಲ್ಲಾ ಒಂದು ರೂಪದಲ್ಲಿ ಅದರ ಪ್ರಭಾವ ಸಾಮಾಜಿಕ ಏರು ಪೇರುಗಳನ್ನು ನಿರ್ಣಯಿಸುತ್ತದೆ. ಆರ್ಥಿಕ ಶೋಷಣೆಯೇ ಎಲ್ಲ ಸಾಮಾಜಿಕ ಶೋಷಣೆಗಳ ಮೂಲ. ಇದನ್ನು ಗ್ರಹಿಸಿದ ಬಸವಣ್ಣನವರು ಸಿರಿವಂತಿಕೆಯ ಅಮಲಿನಲ್ಲಿರುವವರನ್ನು ಕಂಡು ಒಂದು ಕಡೆ ಹೀಗೆ ಹೇಳುತ್ತಾರೆ.

ಹಾವು ತಿಂದವರ ನುಡಿಸಬಹುದು;
ಗರ ಹೊಡೆದವರ ನುಡಿಸಬಹುದು;
ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ!
ಬಡತನವೆಂಬ ಮಂತ್ರವಾದಿ ಹೋಗಲು
ಒಡನೆ ನುಡಿವರು, ಕೂಡಲಸಂಗಮದೇವಾ!

ಹೀಗೆ ಸಿರಿಗರ ಹೊಡೆದವರು ಒಂದು ರೀತಿಯಾದರೆ, ವಿನಯಕ್ಕೆ ಕಾರಣವಾಗಬೇಕಾದ ವಿದ್ಯೆಯ ಗರ್ವಗ್ರಹವೂ ಇನ್ನೊಂದು ರೀತಿಯ ಪೀಡೆಯಾಗಬಹುದು. ವಿಚಾರವಿಲ್ಲದ ಆಡಂಬರ ಅಹಂಕಾರಗಳಿಗೆ ಕಾರಣವಾಗಬಹುದು. ಅಂತಹವರನ್ನು ಕುರಿತು ಬಸವಣ್ಣ ಹೀಗೆ ಹೇಳಿದ್ದಾರೆ.

ವೇದವನೋದಿದ ವಿಪ್ರರು ಹೊನಲಲ್ಲಿ ಹೋದ ಕೇಡ ನೋಡಿರೇ!
ಭರ್ಗೋದೇವಸ್ಯ ಧೀಮಹಿ ಎಂಬರು:
ಒಬ್ಬರಿಗಾಗಿ ವಿಚಾರವಿಲ್ಲ, ನೋಡಿರೆ!
ಕೂಡಲಸಂಗಮದೇವಾ.

ಎಂದು ಅವರ ಅಜ್ಞಾನಕ್ಕೂ ಅಂಧಶ್ರದ್ಧೆಗೂ ಅನುಕಂಪ ಪಡುತ್ತಾರೆ. ಸರ್ವರ ಉದ್ಧಾರಕ್ಕೆ ಕಾರಣವಾಗುವ ಸರ್ವೋದಯ ಮಾರ್ಗವೊಂದನ್ನು ಅವರು ಆವಿಷ್ಕರಿಸಿದರು. ಅದೇ ಕಾಯಕದ ಪರಿಕಲ್ಪನೆ. "ಸತ್ಯಾಗ್ರಹ, ಸರ್ವೋದಯ- ಇವು ಗಾಂಧೀಜಿಯವರ ಕೊಡುಗೆಯಾದರೆ ಕಾಯಕ ಮತ್ತು ದಾಸೋಹ - ಇವು ಬಸವಣ್ಣನವರ ಪೂರ್ಣ ಜೀವನದ ಸಾಧನೆಯ ಎರಡು ಕಣ್ಣುಗಳು".[೧೨]

ಬಸವಣ್ಣನವರ ಸಾಮಾಜಿಕ ಮತ್ತು ಆರ್ಥಿಕ ಸಿದ್ಧಾಂತಕ್ಕೆ ಕಾಯಕ ಅಡಿಗಲ್ಲಾಯಿತು. ಅದು ಸಿದ್ಧಾಂತವಾಗಿ ಮಾತ್ರ ಉಳಿಯದೇ ಸಾವಿರಾರು ಜನರ ಆಚರಣೆಯ ಆಂದೋಲನವಾಯಿತು.

೧೨. ಅಡಿಟಿಪ್ಪಣಿ ೧ರಂತೆ, ಪುಟ-೪೬

ಶರಣರ ಸಾಮಾಜಿಕ ತತ್ವಕ್ಕೆ ಪೂರ್ಣ ಜೀವನದ ದಾರ್ಶನಿಕತೆಯನ್ನು ಇದು ತಂದುಕೊಟ್ಟಿತು. ಇಂದಿನ ಅತ್ಯಂತ ಆಧುನಿಕ ದೃಷ್ಟಿಗೂ ಆಧುನಿಕವಾಗಿ ಸಾರ್ವಕಾಲಿಕವಾದ ಸತ್ವ ಈ ಕಾಯಕದ ಕಲ್ಪನೆಯಲ್ಲಿದೆ. ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ಕೆಲಸವನ್ನು ಮಾಡುತ್ತಲೇ ಇರಬೇಕು. ಕೆಲಸವನ್ನು ಮಾಡುವವನಿಗೆ ಇನ್ನೊಬ್ಬನ ದುಡಿಮೆಯಲ್ಲಿ ಕುಳಿತು ತಿನ್ನುವ ಅಧಿಕಾರವಿಲ್ಲ. ಯಾವುದೇ ಉದ್ಯೋಗವನ್ನು ಕೈಗೊಂಡಿದ್ದರೂ ಅದು ವ್ಯಕ್ತಿಯ ಸರ್ವಾಂಗೀಣ ವಿಕಾಸಕ್ಕೆ ಅಡ್ಡಿಯಾಗಬಾರದು. ಉದ್ಯೋಗದಲ್ಲಿ ಮೇಲು-ಕೀಳುಗಳಿಲ್ಲ, ಅದನ್ನು ನಿರ್ವಹಿಸುವ ಮನೋಧರ್ಮದಲ್ಲಿದೆ. ಹಾಗೆ ನಿರ್ವಹಿಸಿದಾಗ ಮಾತ್ರ ಉದ್ಯೋಗ ಕಾಯಕವಾಗುತ್ತದೆ. ಹೀಗೆ ಕಾಯಕದಿಂದ ಪಡೆದ ಫಲವನ್ನು ಸಮಾಜಕ್ಕೂ ಅರ್ಪಿಸಬೇಕು. ಇದೇ ದಾಸೋಹ.

ಸಮಾಜ ಸ್ವಯಂಪೂರ್ಣವಾಗಬೇಕಾದರೆ, ಸುಖಮಯವಾಗಬೇಕಾದರೆ ಎಲ್ಲರೂ ಉದ್ಯೋಗಗಳಲ್ಲಿ ನಿರತರಾಗಲೇ ಬೇಕು. ಭಿಕ್ಷೆ ಬೇಡುವುದನ್ನು ಅವರು ಕಟುವಾಗಿ ಖಂಡಿಸಿದರು. ಇನ್ನೊಬ್ಬರ ಹಂಗಿನಲ್ಲಿ ಬಾಳುವ ಜೀವನ, ಜೀವನವೇ ಅಲ್ಲ. ಅನ್ಯರ ಮನೆಗೆ ಹೋಗಿ 'ತನ್ನುದರವ ಹೊರೆಯದ ಅಚ್ಚ ಶರಣರ ಕಂಡರೆ ನಿಶ್ಚಲವಾಗಿ ಕೂಡಲಸಂಗಯ್ಯನೆಂಬೆ' ಎನ್ನುವರು.

ಬಸವಣ್ಣ ಈ ನಿಲುವಿನಿಂದ ಉದ್ಯೋಗಗಳನ್ನು ನೋಡುವ ಸಾಮಾಜಿಕ ದೃಷ್ಟಿಯೇ ಬದಲಾಯಿತು. ದುಡಿಮೆಯ ಸಾಮಾಜಿಕ ಮೌಲ್ಯ ಹೆಚ್ಚಿತು. ದುಡಿಮೆ ಅನಿವಾರ್ಯವೆಂಬುದರ ಜೊತೆಗೆ ಅಷ್ಟೇ ನ್ಯಾಯ ಮಾರ್ಗದಲ್ಲಿರಬೇಕು ಎಂಬುದಕ್ಕೂ ಒತ್ತು ಕೊಟ್ಟಿತು. ಸಮಾಜದ ಹಿತಕ್ಕೆ ಅಗತ್ಯವಾದ ಉದ್ಯೋಗ ಯಾವುದೇ ಆಗಲಿ ಅದು ಸತ್ಯಶುದ್ಧವಾಗಿದ್ದರೆ ಶ್ರೇಷ್ಠವಾದುದಾಗುತ್ತದೆ. ಅದಕ್ಕೆ ಬದಲಾಗಿ ಅಸತ್ಯ, ಅಧರ್ಮಗಳಿಂದ ಮಾಡುವ ದುಡಿಮೆ ಪಾಪದ ಹಣ. ತಾನು ಕೈಕೊಂಡ ಉದ್ಯೋಗ ಸಮಾಜಕ್ಕೆ ಹಾನಿಕರವಾಗದೆ, ಸಮಾಜದ ಆವಶ್ಯಕತೆಗಳನ್ನು ಪೂರೈಸುವಂತಿರಬೇಕು. ಬಸವಣ್ಣನವರು ಬ್ರಾಹ್ಮಣ್ಯವನ್ನು ನಿರಾಕರಿಸಿದರೂ ಅವರು ಅಂದಿನ ರಾಜಶಾಹಿಯೊಂದಿಗೆ ಹೊಂದಿಕೊಂಡು ಬದುಕಬೇಕಾಗಿ ಬಂದದ್ದರಿಂದ, ಬೇರೆ ಬಗೆಯ ಬಿಕ್ಕಟ್ಟುಗಳನ್ನು ಎದುರಿಸಬೇಕಾಯಿತು.

ಅಂದಿನ ಆಂದೋಲನಕ್ಕೆ, ಅದರ ಸಂಘಟನೆಗೆ ಮತ್ತು ಅದರ ನಿರ್ವಹಣೆಗೆ ಸಾಕಷ್ಟು ಜನಬಲ ಮತ್ತು ಧನಬಲ ಅಗತ್ಯವಾಗಿದ್ದು ಬಸವಣ್ಣನವರ ಅಧಿಕಾರದಿಂದಲೂ ನೆರವು ದೊರೆತಿರಬೇಕು. ಅವರು ರಾಜನೊಂದಿಗೆ, ರಾಜತ್ವದೊಂದಿಗೆ ತಮಗೆ ಇರುವ ಸಂಬಂಧಗಳನ್ನು ತಮ್ಮ ನಿಲುವುಗಳನ್ನೂ ಅತ್ಯಂತ ಸ್ಪಷ್ಟವಾಗಿ ಬಿಚ್ಚಿಡುತ್ತಾ ತಮ್ಮ ಸುತ್ತಣ ಜನ ಆಗಾಗ ಸಂಸಯ ಪಟ್ಟರೂ ಒಟ್ಟಾರೆಯಾಗಿ ತಮ್ಮನ್ನು 'ಇವನಾರವ ಇವನಾರವ' ಎಂದುಕೊಳ್ಳದೆ ಇವನಮ್ಮವ ಇವ ನಮ್ಮವ'ನೆಂದು ಒಪ್ಪಿಕೊಳ್ಳುವಂತೆ ನಡೆದುಕೊಂಡರು. ಬಸವಣ್ಣನವರು ಮೂಲತಃ ಅನುಭಾವಿಕ ನಿಲುವಿನ ವ್ಯಕ್ತಿಯಾದ್ದರಿಂದ ಅವರ ಪಾಲಿಗೆ ಅಧಿಕಾರ ಇತ್ಯಾದಿಗಳ ಬಗ್ಗೆ ಅಂತಹ ಭ್ರಮೆಗಳೇನೂ ಇರಲಿಲ್ಲ; ಲೋಕದ ಭೋಗ-ವೈಭವಗಳ ಬಗೆಗೆ ವಿರಕ್ತನಾಗುವಂತಹ ಚೇತನಕೆ ಇವು ಯಾವುವು ದೊಡ್ಡವೆಂದು ತೋರುವುದಿಲ್ಲ. ಅವರಿಗೆ ಭೋಗ-ವೈಭವಗಳಿಗಿಂತ ಸತ್ಯದ ನಿಲುವನ್ನರಿಯುವುದು

ಮುಖ್ಯವಾಗಿತ್ತು.

ಆನೆಯನೇರಿಕೊಂಡು ಹೋದಿರೆ ನೀವು,
ಕುದುರೆಯನೇರಿಕೊಂಡು ಹೋದಿರೆ ನೀವು
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ, ಅಣ್ಣಾ!
ಸತ್ಯದ ನಿಲುವನರಿಯದೆ ಹೋದಿರಲ್ಲಾ!

ಎಂಬ ಮಾತಿನಲ್ಲಿ ಈ ಲೋಕದ ಭೋಗ-ಭಾಗ್ಯಗಳ ಬೆನ್ನು ಹತ್ತಿ ಸತ್ಯದ ನಿಲುವನ್ನರಿಯದೆ ವ್ಯರ್ಥವಾಗಿ ಹೋದ ಪದವಿಗಳ ಮತ್ತು ಅಧಿಕಾರಿಗಳ ಬಗ್ಗೆ ತಾಳಿದ ಕನಿಕರ ಅಭಿವ್ಯಕ್ತವಾಗಿದೆ.

ಅರಸು ಮುನಿದಡೆ ನಾಡೊಳಗಿರಬಾರದಯ್ಯಾ;
ಗಂಡ ಮುನಿದಡೆ ಮನೆಯೊಳಗಿರಬಾರದಯ್ಯಾ.
ಕೂಡಲಸಂಗಮದೇವಾ,
ಜಂಗಮ ಮುನಿದಡೆ ನಾನೆಂತು ಬದುಕುವೆ?

ಈ ಮಾತುಗಳಲ್ಲಿ ರಾಜನ ಆಗ್ರಹಕ್ಕೊಳಗಾದರೆ ಅಂತಹವನಿಗೆ ಉಳಿಗಾಲವೇ ಇಲ್ಲ ಎಂಬ ಕಟು ಸತ್ಯವನ್ನು ಅರಿತವರಾಗಿದ್ದರು. ರಾಜ ಕೂಡ ಎಲ್ಲರಂತೆ ಒಬ್ಬ ಸಾಮಾನ್ಯ ಮನುಷ್ಯ, ಅವನಿಗೆ ಬೆಲೆ ಬರುವುದು ಅವನ ರಾಜತ್ವ ಅಥವಾ ರಾಜ ಪದವಿಯಿಂದ. ಅವನೂ ಮೃತ್ಯುವಿಗೆ ಒಳಗಾಗುವ ಒಬ್ಬ ಮನುಷ್ಯ, ಇಂತಹವನು ಸತ್ತರೆ ಉಳಿದವರ ಶವಗಳಿಗೆ ಇವನ ಶವಕ್ಕೂ ಏನು ವ್ಯತ್ಯಾಸ ?

ವ್ಯಾಧನೊಂದು ಮೊಲನ ತಂದಡೆ ಸಲುವ ಹಾಗಕ್ಕೆ ಬಿಲಿವರಯ್ಯಾ,
ನೆಲನಾಳ್ವನ ಹೆಣನೊಂದಡೆ ಒಂದಡಿಕೆಗೆ ಕೊಂಬವರಿಲ್ಲ ನೋಡಯ್ಯಾ!
ಮೊಲನಿಂದ ಕರಕಷ್ಟ ನರನ ಬಾಳುವೆ!
ಸಲೆನಂಬೊ ನಮ್ಮ ಕೂಡಲಸಂಗಮದೇವನ.

ರಾಜನಾದವನ ಶವಕ್ಕೆ ಒಂದು ಸತ್ತ ಮೊಲಕ್ಕಿರುವ ಬೆಲೆಯೂ ಇಲ್ಲ, ಇಂಥ ನಿಕೃಷ್ಟವಾದ ಪದಾರ್ಥ ಅದು. ಎಲ್ಲ ಅನುಭಾವಗಳಂತೆ 'ಮೃತ್ಯುತತ್ವ'ವನ್ನು ಕೇಂದ್ರದಲ್ಲಿರಿಸಿಕೊಂಡು, ಲೋಕದ ಪದವಿ-ಐಶ್ವರ್ಯ ಇತ್ಯಾದಿಗಳನ್ನು ಒರೆಗೆ ಹಚ್ಚುವ ಬಸವಣ್ಣನವರಿಗೆ, ಅವರು ವಹಿಸಿಕೊಂಡ ಪದವಿ ಕೂಡಾ ನಿಕೃಷ್ಟವಾದದ್ದೆ. ಅವರು ಬಹಿರಂಗದಲ್ಲಿ ಯಾವನೋ ಒಬ್ಬ ಒಡೆಯನ ಸೇವೆಗೆ ನಿಂತಂತೆ ಕಾಣಿಸಿದರೂ- ಅಂತರಂಗದಲ್ಲಿ ಅವರ ಒಡೆಯರೇ ಬೇರೆ 'ಎನಗೆ ಒಡೆಯರುಂಟು ಕೂಡಲಸಂಗನ ಶರಣರು' ಎಂದು ಹೇಳುವುದರ ಮೂಲಕ ಮಾನಿಸವಾಗಿ ತಮ್ಮ ನಿಷ್ಠೆಯಾರಿಗೆಎಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ.

ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ,
ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯಾ.

ಎಂಬುದನ್ನು ಅವರು ಚೆನ್ನಾಗಿ ಬಲ್ಲರು. ಒಬ್ಬ ಮನುಷ್ಯನಾಗಿ ಬುದುಕುವುದಕ್ಕೆ ಯಾವುದಾದರೊಂದು ಉದ್ಯೋಗವನ್ನು ಅವಲಂಬಿಸುವುದು ತಪ್ಪೇನಲ್ಲ. ಆದರೆ ತಮ್ಮ ಈ ವ್ಯವಹಾರ ಮತ್ತು ಪರಸೇವೆ ಲಿಂಗಾರ್ಚನೆ ಮತ್ತು ಜಂಗಮ ದಾಸೋಹಕ್ಕೆ ಈ ಎರಡೂ ಮೂಲತಃ ಆಧ್ಯಾತ್ಮಿಕವಾದ ಕ್ರಿಯೆಗಳು. ಇದು ತಮ್ಮ ಸ್ವಾರ್ಥಕ್ಕಾಗಿ ಅಥವಾ ಕೇವಲ ಉದರ ಪೋಷಣೆಯ ಏಕೈಕ ಉದ್ದೇಶಕ್ಕಾಗಿ ಅಲ್ಲ. ಈ ಅಭಿಪ್ರಾಯವನ್ನು ಇನ್ನಷ್ಟು ಸಮರ್ಥಸುತ್ತಾ ಈ ವಚನ.

ಹೊತ್ತಾರೆ ಎದ್ದು ಕಣ್ಣು ಹೊಸೆಯುತ್ತ
ಎನ್ನ ಒಡಲಿಂಗೆ, ಎನ್ನ ಒಡಲಿಗೆ, ಎನ್ನ ಮಡದಿ ಮಕ್ಕಳಿಗೆಂದು
ಕುದಿದೆನಾದಡೆ ಎನ್ನ ಮನಕ್ಕೆ ಮನವೇ ಸಾಕ್ಷಿ!
ಹೊಲೆ ಹೊಲೆಯರ ಮನೆಯ ಹೊಕ್ಕಾದಡೆಯೂ,
ಸಲೆ ಕೈಕೂಲಿಯ ಮಾಡಿಯಾದಡೆಯೂ
ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನೊಡಲ ವಸರಕ್ಕೆ ಕುದಿದೆನಾದಡೆ
ತಲೆದಂಡ ! ಕೂಡಲಸಂಗಮದೇವಾ.

ಎಂದು ಉದ್ಘೋಷಿಸುತ್ತಾರೆ.

ಈ ಉದ್ಘೋಷ ಅತ್ಯಂತ ಪ್ರಾಮಾಣಿಕವಾದ ಮನುಷ್ಯನೊಬ್ಬನ ಕಳಕಳಿಯನ್ನು ಅತ್ಯಂತ ತೀವ್ರವಾಗಿ ಪ್ರಕಟಿಸುತ್ತದೆ. ದಿನವೂ ಅವರು ನಡೆಸುತ್ತಿದ್ದ ಲಿಂಗಾರ್ಚನೆ, ಜಂಗಮ ದಾಸೋಹ ಇತ್ಯಾದಿಗಳನ್ನು ಕಂಡು ಆಗದವರು ಈ ಆರೋಪವನ್ನು ಮಾಡಿರಬೇಕು. ಇಂಥ ಮಾತಿಗೆ ಬಸವಣ್ಣನವರು

ಊರ ಮುಂದೆ ಹಾಲ ಹಳ್ಳ ಹರಿವುತ್ತಿರಲು,
ಒರೆಯಾವಿನ ಬೆನ್ನಲಿ ಹರಿಯಲದೇಕಯ್ಯಾ?
ಲಜ್ಜೆಗೆಡಲೇಕೆ? ನಾಣುಗೆಡಲೇಕೆ?
ಕೂಡಲಸಂಗಮದೇವರುಳ್ಳನ್ನಕ್ಕ
ಬಿಜ್ಜಳನ ಭಾಂಡಾರವೆನಗೇಕಯ್ಯಾ.

ಎಂದು ಉತ್ತರ ಕೊಟ್ಟಂತೆ ತೋರುತ್ತದೆ.

ಈ ಹಿನ್ನೆಲೆಯಲ್ಲಿ 'ಕಾಯಕದ ಹಿರಿಮೆ', 'ದಲಿತ ಕಾಳಜಿ', 'ಜನಪರ ಹೋರಾಟ'ಕ್ಕೆ ಆದ್ಯತೆ ಈ ಮೂರು ಬಗೆಯಲ್ಲಿ ಮುಪ್ಪುರಿಗೊಂಡ ವ್ಯಕ್ತಿತ್ವ ಬಸವಣ್ಣನವರದು. 'ವ್ಯಕ್ತಿಗೆ ಒಂದು ಮುಖವಾದರೆ ವ್ಯಕ್ತಿತ್ವಕ್ಕೆ ಹಲವು ಮುಖಗಳು'. "ಬಸವಣ್ಣನವರು ಬಹುಮುಖಿ ವ್ಯಕ್ತಿತ್ವದ ಕೈಗನ್ನಡಿ. ಮರೆತ ಮಾನವರನ್ನು ಎಚ್ಚರಿಸಿದ ಅರಿತ ಶರಣರ ಶ್ರೇಷ್ಠ ಜೀವನದ ಜೀವಂತ ಕೈಪಿಡಿ, ಸರ್ವಸಮಾನತೆ, ಅಸ್ಪೃಶ್ಯೋದ್ಧಾರ, ಜಾತಿ, ಲಿಂಗ ಹಾಗೂ ವೃತ್ತಿ ಭೇದ ನಿರಾಕರಣೆ, ಕಾಯಕತತ್ವ ಪ್ರತಿಪಾದನೆ, ಮಹಿಳೆಯ ಉನ್ನತಿ, ಸಾಮಾಜಿಕ ಸಂಸ್ಕರಣೆಯ ಸಂಘಟನೆ ಹಾಗೂ ಸುಧಾರಣೆಗಳನ್ನು

ಕ್ಷಿಪ್ರ ಕಾಲಾವಧಿಯಲ್ಲಿ ಮಾಡಿದ ಮಹಾಪುರುಷ, ಜಗದ್ವ್ಯಾಪಿಯಾದ ಸಾರ್ವಕಾಲಿಕ ತತ್ವಗಳನ್ನು ಸಾರಿದ ವಿಶ್ವ ಮಾನವ, ಧಾರ್ಮಿಕ ದೃಷ್ಟಿಯ, ನೈತಿಕ ನೆಲೆಗಟ್ಟಿನ, ಪರಿಶುದ್ಧ ನಡೆ-ನುಡಿಯ, ತ್ಯಾಗ-ಭೋಗ ಸಮನ್ವಯದ ದಿವ್ಯ ಜೀವನ ಸಾಗಿಸಿದ ಜಗಜ್ಯೋತಿ, ವಿಶ್ವಪ್ರೇಮ, ವಿಶ್ವಬಾಂಧವ್ಯ ಹಾಗೂ ವಿಶ್ವಮೈತ್ರಿಗಳನ್ನು ನಿರ್ಮಿಸಿದ ವಿಶ್ವಭೂತಿ".[೧೩]

ಒಟ್ಟಿನಲ್ಲಿ ಬಸವಣ್ಣನವರ ಸಾಮಾಜಿಕ ಕಳಕಳಿ ಸರ್ವಸಮತಾಭಾವದಿಂದ ಕೂಡಿದುದು. ಇವರ ಪ್ರಕಾರ ಮೋಕ್ಷ ಪಡೆಯಲು ಮೇಲು ಕೀಳೆನ್ನದೆ ಎಲ್ಲರಿಗೂ ಅವಕಾಶವುಂಟು. ಜ್ಞಾನಸಾಧನೆ ಯಾವುದೇ ಒಂದು ಮತದ ಹಕ್ಕಲ್ಲ. ಇಲ್ಲಿ ಎಲ್ಲರೂ ಆತ್ಮವಿಶ್ವಾಸದಿಂದ ತಲೆ ಎತ್ತಿ ನಡೆಯಬಹುದು. ಸಹಪಂಕ್ತಿ ಭೋಜನ, ಕೊಳು-ಕೊಡೆಗಳ ನಿರ್ಬಂಧವಿರಬಾರದು ಹೀಗೆ ಒಂದು ಮಾತಿನಲ್ಲಿ ಹೇಳಬಹುದಾದರೆ ಇದೊಂದು ವರ್ಗರಹಿತ ಸಮಾಜವಾಗಬೇಕು ಎಂದು ಬಯಸಿದರು.

---

೧೩. ಅಡಿಟಿಪ್ಪಣಿ ೧೦ರಂತೆ, ಪುಟ-೧೬೨

ಅಧ್ಯಾಯ - ೪

ಸರ್ವಜ್ಞನವರ ವಚನಗಳಲ್ಲಿ ಸಾಮಾಜಿಕ ಕಳಕಳಿ

ಕವಿ ಒಬ್ಬ ಸಮಾಜಜೀವಿ. ಇತರ ಅನೇಕರಂತೆ ಅವನೂ ಬದುಕುತ್ತಾನೆ. ಅವನಿಗೆ ಆಗುವ ಅನುಭವಗಳು ಇತರ ಎಲ್ಲರಿಗೂ ಆಗುವಂಥ ಅನುಭವಗಳೇ. ಸಮಾಜದ ಒಳಿತು ಕೆಡುಕುಗಳನ್ನು, ನೋವು, ಸುಖ, ನಿರಾಸೆ, ಅನ್ಯಾಯ ಇತ್ಯಾದಿಗಳನ್ನು ಅವನೂ ಇತರರಂತೆಯೇ ಕಾಣುತ್ತಾನೆ, ಅನುಭವಿಸುತ್ತಾನೆ, ಪ್ರತಿಕ್ರಿಯಿಸುತ್ತಾನೆ. ಆದರೆ, ಕವಿ ತನಗೆ ಅನ್ನಿಸಿದ್ದನ್ನು ತನ್ನ ಸಾಹಿತ್ಯ ಕೃತಿಯಲ್ಲಿ ಪರಿಣಾಮಕಾರಿಯಾಗಿ ವ್ಯಕ್ತಪಡಿಸುತ್ತಾನೆ. ಅಂತಹ ಕವಿಗಳಲ್ಲಿ ಸರ್ವಜ್ಞನೂ ಒಬ್ಬ, ಈತನು ಸಮಾಜ ಸುಧಾರಕನಾಗಿ, ನೀತಿ ಬೋಧಕನಾಗಿ ಮಹತ್ಕಾರ್ಯಗಳನ್ನು ಸಾಧಿಸಿದ್ದಾನೆ. "ಸರ್ವಜ್ಞ ಸಾಮಾನ್ಯರಂತೆ ಈ ನೆಲದ ಮನುಷ್ಯನಾಗಿ ಬದುಕಿದವನು. ಸಾವಿರ ಊರು ತಿರುಗಿದವನೂ, ಸಾವಿರ ಸತ್ಯಗಳನ್ನು ಕಂಡವನೂ ಆದ ಅವನು ಜಗತ್ತಿನಿಂದ ಕಲಿತದ್ದು ಅಪಾರವಾಗಿದೆ. ಹಾಗೆ ಹೆಕ್ಕಿಕೊಂಡ ಸಾಮಾಗ್ರಿಯನ್ನು ವಿವೇಚಿಸಿ ಆಣಿಮುತ್ತುಗಳಂಥ ಮಾತನ್ನಾಡಿದ್ದಾನೆ".[೧]

ಸರ್ವಜ್ಞನಿಗೆ ಸಾಮಾಜಿಕ ಕಳಕಳಿಯ ಬಗ್ಗೆ ಅತ್ಯಂತ ಆಸ್ಥೆ ಇತ್ತು ಎಂಬುದಕ್ಕೆ ಅವನ ವಚನದಲ್ಲಿನ ತುಡಿತ-ಮಿಡಿತಗಳನ್ನು ಗಮನಿಸಿದರೆ ಅರಿವಾಗುತ್ತದೆ. ಸಮಾಜವನ್ನು ದರ್ಶಿಸಿದ ಸರ್ವಜ್ಞ ಧಾರ್ಮಿಕ ಅಥವಾ ಮತೀಯ ಆಚಾರ-ವಿಚಾರಗಳನ್ನು, ಸಮಾಜದಲ್ಲಿನ ವಿವಿಧ ವರ್ಗಗಳನ್ನು, ವ್ಯಕ್ತಿಗತ ವರ್ತನೆಗಳನ್ನು ತನ್ನ ವಿವೇಕದ ಒರೆಗೆ ಹಚ್ಚಿದ್ದಾನೆ. ಈ ವಿಷಯಗಳನ್ನು ಸ್ಥೂಲವಾಗಿ ವಿವರಿಸುವ ಅಗತ್ಯವಿದೆ.

ಕನ್ನಡ ನಾಡಿನಲ್ಲಿ ರಾಜಕೀಯ, ಧಾರ್ಮಿಕ, ಸಾಮಾಜಿಕ ರಂಗಗಳಲ್ಲಿ ನೈತಿಕ ಶೈಥಿಲ್ಯವು ತಲೆದೋರಿದಂತಹ ಕಾಲದಲ್ಲಿ ಸರ್ವಜ್ಞನು ಜನಮನವನ್ನು ಸಂಸ್ಕರಿಸುವ ಕಾರ್ಯವನ್ನು ಕೈಕೊಂಡ. "ಶ್ರೇಷ್ಠ ವರ್ಣದವರೆಂದು ಭಾವಿಸಲಾದ ಬ್ರಾಹ್ಮಣರ ಬಗೆಗೆ ಸರ್ವಜ್ಞನ ಗಮನ ಹೆಚ್ಚಾಗಿ ಹರಿದುದು ಸ್ವಾಭಾವಿಕವಾಗಿದೆ. ವೈದಿಕ ಮತದ ಜಡ್ಡುಗಟ್ಟಿದ ಮೌಲ್ಯಗಳ ವಿರುದ್ಧ ಬಂಡೆದ್ದ ವೀರಶೈವ ಪರಂಪರೆಯ ಪ್ರೇರಣೆ ಒಂದು ಕಡೆ, ಮನಸ್ಸಿನಾಳದಲ್ಲಿ ಚಿಟುಕು ಮುಳ್ಳಾಡಿಸುತ್ತಿದ್ದ ತಂದೆಯ ಬಗೆಗಿನ ಅಸಮಾಧಾನ, ಆಕ್ರೋಶ ಇನ್ನೊಂದು ಕಡೆ. ಸಮಕಾಲೀನ ಸಮಾಜದ ಶ್ರೀಸಾಮಾನ್ಯ ವರ್ಗವೆನಿಸಿದ ಶೋಷಿತರ ಕುರಿತ ಅನುಕಂಪ ಮಗದೊಂದು ಕಡೆ. ಇವೆಲ್ಲವುಗಳ ಸಮನ್ವಿತ ರೂಪದ ಸಂಕೀರ್ಣವಾದ ಮನೋಧರ್ಮವೇ ಸರ್ವಜ್ಞನ ಈ ಬ್ರಾಹ್ಮಣ ಸಮಾಜ ವಿಮರ್ಶೆಯ ಮೂಲಸೆಲೆಯಾಗಿದೆ".[೨] ಭಾವನಾವಿವೇಶತೆಯನ್ನು ಮೆಟ್ಟಿ ಮೇಲೆದ್ದ ವಸ್ತುನಿಷ್ಠತೆಯನ್ನು ಮೈಗೂಡಿಸಿಕೊಂಡ ವೈಚಾರಿಕ ಪ್ರಜ್ಞೆ ಪ್ರಶಂಸನೀಯವಾದ ರೀತಿಯಲ್ಲಿ ಪ್ರಕಟಗೊಂಡಿದೆ.

ಜಾತಿ ಜಾತಿಗೆ ವೈರ ನೀತಿ ಮೂರ್ಖಗೆ ವೈರ
ಪಾತಕವು ವೈರ ಸುಜನರ್ಗೆ ಅರಿದಂಗೆ
ಏತರದು ವೈರ ಸರ್ವಜ್ಞ

---

೧. ಸರ್ವಜ್ಞ- ಒಂದು ಸಮೀಕ್ಷೆ, ದೊಡ್ಡರಂಗೇಗೌಡ, ಪುಟ-೭೬
೨. ಸರ್ವಜ್ಞನ ಸಮಾಜ ದರ್ಶನ ಮತ್ತು ಸಾಹಿತ್ಯ ಸತ್ವ, ಎಂ. ಅಕಬರ ಅಲಿ, ಪುಟ-೫೪

ಅರಿತವಾದ ಸರ್ವಜ್ಞರಿಗೆ ಯಾರ ಬಗೆಗೂ ವೈರ-ದ್ವೇಶವಿಲ್ಲ. ಸುಜನನು ಸಜ್ಜನನು ಆದ ಆತನಿಗೆ ವೈರವೇನಾದರೂ ಇದ್ದುದೇ ಆದರೆ ಅದು ಪಾತಕದ ವಿಷಯದಲ್ಲಿ ಮಾತ್ರ. ಇಂತಹ ವಸ್ತುನಿಷ್ಠ ನ್ಯಾಯ ನಿಷ್ಠುರ ನಿಲುವನ್ನು ಯಾರಾದರೂ ವಿರೋಧಿಸಿದರೆ ಅಂಥವರು ಮೂರ್ಖರೇ ಸರಿಯೆಂಬ ಅಭಿಮತ ಆತನದು.

ಬ್ರಾಹ್ಮಣ ವರ್ಗದ ಬಾಹ್ಯಾಚಾರಗಳಾದ ಸ್ನಾನ, ಸಂಧ್ಯಾವಂದನೆ, ಮಡಿವಂತಿಕೆಗಳಲ್ಲಿಯ ಕುರುಡುತನವನ್ನು ಈ ರೀತಿಯಾಗಿ ಖಂಡಿಸಿದ್ದಾನೆ.

ಮಿಂದುಂಬ ಹಾರುವಗೆ ಸಂಧ್ಯವಂದನೆಯೇಕೆ?
ಮಿಂದು ಮೈಲಿಗೆಯನುಡಲೇಕೆ? ಸ್ನಾನದ
ಸಂದೇಹವೇಕೆ? ಸರ್ವಜ್ಞ

ಬ್ರಾಹ್ಮಣನು ಸ್ನಾನ ಮಾಡಿ, ಮೈಲಿಗೆಯಿಂದ ತುಂಬಿದ್ದರೂ ನೀರು ಮಡಿ ಮಾಡಿದ ವಸ್ತ್ರದ ತುಂಡನ್ನು ಉಟ್ಟುಕೊಳ್ಳುವುದೇಕೆ? ನಿಜವಾಗಿ ಶುದ್ಧನಾಗಿದ್ದರೆ, ತಿಳಿಯದೆಯೂ ತಿಳಿದೂ ಮಾಡಿದ ಪಾಪಗಳನ್ನು ಕ್ಷಮಿಸೆಂದು ಬೇಡಿಕೊಳ್ಳುವ ಸಚಿಧ್ಯಾವಂದನೆ ಏಕೆ? ಅಂದರೆ ಆಂತರ್ಯ ಸ್ನಾನವಿಲ್ಲದ ಬ್ರಾಹ್ಮಣನು ಬಹಿರಾಚಾರಕ್ಕೆ ಬಿದ್ದು ಸಂದೇಹಕ್ಕೆ ಒಳಗಾಗುವನು.

“ಇದೇ ರೀತಿಯಲ್ಲಿ ತೀರ್ಥಸ್ನಾನ, ಗಂಧಾಕ್ಷತೆ, ಜನಿವಾರ ಧಾರಣೆಗಳಂಥ ಬಹಿರ್ ಆಚಾರಗಳಿಗೆ ಅವಾಸ್ತವ ಪ್ರಾಶಸ್ತ್ಯವನ್ನು ನೀಡುವ ಬ್ರಾಹ್ಮಣರನ್ನು ವಿಡಂಬಿಸುವಲ್ಲಿ ಸರ್ವಜ್ಞನ ಬಿಟ್ಟು ಮಾತಿನ ಚುಚ್ಚುಗತ್ತಿಯನ್ನು ಬೀಸಿದ್ದಾನೆ. ಮೆತ್ತಗೆ ಹೇಳಿದ ಮಾತು ಸಂಬಂಧಿಸಿದವರ ಮನಸ್ಸಿನಲ್ಲಿ ನಾಟುವುದಿಲ್ಲ”.[೩]

ನೀರ ಮುಳುಗಿದ ವಿಪ್ರ ಹಾರುವಡೆ ಸ್ವರ್ಗಕ್ಕೆ
ಹಾರವನೊಲು ಮುಳುಗಿಪ್ಪ ಕಪ್ಪೆ ತಾ
ಹಾರಬೇಕೆಂದ ಸರ್ವಜ್ಞ

ಮುಟ್ಟಿ ಶ್ರೀಗಂಧವನು ಇಟ್ಟು ತಾ ನೊಸಲೊಳಗೆ
ನೆಟ್ಟನೆಯ ಸ್ವರ್ಗಪಡೆವಡೆ ಸಾಣೆಕಲ್
ಕೆಟ್ಟ ಕೇಡೇನು? ಸರ್ವಜ್ಞ

ಮೂರೆಳೆಯನುಟ್ಟಾತ ಹಾರುವನೆ ಸ್ವರ್ಗಕ್ಕೆ
ನೂರೆಂಟು ಎಳೆಯ ಕವುದಿಯ ಹೊದ್ದಾತ
ಹಾರನೇಕಯ್ಯಾ? ಸರ್ವಜ್ಞ

“ಸ್ವರ್ಗ ಸಂಪಾದನೆಯಾಗುವುದೆಂದು ನಂಬಿ ಅರ್ಥವಿಲ್ಲದ ವ್ಯರ್ಥವಾದ ಬಹಿರಾಚಾರಗಳಿಗೆ

೩. ಅಡಿ ಟಿಪ್ಪಣಿ ೨ರಂತೆ, ಪುಟ-೫೫

ಜೋತು ಬಿದ್ದಿರುವ ಬ್ರಾಹ್ಮಣನನ್ನು ವಿಡಂಬಿಸಲು ಕವಿ ತರುವ ಶ್ರೀಗಂಧ ತಯಾರಿಸು ಸಾಣೆಕಲ್ಲು ಹಾಗೂ ಹರಕು ಕೌದಿಯನ್ನು ಹೊದ್ದ ಭಿಕ್ಷುಕ, ನಿತ್ಯ ತೀರ್ಥಸ್ನಾನ ಮಾಡುವ ಕಪ್ಪೆ - ಈ ದೃಷ್ಟಾಂತಗಳು ಬಾರುಕೋಲಿನ ಹೊಡೆತದಂತೆ ಬಾಸಳು ಮೂಡಿಸುತ್ತವೆ".[೪]

ಜೀವದಯೆಯೇ ಜೀವನಮೌಲ್ಯವೆಂದು ನಂಬಿದ ಸರ್ವಜ್ಞನಿಗೆ ವೈದಿಕ ಮತದ ಯಜ್ಞ ಕರ್ಮ ಅನರ್ಥಕಾರಿಯೆಂದೆನಿಸುತ್ತದೆ.

ಕೊಂದು ಮಾಡುವ ಧರ್ಮ ರಂದವನು ಆನೊರವೆ
ಗಂಧವ ಮರನ ನೆರೆ ಸುಟ್ಟು ಇದ್ದಿಲನು
ತಂದು ಬಡಿದಂತೆ ಸರ್ವಜ್ಞ.

ಧರ್ಮದ ಹೆಸರಿನಲ್ಲಿ ನಡೆಯುವ ಜೀವಹಿಂಸೆ ಕಂಡು ಸರ್ವಜ್ಞನ ಕವಿ ಹೃದಯ ಮೂಕಪ್ರಾಣಿಗಾಗಿ ಮರುಕವನ್ನು ವ್ಯಕ್ತಪಡಿಸಿದರೆ, ಜ್ಞಾನಿ ಎನಿಸಿದ ಬ್ರಾಹ್ಮಣನ ಅವಿವೇಕತನದ ಹಿಂಸಾಚಾರ ಕಂಡು ಕನಲುತ್ತದೆ. ಗಂಧದ ಮರದ ದೃಷ್ಟಾಂತವೊಂದು ಜೀವನದ ಮೌಲ್ಯವನ್ನೂ ಅವಿವೇಕತನದ ಮೌಢ್ಯವನ್ನೂ ಅತ್ಯಂತ ಧ್ವನಿಪೂರ್ಣವಾಗಿ ಹೊಳೆಯಿಸುತ್ತದೆ. ಆದರೆ ಇಂತಹ ನಯವಾದ ಮಾತುಗಾರಿಕೆ, ನಾಜೂಕಿನ ಸೂಚ್ಯಾರ್ಥ ದಪ್ಪ ತೊಗಲಿನ ಡಂಭಾಚಾರಿಗಳ ಮೇಲೆ ಪರಿಣಾಮ ಬೀರಲಾರದೆಂಬುದು ಸರ್ವಜ್ಞನಿಗೆ ಗೊತ್ತು. ಅದಕ್ಕೇ ಆತ ವಾಚ್ಯಕ್ಕೆ ಇಳಿದು ಬಿಚ್ಚುಗತ್ತಿಯನ್ನು ಝಳಪಿಸುತ್ತಾನೆ.

ಕನ್ನೆಯಾಡನು ತಂದು ಬನ್ನ ಬಡಿಸುತ ಕೊಂದು
ಉನ್ನತವ ಪಡೆವ ವಿಪ್ರನಿಂ ಅಗಸರ
ಕುನ್ನಿ ಲೇಸೆಂದ ಸರ್ವಜ್ಞ.

ಅಗಸರ ನಾಯಿ ಅರಿವೆ ಕಾದರೆ ರೊಟ್ಟಿಯಾದರೂ ಸಿಗುವುದು. ವಿಪ್ರನು ಇದಕ್ಕೂ ಕಡೆ-ಅಂದರೆ ಯಜ್ಞದಿಂದ ಪಾಪವಲ್ಲದೇ ಪುಣ್ಯ ದೊರೆಯದು.

ಗುಣಕರ್ಮಗಳನ್ನು ದುರ್ಲಕ್ಷಿಸಿ ಜನ್ಮಕ್ಕೆ ಅವಾಸ್ತವ ಪ್ರಾಶಸ್ತ್ಯವಿತ್ತು, ಹುಟ್ಟುವ ಸಮಾಜ ಹಾಗೂ ಮನೆತನದ ಮೇಲಿಂದ ಮನುಷ್ಯ-ಮನುಷ್ಯರಲ್ಲಿ, ಮೇಲು-ಕೀಲುಗಳನ್ನು ಕಲ್ಪಿಸುವುದು, ಕುಲಭೇದವನ್ನು ಮಾಡುವುದು, ಹೊಲೆಮಾದಿಗ-ಶೂದ್ರರೆಂದು ವಿಂಗಡಿಸುವುದು ಅವಿಚಾರ, ಅವಿವೇಕತನ ಮಾತ್ರವಲ್ಲ ಇಡೀ ಮಾನವ ಜನಾಂಗಕ್ಕೆ ಮಾಡಿದ ಮಹಾ ಅಪಚಾರವೆಂಬುದು ಸರ್ವಜ್ಞನ ನಿಲುವಾಗಿದೆ.

ಹೊಲಗೇರಿಯಲಿ ಹುಟ್ಟು ಎಲುವಿನ ಗೃಹವಾಸ
ಸಲೆ ಧರ್ಮಿ ದಾನಿಯೆನಿಸದೆ ಹಾರುವನು
ಕುಲಕೆ ಹೋರಿಹನು ಸರ್ವಜ್ಞ.
ಸತ್ತ ಕತ್ತೆಯ ಹೊತ್ತ ರೆತ್ತಣದ ಹೊಲೆಯನೆಂದು ನೀನೆನೆಬೇಡ

---

೪. ಸರ್ವಜ್ಞ ವಚನಗಳು, ವಿಶೇಷಾವೃತ್ತಿ, ಚನ್ನಪ್ಪ ಉತ್ತಂಗಿ, ಗ್ರಂಥದ ಕೊನೆಯಲ್ಲಿಯ ಟಿಪ್ಪಣಿ.

ನೊಂದ ಜೀವವನು ತಾನರಿವ ಹಾರುವನು
ಕೊಂದಾದ ಹೊಲೆಯ ಸರ್ವಜ್ಞ.

ಹೊಲೆ ಮಾದಿಗರಾದ ಹರಿಜನರು ವಾಸಿಸುವ ಕೇರಿ ಹೊಲಗೇರಿ ಅಲ್ಲ. ಎಲ್ಲರಿಗೂ ಹುಟ್ಟುವ ತಾಯಿಯ ಗರ್ಭ ಹೊಲಗೇರಿ! ಅದು ಎಲುವಿನ ಗೃಹವು ಹೌದು! ವಸ್ತು ಸ್ಥಿತಿ ಹೀಗೆ ಇರುವಾಗ ಮನುಷ್ಯ ಮನುಷ್ಯರಲ್ಲಿ ಭೇದ ಮಾಡುವುದು, ಕುಲಧರ್ಮ ಕಲ್ಪಿಸಿ ತಾನು ಉತ್ತಮ ಕುಲಜನೆಂದು ಸಾಧಿಸ ಹೊರಡುವುದು ಸಲ್ಲ. ಹಾಗೆ ನೋಡಿದರೆ ಸತ್ತ ಕತ್ತೆಯ ಹೊರುವ ಕಾಯಕದಲ್ಲಿ ನಿರತನಾಗಿ ಊರ ನೈರ್ಮಲ್ಯಕ್ಕೆ ನೆರವಾಗುವ ಶ್ರಮಜೀವಿ ಹೊಲೆಯನಲ್ಲ; ಅದಕ್ಕೆ ಪ್ರತಿಯಾಗಿ ತಾನು ಉತ್ತಮ ಕಲಜನೆಂದು ಬೀಗಿ ಹೆರವರ ಒಡವೆ-ಸಂಪತ್ತು ಎತ್ತಿಹಾಕುವ, ದೋಚುವ ಬ್ರಾಹ್ಮಣ ಹೊಲೆಯ! ಪ್ರಾಣಿಗಳನ್ನು ಕೊಂದು ತಿನ್ನುವ ಈ ಮಾಂಸಹಾರಿಯು ಹೊಲೆಯನಲ್ಲ; ಪ್ರಾಣಿಗಳಲ್ಲಿ ಭೂತದಯೆವಿರಬೇಕೆಂದು ಇತರರಿಗೆ ಬೋಧಿಸಿ, ತಾನೆ ಯಜ್ಞಕರ್ಮಕ್ಕಾಗಿ ಪ್ರಾಣಿಗಳನ್ನು ಕೊಲ್ಲುವ ಬ್ರಾಹ್ಮಣನೇ ಹೊಲೆಯ! ನೊಂದ ಜೀವಿಗಳಾದ ಶೂದ್ರಾದಿ ವರ್ಗದ ಶೋಷಣೆ ನಡೆಯಿಸುವಾತ ಹೊಲೆಯ ಅರ್ಥಾತ್ ಆತ ಜೀವ ಹಿಂಸೆ, ಸಾಮಾಜಿಕ ಶೋಷಣೆಯನ್ನು ನಿಲ್ಲಿಸಿ ದಾನಿ-ಧರ್ಮಿ ಎನಿಸಲು ಶ್ರಮಿಸುವುದೊಳಿತು.

ಅಪಹಾಸ್ಯಕರವಾದ ಸ್ಪರ್ಶಾಸ್ಪರ್ಶ ಭಾವನೆಯನ್ನೂ ಮಡಿವಂತಿಕೆಯನ್ನು ಬಿಡುವುದು ಮೇಲೆಂದು ಸರ್ವಜ್ಞ ಹೇಳಿದ್ದಾನೆ.

ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು
ಸುಡುವಗ್ನಿಯೊಂದೇ ಇರುತಿರಲು ಕುಲಗೋತ್ರ
ನಡುವೆ ಎತ್ತಣದು? ಸರ್ವಜ್ಞ.

ಬೆಂದ ಮನೆಬಾಗಿಲಿಗೆ ಮುಂದೆ ತೋರಣವೇಕೆ?
ಸಂದ ಶೂದ್ರತಿಯ ಒಡನುಂಬ ಹಾರುವಗೆ
ಮಿಂದೂಟವೇಕೆ? ಸರ್ವಜ್ಞ.

ಹೀಗೆ ಕುಲಭೇದದ ದುಷ್ಟ ಸಂಪ್ರದಾಯದ ಅರ್ಥಹೀನ ಅವಿಚಾರತೆಯನ್ನು ಅನರ್ಥಕರ. ಅನಾಚಾರಪರತೆಯನ್ನೂ ಪರಾಮರ್ಶಿಸಿದ ಸರ್ವಜ್ಞ ಉತ್ತಮಿತೆಯ ಮೂಲ ದ್ರವ್ಯವಾವುದೆಂಬುದರ ಬಗೆಗೂ ಚಿಂತನೆ ನಡೆಸಿದ್ದಾನೆ. ಅದು ಯಾವೊಂದು ವರ್ಗದ ಅಥವಾ ಜಾತಿಯ ಹುಟ್ಟು ಗುಣವೂ ಅಲ್ಲ ಅದು ವ್ಯಕ್ತಿಯೊಬ್ಬನ ಅಂತಃಸತ್ವದ ಹರಳು, ಮಾನವೀಯತೆಯ ಹುರುಳು.

ಉತ್ತಮದ ವರ್ಣಿಗಳೇ ಉತ್ತಮರು ಎನಬೇಡ
ಮತ್ತೆ ತನ್ನಂತೆ ಬಗೆವರನೆಲ್ಲರನು
ಉತ್ತಮರು ಎನ್ನು ಸರ್ವಜ್ಞ.

ಇಂತಹ ಉತ್ತಮಿಕೆಯ ಸತ್ವ ಸಂಪನ್ನರು ಉಚ್ಚ ಜಾತಿಯಲ್ಲಿರುವಂತೆ ಜಾತಿಹೀನರಲ್ಲೂ ಇರುವುದು ಸಾಧ್ಯ.

ಜಾತಿಹೀನರ ಮನೆಯ ಜ್ಯೋತಿ ತಾ ಹೀನವೆ
ಜಾತಿ ವಿಜಾತಿಯೆನಬೇಡ ದೇವನೊಲಿ
ದಾತನೆ ಜಾತ ಸರ್ವಜ್ಞ

ಯಾತರದು ಹೂವೇನು? ನಾತರದು ಸಾಲದೇ?
ಜಾತಿ ವಿಜಾತಿಯೆನಬೇಡ ದೇವನೊಲಿ
ದಾತನೆ ಜಾತ ಸರ್ವಜ್ಞ

'ದೇವನೊಲಿದಾತನೇ ಜಾತ'ನೆಂಬ ಏಕಮೇವ ಆಶಯದ ಆವಿಷ್ಕಾರಕ್ಕೆ ಬಳಸಲಾದ 'ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ'? ಹಾಗೂ 'ಯಾತರದು ಹೂವೇನು ನಾತರದು ಸಾಲದೇ'? ಎಂಬ ದೃಷ್ಟಾಂತಗಳು ಪ್ರತ್ಯೇಕವಾಗಿ ಮಾತ್ರವಲ್ಲ, ಒಂದಕ್ಕೊಂದು ಪೂರಕವಾಗಿಯೂ ಧ್ವನಿ ಪ್ರಚುರವಾಗಿವೆ. "ಒಂದೊಂದೂ ಅರ್ಥವು ಒಂದು ಹೊಸ ಆಯಾಮವನ್ನೇ ತೆರೆಯುತ್ತವೆ. ಜಾತಿ ಅಥವಾ ಜನ್ಮದ ಮೇಲಿಂದ ಯಾವನೊಬ್ಬ ವ್ಯಕ್ತಿ ಉತ್ತಮನೆನಿಸಲಾರ; ದೇವರ ಮೆಚ್ಚಿಕೆ ಗಳಿಸಲಾರ. ದೇವರಿಗೆ ಪ್ರಿಯವಾಗಬಹುದಾದಂಥ ಉತ್ತಮಿಕೆಗೆ ಪಾತ್ರನಾಗಬೇಕಾದ ವ್ಯಕ್ತಿ ಜ್ಯೋತಿ ಸ್ವರೂಪನಾನಾಗಿ ವಿವೇಕದ ಬೆಳಕನ್ನು ಎಲ್ಲೆಡೆಯೂ ಬೀರಬೇಕಾಗುತ್ತದೆ. ಇಂತಹ ಅಂತರಂಗದ ವಿಕಸನ, ಬಹಿರಂಗದ ಪ್ರಕಾಶನದ ಮೇಲಿಂದಲೇ ಮನುಷ್ಯ-ಮನುಷ್ಯರಲ್ಲಿಯ ಮೇಲು-ಕೀಳುಗಳನ್ನು ನಿರ್ಧರಿಸಬೇಕೆಂಬ ಚಿಂತನೆ ಇಲ್ಲಿ ವ್ಯಂಜಿತವಾದ ಬಗೆ ಆಪ್ಯಾಯಮಾನವಾಗಿದೆ".[೫]

ವೈದಿಕ ಮತಾನುಯಾಯಿಗಳೆಂದು ಹೇಳಿಕೊಳ್ಳುವ ಬ್ರಾಹ್ಮಣರ ವೇದಕ್ಕೆ ಸಂಬಂಧಿಸಿದ ವಿಚಾರ-ಆಚಾರಗಳಲ್ಲಿಯ ವಿಸಂಗತಿಯು ಸರ್ವಜ್ಞನ ಟೀಕೆಗೆ ತುತ್ತಾಗಿದೆ.

ಗಾಯತ್ರಿ ವೇದಕ್ಕೆ ತಾಯೆಂದು ಹೊಗಳಿರಲು
ವಾಯಕ್ಕೆ ದ್ವಿಜರು ಹಲವು ಶಾಖೆಗೆ ತಾವು
ಹಾರುತಿಹರೇಕೆ? ಸರ್ವಜ್ಞ

ಹೀಗೆ ಬ್ರಾಹ್ಮಣ ಸಮಾಜದ ಕೆಲ ದುರಾಚಾರ ದುರಭ್ಯಾಸಗಳನ್ನು ಖಂಡಿಸಿದ ಸರ್ವಜ್ಞ ಅದೇ ಸಮಾಜದ ಸದಾಚಾರ-ಸದ್ಗುಣಗಳನ್ನು ಮುಕ್ತಕಂಠದಿಂದ ಪ್ರಶಂಸಿದ್ದಾನೆ. ಬ್ರಾಹ್ಮಣರು ಬ್ರಾಹ್ಮಣರಾಗಿ ಸಲ್ಲಬೇಕಾದರೆ ಋಜುತ್ವವನ್ನು ರಕ್ತಗತವಾಗಿಸಿಕೊಳ್ಳಬೇಕೆಂದು ಸಾರಿದ್ದಾನೆ. ಮಾತ್ರವಲ್ಲ, ನೀತಿವಂತ ಬ್ರಾಹ್ಮಣನ ಸಂಸ್ಕೃತಿ ಸಜ್ಜನಿಕೆಯ ಪ್ರಕಾಶವಿಲ್ಲದ ಪ್ರಪಂಚ ಕತ್ತಲೆಯಲ್ಲಿ ಕೊಳೆಯಬೇಕಾದೀತೆಂಬುದನ್ನು ಧ್ವನಿಸಿದ್ದಾನೆ.

ವಿಪ್ರರಿಂದಲೆ ವಿದ್ಯೆ ವಿಪ್ರರಿಂದಲೆ ಬುದ್ಧಿ

---

೫. ಅಡಿ ಟಿಪ್ಪಣಿ ೨ರಂತೆ, ಪುಟ-೫೯

ವಿಪ್ರ ನಿಜ ವಿಪ್ರರಿಲ್ಲದಿರೆ ಈ ಜಗವು
ಕ್ಷಿಪ್ರದಲಿ ಕೆಡುಗು ಸರ್ವಜ್ಞ.

ಈ ಮಾತುಗಳಲ್ಲಿ ಸರ್ವಜ್ಞನ ಅನುಭವದ ಹುರುಳು ಮಾರ್ಮಿಕವಾಗಿದೆ. ಸರ್ವಜ್ಞನ ಜನಪದ ಪರಿಜ್ಞಾನವೇ ಇಲ್ಲಿ ಪರಿಪಾಕಗೊಂಡಂತೆ ಇದೆ. ಬ್ರಾಹ್ಮಣ ಮತೀಯರ ಆಚಾರ-ವಿಚಾರಗಳ ಹಾಗೆಯೇ, ಅವರ ವಿಶೇಷವಾದ ಆಧಾರಾಭಿಮಾನಗಳಿಗೆ ಪಾತ್ರವಾದ ರಾಮಾಯಣ-ಮಹಾಭಾರತಗಳೂ ಸರ್ವಜ್ಞನ ನಿಷ್ಠುರವಾದ ವಿಮರ್ಶೆಗೆ ಪಾತ್ರವಾಗಿದೆ. ಈ ವಿಷಯದಲ್ಲಿ ಬಹು ಬೇಗ ಗಮನ ಸೆಳೆಯುವಂಥ ಒಂದು ವಚನ ಆಕ್ಷೇಪಾರ್ಹವೆನ್ನಿಸುವಷ್ಟು ಖಾರವಾಗಿದೆ.

ಹಾದರರದ ಕಥೆಯನ್ನು ಸೋದರ ವಧೆಯನ್ನು
ಆದರಿಸಿ ಪುಣ್ಯಕಥೆಯೆಂದು ಕೇಳುವರು
ಮಾದಿಗರು ನೋಡ ಸರ್ವಜ್ಞ.

ಜಿ.ಎಸ್. ಶಿವರುದ್ರಪ್ಪ ಅವರು ಈ ಕುರಿತು ಬರೆಯುತ್ತ "ರಾಮಾಯಣ, ಮಹಾಭಾರತಗಳನ್ನು ಸರ್ವಜ್ಞನ ಮಾಡಿದ ಈ ಟೀಕೆ ಅನಾರೋಗ್ಯಕರವಾದ ಮನಸ್ಸಿನಿಂದ ಬಂದ ಭಾವನಾ ವಿಮರ್ಶೆ ಎಂದು ಅಭಿಪ್ರಾಯಪಟ್ಟಿದ್ದಾರೆ".[೬] ಇಲ್ಲಿ ಅವರು ಎರಡು ಅಂಶಗಳನ್ನು ಒತ್ತಿ ಹೇಳಿದ್ದಾರೆ. ಒಂದು ಈ ಪದ್ಯ ರಾಮಾಯಣ-ಮಹಾಭಾರತಗಳೆರಡಕ್ಕೂ ಅನ್ವಯಿಸುತ್ತದೆ. ಎರಡು- ಇದು ಪ್ರಕ್ಷಿಪ್ತ ವಾದುದಾಗಿದೆ.

ಆದರೆ ಉತ್ತಂಗಿ ಚೆನ್ನಪ್ಪ ಅವರು ೧೯೭೪ರಲ್ಲಿ ಪ್ರಕಟಿಸಿದ ಸರ್ವಜ್ಞನ ವಚನಗಳ ವಿಶೇಷಾವೃತ್ತಿಯಲ್ಲಿ ಇದನ್ನು "ವಿಶೇಷ ವಿರೂಪ ಹೊಂದದೆ ಕೈಬರಹದ ಹಾಗೂ ಅಚ್ಚಾದ ಎಲ್ಲ ಪ್ರತಿಗಳಲ್ಲಿ ದೊರೆಯುವ ಪದ್ಯವೆಂಬ ಕಾರಣಕ್ಕಾಗಿ, ಕವಿಕೃತವೆಂದು ನಿಖರವಾಗಿ ಚುಕ್ಕಿ ಹಾಕಿ ಗುರುತಿಸಿದ್ದಾರೆ".[೭] ಮಾತ್ರವಲ್ಲ ಮೈಸೂರು ರಾಜ್ಯದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯವರು ಪ್ರಕಟಿಸಿದ ಗ್ರಂಥಗಳಲ್ಲಿ ಅದಕ್ಕೆ ಮಹಾಭಾರತ ಎಂಬ ಶೀರ್ಷಿಕೆ ಕೊಟ್ಟು ಇದಕ್ಕೂ ರಾಮಾಯಣಕ್ಕೂ ಯಾವ ಸಂಬಂಧವೂ ಇಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಸರ್ವಜ್ಞನ ವಿಕಾಸೋನ್ಮುಖ ವ್ಯಕ್ತಿತ್ವದ, ವಿಶಿಷ್ಟ ಮನೋಧರ್ಮದ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಈ ಪದ್ಯ ಸರ್ವಜ್ಞನ ಕೃತ ಮಾತ್ರವಲ್ಲ, ಮಹಾಭಾರತವನ್ನು ಮಾತ್ರವೇ ನಿರ್ದೇಶಿಸುತ್ತದೆ ಎಂಬುದು ಅವಗತವಾಗುತ್ತದೆ.

ಮಹಾಭಾರತ 'ಸೋದರ ವಧೆ'ಯೂ ಅಹುದೆಂಬುದನ್ನು ವಿವರಿಸುವ ಉಲ್ಲೇಖಗಳು ಅಲ್ಲಲ್ಲಿ ಬಂದಿದೆ.

ಲೋಭದಿಂ ಕೌರವನು ಲಾಭವನು ಪಡೆದಿಹನೆ?
ನಾಭಿಯಿಂ ಕೆಳಗೆ ಎರಡೂರ ಕೊಂಡಾಗ

---

೬. ವಿಮರ್ಶೆಯ ಪೂರ್ವಪಶ್ಚಿಮ, ಜಿ.ಎಸ್. ಶಿವರುದ್ರಪ್ಪ, ಪುಟ-೩೧
೭. ಸರ್ವಜ್ಞನ ವಚನಗಳು, ಉತ್ತಂಗಿ ಚನ್ನಪ್ಪ, ಪುಟ-೧೪೬

ಲಾಭ ಬಂದಿಹುದೆ ಸರ್ವಜ್ಞ.

ಬಲವಂತರಾದರು ಕಲಹದಿಂ ಕೆಟ್ಟಿಹರು
ಬಲವಂತ........... ದುರ್ಯೋಧನಾದಿಗಳು
ಛಲದಲುಳಿದಿಹರೆ? ಸರ್ವಜ್ಞ.

ಬಲಶಾಲಿಯಾದ, ಛಲಗಾರನಾದ ದುರ್ಯೋಧನ ರಾಜ್ಯದ ಮೇಲಿನ ಲೋಭವೇ ಆತ ಪಾಂಡವರೊಡನೆ ಕಲಹಕ್ಕಿಳಿಯಲು ಪ್ರೇರಕವಾಯಿತು! ಪರಿಣಾಮವಾಗಿ ಮಹಾಭಾರತದ ಯುದ್ಧ ಕೌರವಾದಿಗಳ ಸಾವು.

ಆನಾಫಂಗಿತವಾಗಿ ಅಲ್ಲಲ್ಲಿ ಮಹಾಭಾರತದ ಮತ್ತಿತರ ವ್ಯಕ್ತಿಗಳ ಹರಕು ಮುರುಕು ಚಿತ್ರಗಳೂ ಮಿಂಚಿವೆ. ಭೀಮನ ಬಲಶಾಲಿತ್ವ, ಪತ್ನಿಪ್ರೇಮ, ಅರ್ಜುನನ ಶೌರ್ಯ, ಕೃಷ್ಣನ ಮಹಿ ಮೆಗಳೂ ವ್ಯಂಜಿತವಾಗಿವೆ. ಆದರೆ ಅಪ್ಪಿ ತಪ್ಪಿಯೂ ಕರ್ಣನ ಉಲ್ಲೇಖ ಬಂದಿಲ್ಲ.

ರಾಮಾಯಣವನ್ನೂ ಕೂಡ ಸರ್ವಜ್ಞ ವಿವೇಚಿಸಿದ್ದಾನೆ. ರಾಮಾಯಣದ ಪ್ರತಿನಾಯಕನಾದ ರಾವಣನ ಚಿತ್ರಣ ಮಾತ್ರ ವಿಶಿಷ್ಟವಾದ ಬಣ್ಣಗಾರಿಕೆಯಿಂದ ಒಡಮಾಡಿ, ರಾಮನ ಪಾತ್ರವನ್ನು ಮಸುಕುಗೊಳಿಸುವಂಥ ಪ್ರಕಾಶತೆಯನ್ನು ಹೊಂದಿದೆ. ರಾಮ-ರಾವಣರನ್ನು ಪ್ರತ್ಯೇಕವಾಗಿ ಚಿತ್ರಿಸಿ ರಾಮನಿಗಿಂತಲೂ ರಾವಣನ ಕಡೆಗೇ ತನ್ನ ಮನಸ್ಸು ಒಲಿದುದನ್ನು ಸರ್ವಜ್ಞ ಪ್ರಕಟಪಡಿಸಿದ್ದಾನೆ. ಮುಂದುವರಿದು ಅವರಿಬ್ಬರನ್ನೂ ಒಂದೇ ತಕ್ಕಡಿಯಲ್ಲಿಟ್ಟು ತೂಗಿ ನೋಡುವ ಪ್ರಯತ್ನ ಮಾಡಿದ್ದಾನೆ. ಈ ಅಂಶ ವಿಶೇಷವಾದ ಜಿಜ್ಞಾಸೆಗೆ ಒಳಗಾಗಿದೆ.

ಸೀತೆ ವೈದುದು ಭಂಗ ಸೇತು ಕಟ್ಟಿದ್ದು ಭಂಗ
ಮಾತಿನ ಭಂಗ ರಾಮಂಗೆ, ರಾವಣನಿ
ಗೇತರದು ಭಂಗ? ಸರ್ವಜ್ಞ.

ರಾಮಾಯಣ ಕಥಾನಕದ 'ಸೀತಾಪಹರಣ', 'ಸೇತುಬಂಧನ', 'ಅಗಸನ ಅಥವಾ ಜನತೆಯ ನಿಂದೆ' ಮಾತ್ರ ಮುಖಭಂಗವಲ್ಲದೆ ರಾವಣನಿಗಲ್ಲವೆಂದು ಸಾರಿದ್ದಾನೆ. ಇಲ್ಲಿಯ ಮೊದಲೆರೆಡು ಮಾತು ರಾಮನ ದುರ್ದೈವ, ದುರ್ಬಲತೆಗಳನ್ನು ಧ್ವನಿಸಿದರೆ, ರಾವಣನ ಬಲವಂತಿಕೆಯನ್ನು ಬೆಳಗುತ್ತವೆ. ಪತ್ನಿಯನ್ನು ಕಳೆದುಕೊಂಡುದು, ಲಂಕೆಗೆ ಹೋಗಲೆಂದು ಸೇತುವೆ ಕಟ್ಟಿದುದು - ಇವು ರಾಮನ ಶಕ್ತಿಯ ಮಿತಿಯನ್ನು ನಿರ್ದೇಶಿಸಿದರೆ, ಪ್ರತಿಯಾಗಿ ಇವು ರಾವಣನ ಅದ್ಭುತವಾದ ಬಲವಂತಿಕೆಯನ್ನು ಸೂಚ್ಯವಾಗಿ ಬಣ್ಣಿಸುತ್ತವೆ. ಈ ಸೀತಾಪಹರಣ ಹೇಗೆ ಇಲ್ಲದ-ಸಲ್ಲದ ಮಾತುಗಳಿಗೆ ಅವಕಾಶ ಕಲ್ಪಿಸಿಕೊಟ್ಟು ರಾಮನಿಗೆ ಕಲಂಕಪ್ರಾಯವಾಗಿ ಪರಿಣಮಿಸಿತಂಬುದನ್ನು ಮೂರನೆಯ ಮಾತು ವ್ಯಂಜಿಸುತ್ತದೆ.

ಇನ್ನೊಂದು ಪದ್ಯದಲ್ಲಿಯೂ ರಾಮ-ರಾವಣರನ್ನು ತೂಗಿ ನೇಡುವ ಕೆಲಸವನ್ನು ಸರ್ವಜ್ಞ

ಮಾಡಿದ್ದಾನೆ.

ಜಾವಕ್ಕೆ ಬದುಕುವರೆ ಹೇವಕ್ಕೆ ಬುದುಕುವದು
ರಾವಣನು ಸತ್ತನೆನಬೇಡ ರಾಮಂಗೆ
ಹೇವ ಬಿಟ್ಟಿವುದೇ? ಸರ್ವಜ್ಞ

ಹಿಂದಿನ ವಚನದಲ್ಲಿ ಪರ್ಯಾಯವಾಗಿ ವ್ಯಕ್ತವಾದ ರಾವಣ ಪ್ರಶಂಸೆ ಇಲ್ಲಿ ಇನ್ನೂ ಪರಿಣಾಮಕಾರಿಯಾಗಿ ಪ್ರತಿಬಿಂಬಿತವಾಗಿದೆ. ಒಟ್ಟಾರೆ ರಾಮಾಯಣದ ವಿವೇಚನೆ, ವಿಶ್ಲೇಷಣೆಯಲ್ಲಿ ಹೊಸಬೆಳಕೊಂದು ಮೂಡಿದ ಅನುಭವವಾಗುತ್ತದೆ.

ವೈದಿಕ ಮತದ ಯಜ್ಞ-ಯಾಗಾದಿಗಳನ್ನು, ಪಶು ಬಲಿಯನ್ನು ಕಂಡು ನೊಂದಿದ ಜೀವದಯೆಯನ್ನು ಜೀವನದ ಬಹುದೊಡ್ಡ ಮೌಲ್ಯವೆಂದು ನಂಬಿದ ಸರ್ವಜ್ಞನ ಮನವನ್ನು ಜೈನಮತದ ಅಹಿಂಸೆಯ ಆದರ್ಶ ಸೂರೆ ಮಾಡಿದೆ.

ಕೊಲುವ ಧರ್ಮವನೊಯ್ದು ಒಲೆಯೊಳಗೆ ಇಕ್ಕುವ
ಕೊಲಲಾಗದೆಂಬ ಜೈನನ ಮತವೆನ್ನ
ತಲೆಯ ಮೇಲಿರಲಿ ಸರ್ವಜ್ಞ

'ಕೊಲುವ ಧರ್ಮ'ವೆನಿಸಿದ ವೈದಿಕ ಮತವನ್ನು ಪ್ರತಿಭಟಿಸಿ ಕೊಲಲಾಗದೆಂಬ ಅಹಿಂಸಾ ತತ್ವವನ್ನು ಎತ್ತಿ ಹಿಡಿದ ಜೈನ ಧರ್ಮ ತನ್ನ ತಲೆಯ ಮೇಲಿರಲಿ ಎಂದು ಘೋಷಿಸಿದ್ದಾರೆ. ವೀರಶೈವನಾಗಿ ಬಾಳಿ ಬದುಕುತ್ತಿದ್ದರೂ, ಶಿವನನ್ನೇ ಪರಮ ದೈವವಾಗಿ ನಿಡುನಂಬಿದ್ದರೂ, ಜೈನ ಧರ್ಮವನ್ನು ಕೊಂಡಾಡಿ ಪರಧರ್ಮ ಸಹಿಷ್ಣತೆಯನ್ನು ಗುಣಪಕ್ಷಪಾತವನ್ನು ಮೆರೆದಿದ್ದಾನೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ,

ಸೃಷ್ಟಿಯಲಿ ಜಿನಧರ್ಮ ಪಟ್ಟಗಟ್ಟಿರುತಿಕ್ಕು
ಕೆಟ್ಟರೆ ಕೆಡುಗು ಜಗವೆಲ್ಲ ತಲೆಹೋದ
ಅಟ್ಟೆಯಂತಿಕ್ಕು ಸರ್ವಜ್ಞ

"ಎಂದೊರೆದು, ಜಿನಧರ್ಮವೇ ಸರ್ವಶ್ರೇಷ್ಠವೆಂದು ಘೋಷಿಸಿದುದಲ್ಲದೆ, ಅದು ಕೆಟ್ಟರೆ ಅಹಿಂಸಾತತ್ವಕ್ಕೆ ಸಂಚಕಾರವಾಗಿ ಜಗತ್ತು ಹಾಳಾಗಿ ತಲೆಹೋದ ಮುಂಡದಂತಾಗುವುದೆಂದು ಸರ್ವಜ್ಞ ಸಾರಿದ್ದಾನೆ".[೮]

ಈ ಸಂದರ್ಭದಲ್ಲಿ ಉತ್ತಂಗಿ ಚೆನ್ನಪ್ಪನವರು ಆಡಿರುವ ಮಾತು ಗಮನಾರ್ಹವಾಗಿದೆ - "ಜೈನರ ಅಹಿಂಸಾವಾದವನ್ನು ಸರ್ವಜ್ಞನು ತಲೆಯ ಮೇಲಿಟ್ಟು ಕೊಂಡರೂ ಅದು ಅವ್ಯಾವಹಾರಿಕ ವಾಗಿರುವುದರಿಂದ ಸಂಪೂರ್ಣವಾದ ಸತ್ಯವಲ್ಲವೆಂದು ಅವನ ಮತ. ಏಕೆಂದರೆ ಮಾನವನು ಜೀವ ಸಹಿತವಾದ ದವಸ ಧಾನ್ಯಾದಿ ಆಹಾರ ಪದಾರ್ಥಗಳಿಂದ ಬದುಕ ಬಹುದಲ್ಲದೇ ಜೀವರಹಿತವಾದ ಮಣ್ಣನ್ನು ತಿಂದು ಜೀವಿಸಲಾರನು. ನಾವು ತಿನ್ನುವ ಆಹಾರವು ತತ್ಪೂರ್ವದಲ್ಲಿ ಜೀವವು

೮. ಅಡಿ ಟಿಪ್ಪಣಿ ೨ರಂತೆ, ಪುಟ-೬೯.

ಸಿದ್ಧಪಡಿಸಿದ್ದ ಕಾರ್ಯವಾಗಿದ್ದು ಕುಡಿಯುವ ನೀರಿನಲ್ಲಿ ಸಹ ಲಕ್ಷಾಂತರ ಜೀವಾಂಶಗಳು ಇರುವಂತೆ ತಿಳಿದು ಬರುತ್ತದೆ. ಹೀಗಾಗಿ ಮಾಂಸಹಾರಿಯು ಹೇಗೆ ಪ್ರಾಣವಧೆಯನ್ನು ಮಾಡಬೇಕಾಗುತ್ತದೆಯೋ ಹಾಗೆಯೇ ಶಾಖಾಹಾರಿಯೂ ಸಸ್ಯವಧೆಯನ್ನು ಮಾಡಬೇಕಾಗುತ್ತದೆ. ಮಾಂಸಾಹಾರಿಯು ಮಾಡುವ ಹಿಂಸೆಯು ದೃಶ್ಯವೂ, ಶಾಖಾಹಾರಿಯ ಹಿಂಸೆಯು ಅದೃಶ್ಯವೂ ಆಗಿರುವುದರಿಂದ ಒಂದು ಇನ್ನೊಂದಕ್ಕಿಂತ ಕ್ರೂರವಾಗಿ ಕಾಣಿಸುವುದಷ್ಟೆ ಇದರ ಇಂಗಿತವನ್ನು ಸರ್ವಜ್ಞನು

ಎಂತು ತಪಸಿಗಳಂತೆ ನಿಂತ ಫಲಜೀವಿಗಳ
ಜಂತುವಲ್ಲೆಂದು ಜಿನ ತಿಂದು
ಸಂತೆಯೊಳಗಿಡುವ ಸರ್ವಜ್ಞ

ಎಂದು ಕಂಠೋಕ್ತವಾಗಿ ವಚನಿಸಿದ್ದಾನೆ".[೯]

ಜೈನರಲ್ಲೂ ಅಂದರೆ ಜೈನ ಮತೀಯರಲ್ಲೂ ಬಾಹ್ಯಾಚಾರಗಳಿಗೆ ಬಲಿ ಬಿದ್ದವರುಂಟು. ಇಂಥವರೂ ಸರ್ವಜ್ಞನ ಖಂಡನೆಗೆ ಈಡಾಗಿದ್ದಾರೆ.

ಬಟ್ಟಿತಾಗಿಯೆ ಬೊಟ್ಟ ನಿಟ್ಟು ಒಪ್ಪುವ ಜೈನ
ನೆಟ್ಟನೆ ಸ್ವರ್ಗ ಪಡೆಯುವಡೆ ಸಾಣೆಕಲ್
ಕೆಟ್ಟ ಕೇಡೇನು? ಸರ್ವಜ್ಞ

ಇಂಥ ಅರ್ಥವಿಲ್ಲದ ಬಾಹ್ಯಾಚಾರಗಳಿಗಿಂತ, ಅವ್ಯಾವಹಾರಿಕತೆಗೆ ಎಡೆಗೊಡದ ಅಹಿಂಸಾವಾದವನ್ನು ಎತ್ತಿಹಿಡಿದು ಜೀವದಯೆಗೆ ಅವಕಾಶ ಕಲ್ಪಿಸಿ ಕೊಡುವ ಜೈನಧರ್ಮವೇ ಮಿಗಿಲಾದುದೆಂಬ ಭಾವ ಸರ್ವಜ್ಞನದಾಗಿದೆ.

ಸರ್ವಜ್ಞ ಮುಸ್ಲಿಮರನ್ನು 'ತುರುಕ'ರೆಂದು ಕರೆದಿದ್ದಾರೆ. ತುರ್ಕಿಸ್ತಾನದಿಂದ ಭಾರತಕ್ಕೆ ಬಂದ ಇಸ್ಲಾಂ ಮತದ ಅನುಯಾಯಿಗಳೆಂಬ ಅರ್ಥದ ಈ ಪದ ಮುಂದೆ ಮುಸ್ಲಿಮರೆಲ್ಲರಿಗೂ ಅನ್ವಯವಾದಂತಿದೆ. ತನ್ನ ನೀತಿ ಪದ್ಧತಿಯ ವಚನಗಳಲ್ಲಿ ಸರ್ವಜ್ಞ ಆನುಷಂಗಿಕವಾಗಿ ಎರಡು ಕಡೆ ತುರುಕರ ಅಥವಾ ಮುಸ್ಲಿಮರ ವಿಮರ್ಶೆ ಮಾಡಿದ್ದಾರೆ.

ತುರುಕರ ನೆರೆ ಹೊಲ್ಲ ಹರುಕನ ಕೆಳೆ ಹೊಲ್ಲ
ತಿರಿಗೂಳನಿಟ್ಟು ಉಣಹೊಲ್ಲ, ಪರಸತಿಯ
ಸರಸವೇ ಹೊಲ್ಲ ಸರ್ವಜ್ಞ

ತುರುಕನ ನೆರೆ ಹೊಲ್ಲ ಹರುಕನ ಕೆಳೆ ಹೊಲ್ಲ
ಮುರುಕ ಮಾಡುವಳ ನಗೆ ಹೊಲ್ಲ, ಮಗುವಿಗೆ
ಕರಕನ್ನ ಹೊಲ್ಲ ಸರ್ವಜ್ಞ

ಮುಸ್ಲಿಮರ ನೆರೆ ಏಕೆ ಹೊಲ್ಲದ್ದು? ಅಂತ ಯಾವ ಅಸಹ್ಯಗುಣ ಅವರಲ್ಲಿದೆ ಎಂಬುದರ

---

೯. ಸರ್ವಜ್ಞನ ವಚನಗಳು, ಉತ್ತಂಗಿ ಚನ್ನಪ್ಪ, ೧೯೬೦, ಪುಟ- LXXV-LXXVI

ವಿವರಣೆಯೂ ಇಲ್ಲಿಲ್ಲ. ಕಾಲ ಜ್ಞಾನ ಪದ್ಧತಿಯ ವಚನವೊಂದು ಈ ರಹಸ್ಯದ ಮೇಲೆ ಬೆಳಕು ಚೆಲ್ಲುವಂತಿದೆ.

ಪಶುವ ನಂದಿಯ ಕಡಿದು ಬಿಸುಮಿಲ್ಲಗಳ ಮಾಡಿ
ಹಸು ಕೋಳಿ ಕುರಿಯ ಕಡಿಯಲಾ ಹಂಪೆಯಲಿ
ಕಿಸುಕುಳವಾಯ್ತು ಸರ್ವಜ್ಞ.

ಎತ್ತು, ಆಕಳು, ಕುರಿ, ಕೋಳಿ ಕಡಿದು ತಿನ್ನುವ ಮಾಂಸಹಾರಿಗಳಾಗಿರುವುದೇ ಅಂಥವರ ನೆರೆ ಸಲ್ಲದೆಂಬ ಅಭಿಪ್ರಾಯಕ್ಕೆ ಕಾರಣವಾದಂತಿದೆ. ಜೈನಮತದ ಅಹಿಂಸೆಯ ವಿಮರ್ಶೆ ಮಾಡುವಾಗ ಮಾಂಸಹಾರವೂ ಕೆಲವರಿಗೆ ಸಹಜ, ಖಂಡನೀಯವಲ್ಲವೆಂಬ ವಿಚಾರವನ್ನು ವ್ಯಕ್ತಪಡಿಸಿದ ಸರ್ವಜ್ಞ ಇಂತಹ ಮಾತನ್ನಾಡುವುದು ಸರಿಯೇ ಎಂದು ಕೇಳಬಹುದಾಗಿದೆ. ಆದರೆ ಅದಕ್ಕೆ ಕಾರಣವಿಲ್ಲದಿಲ್ಲ. ಬಹುಶಃ ಈ ಮೇಲೆ ಉಕ್ತವಾದ ಪ್ರಾಣಿ ಹಿಂಸೆಯ ಪ್ರತ್ಯಕ್ಷವೆಂಬಂಥ ದರ್ಶನದ ವಿಶಿಷ್ಟ ಸಂದರ್ಭದಿಂದ ಈ ವಚನ ಪ್ರೇರಿತವಾದಂತಿದೆ. ಅದಕ್ಕೆ ಪೂರಕವಾಗಿ ಶಿವನ ವಾಹನ ನಂದಿಯ ಕೊಲ್ಲುವಿಕೆ ಹಾಗೂ ಹಸುವಿನ ಕೊಲ್ಲುವಿಕೆಯು ಅವನ ಕರುಳಿಗೆ ಚುರುಕು ತಟ್ಟಿಸಿರಬಹುದಾಗಿದೆ. ಅದೇನಿದ್ದರೂ ಜೀವ ದಯೆಯೇ ಜೀವನದ ಪರಮ ಮೌಲ್ಯವೆಂದು ಬಗೆದ ಸರ್ವಜ್ಞನಿಗೆ ಈ ವಿಮರ್ಶೆ ಶೋಭಿಸುವಂತದ್ದಾಗಿದೆ. ಆದರೆ ಮುಸ್ಲಿಂ ಮತದ ಇನ್ನಿತರ ಆಚಾರ-ವಿಚಾರಗಳ ಬಗೆಗಿನ ಆತನ ವಿಮರ್ಶೆ-ವಿಡಂಬನೆ ಇನ್ನೂ ಬಯಲಿಗೆ ಬರಬೇಕಿದೆ.

ನಿಸ್ಪೃಹತೆಯೇ ಜೀವನಾಡಿಯಾದ ನ್ಯಾಯ ನಿಷ್ಠುರಿ ಸರ್ವಜ್ಞನ ಸ್ವಂತದ ಧರ್ಮವೆಂದು ವಿದ್ವಾಂಸರು ಊಹಿಸಿರುವ ವೀರಶೈವಮತದ ವಿಚಾರ ಮತ್ತು ಆಚಾರಗಳಲ್ಲಿಯ ವಿಸಂಗತಿಗಳನ್ನು ವ್ಯರ್ಥದ ಬಾಹ್ಯಾಡಂಬರಗಳನ್ನೂ ಅಷ್ಟೇ ತೀಕ್ಷ್ಣವಾಗಿ ತೆರೆದ ಮನದಿಂದ ಅವನು ಖಂಡಿಸಿದ್ದಾನೆ, ವಿಡಂಬಿಸಿದ್ದಾನೆ.

ವೀರಶೈವ ಮತದಲ್ಲಿ ಮೂಲತಃ ಪ್ರತಿಮಾ ಪೂಜೆಗೆ ಅವಕಾಶವಿಲ್ಲ. ಏಕೆಂದರೆ, ಲಿಂಗ ಸ್ವರೂಪಿಯಾದ ಆ ಪರಶಿವ,

ಕಲ್ಲಿನಲಿ ಕುಚದಲಿ ಬಳ್ಳದಲಿ ಹಿಕ್ಕೆಯಲಿ
ಎಲ್ಲಿ ಭಾವಿಸಿದಡಲ್ಲಿರ್ಪ ಭರಿತನು ....

ಹಾಗಿರುವುದರಿಂದ

ಲಿಂಗಕ್ಕೆ ದೇಗುಲವೇ ಇಲ್ಲ

ಈ ಕಾರಣಕ್ಕಾಗಿಯೇ ಪ್ರತಿಮಾ ಪೂಜೆ ಅರ್ಥವಿಲ್ಲದ್ದೂ ವ್ಯರ್ಥವಾದದ್ದೂ ಎಂಬ ನಂಬಿಕೆ ಸರ್ವಜ್ಞನದು; ಆದ್ದರಿಂದಲೇ ಆತ ಅದನ್ನು ಕಂಡು ಗುಡುಗುತ್ತಾನೆ.

ಬಟ್ಟೆಯ ಕಲ್ಲಿಂಗೆ ಬಟ್ಟೆ ಪತ್ರಿಯನಿಟ್ಟು
ಕಟ್ಟಿದ ಲಿಂಗವಡಿಯಾಗಿ ಶರಣೆಂಬ

ಭ್ರಷ್ಟರನು ನೋಡ ಸರ್ವಜ್ಞ.

ಕಲ್ಲುಗುಂಡಿನ ಮೇಲೆ ಮಲ್ಲಿಗೆಯ ಅರಳಿಕ್ಕಿ
ನಿಲ್ಲದೆ ಹಣೆಯ ಬಡಿವರ್ಗೆ ಬುಗುಟಿಲ್ಲ
ದಿಲ್ಲಿ ಕಾಣಯ್ಯ ಸರ್ವಜ್ಞ.

ಪ್ರತಿಮೆ ಎಷ್ಟಾದರೂ ಕಲ್ಲು. ಇಂತಹ ಕಲ್ಲುಗಳಿಗೆ ಪೂಜೆ-ಪುನಸ್ಕಾರ ಜರುಗಿಸುವುದರಿಂದ, ಎರಗುವುದರಿಂದ ಯಾವ ಪ್ರಯೋಜನವೂ ಇಲ್ಲ. ಆದರೆ ಅದರಿಂದ ಒಂದು ಬಗೆಯ ಪರಿಣಾಮ ಮಾತ್ರವಾಗಬಹುದಾಗಿದೆ. ನಮಸ್ಕಾರ ಮಾಡುವಾಗ ಕೊರಳೊಳಗಿನ ಲಿಂಗವು ಅಡಿಯಾಗಿ ಬೀಳುವುದು. ಗಡಿಬಿಡಿಯಲ್ಲಿ ನಮಸ್ಕರಿಸಲು ಯತ್ನಿಸಿದರೆ ಹಣೆಗೆ ಬುಗುಟ ಏಳುವುದು. ಇಂತಹ ವಿಪರೀತ-ಪರಿಣಾಮವನ್ನುಂಟುಮಾಡುವ ಕಲ್ಲಿನ ಪ್ರತಿಮೆಗಾಗಿ ಕಟ್ಟುವ ಗುಡಿಯೂ ಕಲ್ಲೇ!

ಪ್ರತಿಮಾ ಪೂಜೆಯಂತೆ ಸ್ಥಾವರ ಲಿಂಗಕ್ಕೆ ಶ್ರದ್ಧೆ-ಗೌರವ ಸಲ್ಲಿಸುವುದನ್ನೂ ಸರ್ವಜ್ಞ ವಿಡಂಬಿಸಿದ್ದಾನೆ.

ನಂಬುತಿರು ನಂಬದಿರು ಎಂಬುವರು ಮಾನವರು
ಸಂಬಾರವರೆವ ಬಲು ಕಲ್ಲು ಹರನೆಂದು
ನಂಬುವವರಾರು ಸರ್ವಜ್ಞ.

ತತ್ವವನ್ನರಿಯದೆ ಭಸಿತ-ರುದ್ರಾಕ್ಷಿಗಳನ್ನು ಧಾರಣೆ ಮಾಡಿಕೊಂಡು ತಾವೇ ಧರ್ಮವೀರರೆಂದು ಮೆರೆಯುವ ವೀರಶೈವರನ್ನೂ, ಇತರ ಮತೀಯರನ್ನೆಂತೋ ಹಾಗೆಯೇ ಕಟುವಾಗಿ ಟೀಕಿಸಿದ್ದಾನೆ.

ಕತ್ತೆ ಬೂದಿಲಿ ಹೊರಳಿ ಮತ್ತೆ ಯತಿಯಪ್ಪುದೇ
ತತ್ವವರಿಯದಲೆ ಭಸಿತವಿಟ್ಟವ ಶುದ್ಧ
ಕತ್ತಲೆಯಂತೆಂದ ಸರ್ವಜ್ಞ.

ಅತ್ತಿ ಮರ ತಾ ಕಾಯ ಹೊತ್ತಿರ್ದ ತೆರನಂತೆ
ತತ್ವ ಭೇದವನು ಅರಿಯದಲೆ ರುದ್ರಾಕ್ಷಿ
ಹೊತ್ತು ಫಲವೇನು ಸರ್ವಜ್ಞ.

ಕತ್ತೆಯ ದೃಷ್ಟಾಂತ ಹಾಗೂ ಅತ್ತಿ ಮರದ ಉಪಮೆಗಳಲ್ಲಿಯ ವಿಡಂಬನೆಯ ಮೊನೆ, ಕವಿತ್ವದ ಮಿಂಚು, ಕವಿಯ ಪ್ರಾಮಾಣಿಕ ಹಾಗೂ ನಿರ್ವಿಕಾರ ಮನಸ್ಸಿಗೆ ಹಿಡಿದ ಕನ್ನಡಿಯಾಗಿದೆ.

ಹೀಗೆ ಸರ್ವಜ್ಞಕವಿ ಸ್ವಮತ-ಪರಮತವೆನ್ನದೆ ಎಲ್ಲ ಧರ್ಮಗಳ ಆಚಾರ-ವಿಚಾರಗಳಲ್ಲಿಯೂ ತಪ್ಪು, ಅವಿಚಾರ, ಆಡಂಬರ ಮೊದಲಾದವುಗಳನ್ನು ಅಷ್ಟೇ ನ್ಯಾಯ ನಿಷ್ಠುರತೆ-ನಿರ್ದಾಕ್ಷಿಣ್ಯ ಭಾವದಿಂದ ಖಂಡಿಸಿದ್ದಾನೆ, ವಿಡಂಬಿಸಿದ್ದಾನೆ. ಈ ಮೂಲಕ ತನ್ನ ಉದಾತ್ತ ಮನಸ್ಕತೆಯನ್ನೂ ವಿಶ್ವಮಾನ್ಯತೆಯನ್ನೂ

ಮೆರೆದಿದ್ದಾನೆ.

ಮತೀಯ ಆಚಾರ-ವಿಚಾರಗಳ ಹಾಗೆಯೇ ವಿವಿಧ ಕಸಬುದಾರರ ಅಥವಾ ವೃತ್ತಿನಿರತರ ವರ್ತನೆಯೂ ಸರ್ವಜ್ಞನ ಚಿಕಿತ್ಸಕ ದೃಷ್ಟಿಗೆ ಪಕ್ಕಾಗಿದೆ. ವಿಮರ್ಶೆ, ವಿಡಂಬನೆಗೆ ವಸ್ತುವಾಗಿದೆ. ಗ್ರಾಮ ಜೀವನದಲ್ಲಿಯ ಅವರ ಅಂಕು-ಡೊಂಕುಗಳನ್ನು ಆತ ನಿಶಿತಮತಿಯಿಂದ ಭೇದಿಸಿ, ಮುಖಕ್ಕೆ ಹೊಡೆಯುವಂತೆ ಖಂಡಿಸಿದ್ದಾನೆ. ಗಟ್ಟಿಮುಟ್ಟಾದ ಅನುಭವದ ಬೆಳಕಿನಲ್ಲಿ ಜನಪದ ವಿವೇಕವನ್ನು ಬೆಳಗಿಸಿ. ತನ್ನ ವಿಡಂಬನೆ, ಖಂಡನೆ ಜನಮನದಲ್ಲಿ ನಾಟಿ ನಿಲ್ಲುವಂತೆ ಮಾಡಿದ್ದಾನೆ.

ಪಾಂಚಾಳರಯ್ವರು ವಂಚನೆಗೆ ಗುರುವರರು
ಕಿಂಚಿತ್ತು ನಂಬಿ ಕೆಡಬೇಡ, ತಿಗುಣಿಯ
ಮಂಚದಂತಿಹರು ಸರ್ವಜ್ಞ

ಅಕ್ಕಸಾಲಿಗ, ಬಡಿಗ, ಕಮ್ಮಾರ, ಕಂಚುಗಾರ ಮತ್ತು ಕಲ್ಲುಕುಟಿಕರು - ಎಂಬ ವೃತ್ತಿ ಪಂಚಕದ ವ್ಯಕ್ತಿಗಳೆಲ್ಲರೂ ವಂಚನೆಯೇ ವೃತ್ತಿ ಶೀಲರೆಂಬಂತೆ ವರ್ತಿಸುವುದನ್ನು ಕಂಡು ಖತಿಗೊಂಡ ಕವಿಮನ, ಅವರನ್ನು ನಂಬಿಕೆಗೆ ಅನರ್ಹರಾದ ದಗಾಬೋರರೆಂದು ಖಂಡಿಸಿದೆ. ಆದರೆ ಅವರಿಗೂ ಹಳ್ಳಿಯ ಜನಸಾಮಾನ್ಯರಿಗೂ ಬಿಡಲಾಗದು ಒಂದು ಬಂಧ ಬೆಸೆದಿದೆ. ನಮಗರಿವಿಲ್ಲದಂತೆಯೇ ನಮ್ಮ ನೆತ್ತರು ಹೀರುವ ರಕ್ತ ಪಿಪಾಯಿಗಳವರು. ಆದ್ದರಿಂದ ಅವರೊಡನೆ ವ್ಯವಹರಿಸುವಾಗ ಸದಾ ಎಚ್ಚರಿಕೆಯಿಂದ ಇರುವುದು ಹಿತಕರ; ಮೈಮರೆತರೆ ನಂಬಿದವರಿಗೆ ಕೇಡು ಕಟ್ಟಿಟ್ಟ ಬುತ್ತಿ. ಪಾಂಚಾಳರೆಲ್ಲರೂ ಕಳ್ಳರಿಗೂ ಮಿಗಿಲಾದ ಕಳ್ಳರು.

ಕಳ್ಳನೂ ಒಳ್ಳಿದನು ಎಲ್ಲ ಜಾತಿಯೊಳಿಹರು
ಕಳ್ಳನೊಂದೆಡೆಗೆ ಉಪಕಾರಿ, ಪಂಚಾಳ
ನೆಲ್ಲಿರಲಿ ಕಳ್ಳ! ಸರ್ವಜ್ಞ

ಸಮಾಜಕಂಟಕರಾದ ಕಳ್ಳರು ಎಲ್ಲ ಜಾತಿಯಲ್ಲೂ ಇರುತ್ತಾರೆ. ಅಂತಹ ಕಳ್ಳರಲ್ಲೂ ಒಳ್ಳೆಯವರು, ಒಮ್ಮೊಮ್ಮೆ ಉಪಕಾರ ಮಾಡುವವರು ಇರುವುದುಂಟು. ಆದರೆ ಈ ಪಂಚಾಳರಲ್ಲಿ ಅಂತಹ ಒಳ್ಳೆಯವರು ದುರ್ಲಭ! ಅವರು ಕಳ್ಳರಂಥ ಕಳ್ಳರಿಗೂ ಮಿಗಿಲಾದ ಕಳ್ಳ-ಕದೀಮರು! ಹಿ ೕಗೆ ಸರ್ವಜ್ಞ ಇಲ್ಲಿ ಒಂದೇ ಬೀಸಿನಲ್ಲಿ ಈ ವೃತ್ತಿಗಾರರೆಲ್ಲರನ್ನೂ ಟೀಕಿಸಿದ್ದಾನೆ.

ಇತರ ವೃತ್ತಿಯಲ್ಲಿರುವಂತಹ ಸಮಾಜಕ್ಕೆ ವಿಘಾತವಾದ ಸುಳ್ಳುತನ, ಕಳ್ಳತನ, ಶೋಷಣೆಗಳಂಥ ಯಾವ ದುರ್ಗುಣಗಳಿಗೂ ಅವಕಾಶ ಕೊಡದೆ, ಕಾಯಕ ನಿಷ್ಠೆಯನ್ನು ಆತ ಮೆರೆಯುವುದೇ ಸರ್ವಜ್ಞನ ಮೆಚ್ಚಿಕೆಗೆ ಮೂಲಕಾರಣವಾದಂತಿದೆ. ಮೇಲಾಗಿ ನೇಯ್ಗೆಯ ಕೆಲಸ ಬಹಳ ಜಟಿಲವಾದ, ಕಲಾಕೌಶಲ್ಯ ಪ್ರದರ್ಶನಕ್ಕೆ ಅವಕಾಶವೀಯದ, ತಾಳ್ಮೆಯ ದುಡಿಮೆಯು ಅಗತ್ಯವಾದ ಕಾರ್ಯಕ್ಷೇತ್ರ. ಜೊತೆಗೆ ಈತನ ವೃತ್ತಿಶೀಲದಲ್ಲಿ ಯಾವ ನ್ಯೂನತೆಯೂ ಸರ್ವಜ್ಞನ ಭೇದಕ ದೃಷ್ಟಿಗೆ ಗೋಚರಿಸಿದಂತಿಲ್ಲ. ಇವೆಲ್ಲಾ ಕಾರಣಗಳಿಂದಾಗಿಯೂ ಆತ ಸರ್ವಜ್ಞನ ಖಂಡನೆಯನ್ನು ತಪ್ಪಿಸಿಕೊಂಡು ಮೆಚ್ಚಿಕೆಯನ್ನು

ಗಳಿಸಿದಂತಿದೆ.

ಬ್ರಾಹ್ಮಣ ಮತೀಯ ವೃತ್ತಿನಿರತರೂ ಸರ್ವಜ್ಞನ ಸೂಕ್ಷ್ಮ ದೃಷ್ಟಿಗೆ ಬಿದ್ದಿದ್ದಾರೆ. ಅವರಲ್ಲಿ ಸರ್ವಜ್ಞನ ವಿಶೇಷ ಆಗ್ರಹಕ್ಕೆ ತುತ್ತಾದವ ಕುಲಕರ್ಣಿ ಅಥವಾ ಶಾನುಭೋಗ. ಹಳ್ಳಿಯ ಮಟ್ಟದ ಅಧಿಕಾರ ರೂಢ ಪೀಠವನ್ನೇರಿದ ಕುಲಕರ್ಣಿಯ ಮೇಲೆಯೇ ಊರ ಕಂದಾಯ ವ್ಯವಸ್ಥೆಯ ವಸೂಲಿಯ ಸರ್ವ ಜವಾಬ್ದಾರಿ, ಅಧಿಕಾರ. ಹೀಗಾಗಿ ಶಿಕ್ಷಿತನಾದ ಆತನಿಗೆ ಅಶಿಕ್ಷಿತರನ್ನು ಸುಲಿಯಲು ಸುವರ್ಣಾವಕಾಶ.

ಅಕ್ಕರವ ಕಲಿತಾತ ಒಕ್ಕಲನು ತಿನಗಲಿತ
ಲೆಕ್ಕವನು ಕಲಿತ ಕರಣಿಕನು ನರಕದಲಿ
ಹೊಕ್ಕಾಡ ಕಲಿತ ಸರ್ವಜ್ಞ

ಬರೆವ ಕರಣಿಕನೊಡನೆ ಹಿರಿದು ಹೋರಲು ಬೇಡ
ಗರಗಸದೊಡನೆ ಮರ ಹೋರಿ ತನ್ನ ತಾ
ನಿರಿದುಕೊಂಡಂತೆ ಸರ್ವಜ್ಞ

ಕರಣಿಕ ವೃತ್ತಿಗೆ ಪ್ರತಿಯಾಗಿ ಜೋಯಿಸ ವೃತ್ತಿಯ ಬಗೆಗೆ ಅಭಿವ್ಯಕ್ತವಾದ ಸರ್ವಜ್ಞನ ಪ್ರತಿಕ್ರಿಯೆ ಸಮ್ಮಿಶ್ರವಾಗಿದೆ, ಸಂಕೀರ್ಣವಾಗಿದೆ. ಅದರ ನ್ಯೂನತೆಗಳನ್ನೂ ಎತ್ತಿತೋರುವುದರೊಡನೆ ನಿಜ ಸ್ವರೂಪವನ್ನು ಬಯಲಿಗೆಳೆದು ತೋರಿದವನು ಸರ್ವಜ್ಞ.

ಬಹುತೇಕ ಎಲ್ಲ ವೃತ್ತಿನಿರತರ ಬಗ್ಗೆ ಗಮನ ಹರಿಸಿದ ಸರ್ವಜ್ಞ ಭಾರತದ ಬೆನ್ನೆಲುಬಾದ ಬೇಸಾಯಗಾರರತ್ತ ತನ್ನ ಗಮನವನ್ನು ಹರಿಸಿದ್ದಾನೆ. ಬೇಸಾಯದಲ್ಲಿ ಯಾವುದೇ ವಿಧವಾದ ವಂಚನೆ, ವಿಘಾತಕತನಗಳಿಗೆ ಅವಕಾಶವಿಲ್ಲದಿರುವುದರಿಂದ ಬೇಸಾಯಗಾರರು ಸರ್ವಜ್ಞನ ಮುಕ್ತ ಕಂಠದ ಪ್ರಶಂಸೆಯನ್ನು ಪಡೆದಿದ್ದಾರೆ.

ಕೋಟಿವಿದ್ಯೆಗಳಲ್ಲಿ ಮೇಟಿ ವಿದ್ಯವೆ ಮೇಲು
ಮೇಟಿಯಿಂದ ರಾಟಿ ನಡೆದುದಲ್ಲದೆ ಮೇಲು
ದಾಟವೆ ಕೆಡಗು ಸರ್ವಜ್ಞ

ಎತ್ತಿಮ್ಮೆ ಹೂಡುವದು ಉತ್ತೊಮ್ಮೆ ಹರಗುವದು
ಬಿತ್ತೊಮ್ಮೆ ಹರಗಿ ಕಳೆದೆಗೆದರಾ ಬೆಳೆಯು
ಎತ್ತಗ್ಗೆಯುದ್ದ ಸರ್ವಜ್ಞ

ಸರ್ವಜ್ಞನ ಸಮೀಕ್ಷೆ-ಚಿಂತನೆಗಳಿಗೆ ಒಂದು ಮಿತಿ ಇಲ್ಲದಿಲ್ಲ. ಅದಾವ ಅತೃಪ್ತಿ, ಆಂತರಿಕ ಒತ್ತಡ, ತೀವ್ರತರವಾದ ಆಸಕ್ತಿ ಒಂದು ಗಂಡು ಅಥವಾ ಹೆಣ್ಣನ್ನು ವ್ಯಭಿಚಾರಕ್ಕೆ ಎಳೆಯುವುದೆಂಬು

ದನ್ನರಿಯಲು ಸರ್ವಜ್ಞ ಪ್ರಯತ್ನಿಸಿದಂತಿಲ್ಲ. ಆದರೆ ಹಾದರದ ಹುಚ್ಚು ಹಿಡಿದ ವ್ಯಕ್ತಿ ತನ್ನ ಆಸೆಯನ್ನು ಈಡೇರಿಸಿಕೊಳ್ಳಲು ಬಳಸುವ ತಂತ್ರ, ಬೀಸುವ ಬಲೆಗಳನ್ನು ಸರ್ವಜ್ಞ ಚೆನ್ನಾಗಿ ಕಂಡಿದ್ದಾನೆ. ಕಣ್ಣಿಗೆ ಕಟ್ಟುವಂತೆ ಅವುಗಳನ್ನು ಖಂಡರಿಸಿದ್ದಾನೆ.

ಆಳೆಯಾಸೆ ಹೆಪ್ಪಿಂಗೆ ಮಳೆಯಾಸೆ ಸಕಲರಿಗೆ
ಬಲೆಯಾಸೆ ಮೀನು ಹಿಡಿವಂಗೆ ಹಾದರಕೆ
ಸುಳಿದಾಟದಾಸೆ ಸರ್ವಜ್ಞ.

ಶುದ್ಧ 'ಹಾಲು' ರುಚಿಸಿದ ಮನುಷ್ಯ ಹಾಲಿಗೆ ಹುಳಿ ಹಿಂಡಿ, ಅದು ಒಡೆದು ಮೊಸರಾಗುವಂತೆ ಮಾಡಿ ಸವಿಯುತ್ತಾನೆ; ಅದೇ ಮೇರೆಗೆ ಜಾರರಿಗೆ ಹಾಲಿನಂತಹ ಶುದ್ಧ ಸಾಂಸಾರಿಕ ಸುಖ ರುಚಿಸದೆ, ಪರಪುರುಷ ಅಥವಾ ಸತಿಯ ಜೊತೆಗಿನ ಸಂಪರ್ಕದ ಹುಳಿಮೊಸರಿನಂತಹ ಹಾದರ ಪ್ರಿಯವಾಗುತ್ತದೆ! ಬಾಳಿಗೆ ಅನಿವಾರ್ಯವಾದ ಮಳೆಗಾಗಿ ಸಕಲರೂ ಬಾಯಿ ಬಿಡುವಂತೆ, ಹಾದರಿಗರು ತಮ್ಮ ಒಳ-ಒತ್ತಡದ ಸಂತೃಪ್ತಿಗಾಗಿ, ಹಾದರಕ್ಕಾಗಿ ಜಾರ-ಜಾರೆಯರಿಗಾಗಿ ಪರಿತಪಿಸುತ್ತಾರೆ! ಮೀನುಗಾ ಮೀನುಗಳನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳಲು ಜಾಣತನದಿಂದ ಬಲೆ ಬೀಸುವಂತೆ ವ್ಯಭಿಚಾರಿ ತನ್ನ ಸಂಚು-ಹೊಂಚುಗಳಿಗೆ ಸಾಧನವಾಗಿ ಉದ್ದೇಶಿತ ವ್ಯಕ್ತಿಯೆದುರು ಸುಳಿದಾಡುತ್ತಾನೆ.

ವ್ಯಸನದ ದೆಸೆಯಿಂದ ಮಸಿಹೆಣ್ಣಿನೊಶವಾಗಿ
ಹುಸಿದು ಹೋಗುವಳ ಒಡನಾಡಿ, ತಾ ನುಗ್ಗು
ನುಶಿಯಾದ ಕಾಣೊ! ಸರ್ವಜ್ಞ.

ಜಾರತನದ ಸುಳಿಗೆ ಸಿಕ್ಕವನ ದುರ್ಗತಿ ಹೇಳಲಾಸಲ್ಲ! ತನ್ನ ಚಟ ತೀರಿಸಿಕೊಳ್ಳಲು ಆತ ಕಲಂಕಿತ ಸ್ತ್ರೀಯ ಕಪಿಮುಷ್ಟಿಗೆ ಸಿಕ್ಕು, ಆಕೆಯ ಸುಳ್ಳಿನ ಸೋಗಲಾಡಿತನಕ್ಕೆ ಬಲಿಯಾಗಿ ಹಾಳಾಗಿ ಹೋಗುತ್ತಾನೆ! ಇಷ್ಟಕ್ಕೇ ಕೊನೆಗೊಳ್ಳುವುದಿಲ್ಲ ಅವನ ದುರ್ವಿಪಾಕ! ಒಮ್ಮೊಮ್ಮೆ 'ಜಾರತನ'ದ ತಿರುಗುಬಾಣಕ್ಕೂ ಆತ ಬಲಿಯಾಗುವ ಪ್ರಸಂಗ ಒದಗಿ ಬರುತ್ತದೆ.

ಆಕೆಯನು ಕಂಡು ಮನೆ ಯಾಕೆಯನು ಮರೆದಿಹರೆ
ಹಾಕಿದ ಉಂಕೆ ಹರಿದಂತೆ, ಮನೆಯೊಳಿ
ದ್ದಾಕೆ ತಾ ಕೆಡುಗು ಸರ್ವಜ್ಞ.

ಇಪ್ಪವಳ ಬಿಟ್ಟು ತನ ಗೊಪ್ಪುವಳ ನೆರೆದಿಹರೆ
ಇಪ್ಪುರಿ ನುಲಿಯು ಹರಿದಂತೆ ತನ್ನನು
ಅಪ್ಪುವಳು ಕೆಡುಗು ಸರ್ವಜ್ಞ.

ಜಾರತನದ ದುಷ್ಪರಿಣಾಮಗಳನ್ನು ಸರ್ವಜ್ಞ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ.

ಜಾರತ್ವವೆಂಬುವದು ಕ್ಷೀರ ಸಕ್ಕರೆಯಂತೆ

ಊರಲ್ಲಿ ಒಬ್ಬರರಿತಿಹರೆ, ಬೇವಿನ
ಸಾರದಂತಿಹುದು ಸರ್ವಜ್ಞ.

ಹಾದರವು ಮುಚ್ಚಿದರೆ ಕಾದಾರಿದಮೃತವು
ಹೋದುದನು ಒಬ್ಬರರಿದಿಹರೆ, ಕಬ್ಬುನವ
ಕಾದು ಎಳೆದಂತೆ ಸರ್ವಜ್ಞ.

ಹಾದರವು ಯಾರ ಗಮನಕ್ಕೂ ಬಾರದ ಹಾಗೆ ಮುಂದುವರಿದರೆ, ಅದು ಕಾದಾರಿದ ಸಕ್ಕರೆ ಬೆರೆಸಿದ ಹಾಲಿನಂತೆ ಅತ್ಯಂತ ಅಪ್ಯಾಯಮಾನ. ಆದರೆ ಇದು ಎಷ್ಟು ದಿನ ಹೀಗೆ ಮುಚ್ಚುಮರೆಯಲ್ಲಿ ನಡೆಯುವುದು ಸಾಧ್ಯ? ಒಂದಿಲ್ಲೊಂದು ದಿನ ಈ ಗುಟ್ಟು ರಟ್ಟಾಗುವುದು ಖಂಡಿತ, ಹಾಗಾದ ಪಕ್ಷದಲ್ಲಿ ಜಾರರ ಪಾಲಿಗೆ ಹಾದರ ಬೇವಿನ ಸಾರ ಕುಡಿದಂತೆ ಕಷ್ಟಕರ; ಕಾಸಿದ ಕಬ್ಬುನದ ಬರೆಯಂತೆ ಹಾನಿಕರ! ಯಾವ ದೃಷ್ಟಿಯಿಂದ ನೋಡಿದರೂ ಜಾರತನದಿಂದ ಯಾವ ಸುಖ-ಸಮಾಧಾನವಿಲ್ಲವೆಂಬುದೇ ಇಲ್ಲಿಯ ಒಟ್ಟಿನ ಮಥಿತಾರ್ಥವಾಗಿದೆ.

ದೈಹಿಕವಾದ ಬೇಡಿಕೆಯನ್ನು ಮನ ಬಂದಂತೆ ಈಡೇರಿಸಿಕೊಳ್ಳುವ ಪ್ರಾಣಿ ಸಹಜ ಪ್ರಜ್ಞೆಯೇ ಆಸೆ. ಅದು ಅನಿವಾರ್ಯವಾದ ದೇಹದ ದಾಹ. ಅದು ತನ್ನ ತೃಪ್ತಿಗಾಗಿ, ಅನೇಕ ವಿಧವಾಗಿ ವ್ಯಕ್ತವಾಗುತ್ತದೆ; ಅನೇಕ ಬಗೆಯಲ್ಲಿ ಕಾರ್ಯ ಪ್ರವೃತ್ತವಾಗುತ್ತದೆ. ಇಂತಹ ಈ ಆಸೆ ವಿಶೃಂಖಲತೆಯಿಂದ ವಿಜೃಂಭಿಸಿದರೆ, ವ್ಯಕ್ತಿಗೆ ಮಾತ್ರವಲ್ಲ ಸಮಾಜಕ್ಕೂ ಅದು ಅಪಾಯಕಾರಿಯೂ ಅನರ್ಥಕಾರಿಯೂ ಆಗಿ ಪರಿಣಮಿಸುತ್ತದೆ. "ಆದ ಕಾರಣ ಸಮಾಜದ ಮಾನವರು ತಮ್ಮತಮ್ಮ ಕಾಲ- ದೇಶ-ಪರಿಸ್ಥಿತಿಗಳಿಗನುಗುಣವಾಗಿ ಅದಕ್ಕೊಂದು ಕಟ್ಟುನಿಟ್ಟು ಅಗತ್ಯವೆಂದು ಬಗೆದಿದ್ದಾರೆ; ಹಿತಕಾರಿಯಾದ ನಿಯಮವೇ ಮಾನವನನ್ನು ಪಶುತ್ವದಿಂದ ಮೇಲಕ್ಕೆತ್ತುವ ಹಾಗೂ ದೇವತ್ವದ ನೆಲೆಗೊಯ್ಯಬುಹದಾದ ಒಂದು ಸೋಪಾನವೆಂದು ಭಾವಿಸಿದ್ದಾರೆ. ಸರ್ವಜ್ಞನ ಚಿಂತನೆಯೂ ಅದನ್ನೇ ಆವಿಷ್ಕರಿಸಿದೆ".[೧೦]

ಮೆಟ್ಟಿಪ್ಪುದಾಸೆಯನು ಕಟ್ಟಿಪ್ಪುದಿಂದ್ರಿಯದ
ತೊಟ್ಟಿಪ್ಪುದುಳ್ಳ ಸಮತೆಯನು, ಶಿವಪದವು
ಮುಟ್ಟಿಪ್ಪುದಯ್ಯ ಸರ್ವಜ್ಞ.

ಬೆಣ್ಣೆ ಬೆಂಕಿಯ ನಡುವೆ ತಣ್ಣಗಿರಬಲ್ಲುದೇ?
ಹೆಣ್ಣಿರ್ದ ಮನೆಗೆ ಎಡತಾಕಿ ಶಿವಯೋಗಿ
ಮಣ್ಣುಮಸಿಯಾದ ಸರ್ವಜ್ಞ.
ಪರಸ್ತ್ರೀಯ ಗಮನದಿಂ ಪರಲೋಕದವರು ಹಾನಿ
ಸಿರಿತಗ್ಗಿ, ತಲೆಯು ತೊಲಗಿತಾ ರಾವಣಗೆ

೧೦. ಅಡಿ ಟಿಪ್ಪಣಿ ೨ರಂತೆ, ಪುಟ-೧೦೪

ನರಲೋಕದಲ್ಲಿ ಸರ್ವಜ್ಞ.

ಬಾರದ ಹೆಣ್ಣಿಂಗೆ ಹೋರುವನು ಕಡು ಹೆಡ್ಡ
ದೊರದ ಹೆಣಕೆ ನರಿ ನೆಗೆದು ಕೂಗಿ, ಬಾ
ಯಾರಿ ಸತ್ತಂತೆ ಸರ್ವಜ್ಞ.

ಗಂಡು-ಹೆಣ್ಣಿನ ಆಸೆಯಂತೇಯೇ, ಹೊನ್ನು ಅಥವಾ ಸಂಪತ್ತಿನ ಆಸೆಯೂ ಮನುಷ್ಯನನ್ನು ಬೇತಾಳದಂತೆ ಬೆನ್ನಟ್ಟಿ ಪೀಡಿಸುತ್ತದೆ. ಮಾನವನ ಬಾಳು ಬದುಕಿಗೆ, ಜೀವನ ನಿರ್ವಹಣೆಗೆ ಹೊನ್ನು ಅನಿವಾರ್ಯ ಅಗತ್ಯವೆಂಬುದೇನೋ ಸರಿ, ಆದರೆ ಅದಕ್ಕೊಂದು ಇತಿ-ಮಿತಿ ಅತ್ಯಗತ್ಯ. ಏಕೆಂದರೆ ಅದರ ಅತಿಯಾದ ವ್ಯಾಮೋಹ ಎಂಥವರ ತಲೆಯನ್ನೂ ಕೆಡಿಸುವುದುಂಟು.

ಯತಿಗಳಿಗೆ ಮತಿಗೆಡುಗು ಸತಿಯ ಸಜ್ಜನೆ ಕೆಡುಗು
ಸ್ಥಿತಿವಂತರಿದ್ದು ಭ್ರಮೆಗೊಳಗು, ಹೊನ್ನೆಂಬ
ಶ್ರುತಿಯ ಕೇಳಿದರೆ ಸರ್ವಜ್ಞ.

ಸಂಪತ್ತಿದ್ದೂ ಅದನ್ನು ಸಾರ್ಥಕವಾಗಿ ಬಳಸಿಕೊಳ್ಳದ ಧನ ಪಿಶಾಚಿಗಳೂ ಇರುವುದುಂಟು. ಅಂಥವರ ಬದುಕು ಇನ್ನೊಂದು ವಿಧವಾಗಿ ವಿಕೃತವಾದುದೇ ಆಗಿದೆ.

ಉಳ್ಳಲ್ಲಿ ಉಣಲಿಲ್ಲ ಉಳ್ಳಲ್ಲಿ ಉಡಲಿಲ್ಲ
ಉಳ್ಳಲ್ಲಿ ದಾನ ಕೊಡಲೊಲ್ಲದವನೊಡನೆ
ಕಳ್ಳಗೆ ನೃಪಗೆ ಸರ್ವಜ್ಞ.

ಉಳ್ಳವ ತನ್ನ ಜೀವನಾವಶ್ಯಕತೆಗಳಾದ ಊಟೋಪಚಾರ, ಉಡುಗೆ-ತೊಡುಗೆಗಳಿಗೆ ಬಳಸಿಕೊಳ್ಳದೆ, ದೀನದಲಿತರಿಗೆ ದಾನಮಾಡಿ ಪುಣ್ಯಗಳಿಸಿಕೊಳ್ಳದೆ, ಜಿಪುಣನಾಗಿ ಹಣ ಸಂಗ್ರಹಿಸಿಟ್ಟರೆ, ಅದರಿಂದ ಯಾವ ಪ್ರಯೋಜನವೂ ಇಲ್ಲ! ಏಕೆಂದರೆ, ಕೊನೆಯಲ್ಲಿ ಅಂಥವನ ಸಂಪತ್ತು ಅವನಿಗೇ ದಕ್ಕದೆ ಹೋಗುವ ಪರಿಸ್ಥಿತಿ ಬಂದು ಬಿಡುತ್ತದೆ. ಅದನ್ನು ಕಳ್ಳ-ಕಾಕರರು ಎತ್ತಿಹಾಕುತ್ತಾರೆ, ಇಲ್ಲವಾದರೆ ಅದು ತೆರಿಗೆಯಾಗಿಯೋ ದಂಡವಾಗಿಯೋ ಇನ್ನೇನಾದರೋ ಆಗಿಯೋ ಸರಕಾರದ ಪಾಲಾಗುತ್ತದೆ. ಆದರೆ ಹಣದ ಹುಚ್ಚು ಹಿಡಿದ ಲೋಭಿಗೆ ಅದರ ಅರಿವೇ ಇದ್ದಿರುವುದಿಲ್ಲ.

ಉಣ್ಣೆ ಕೆಚ್ಚಲೊಳಿರ್ದು ಉಣ್ಣದದು ನೊರೆವಾಲ
ಪುಣ್ಯವ ಮಾಡಿ ಉಣಲೊಲ್ಲದವನಿರವು
ಉಣ್ಣೆಗೂ ಕಷ್ಟ ಸರ್ವಜ್ಞ.

ಯಾವುದೇ ಪುಣ್ಯದ ಫಲವಾಗಿ ಕೈ ಸೇರಿದ ಸಂಪತ್ತನ್ನೂ ಅನುಭೋಗಿಸದ ದುರಾತ್ಮನ ಸ್ಥಿತಿ ಉಣ್ಣೆಗೂ ಕೀಳು-ಕ್ಷುದ್ರತರವಾಗುತ್ತದೆ. ದಾನ ಕೇಳಿ ಬಂದವರಿಗೆ ಈತ ಇಲ್ಲವೆಂದೂ ಅನ್ನುವುದಿಲ್ಲ; ಕೈಯೆತ್ತಿ ಕೊಡುವುದೂ ಇಲ್ಲ. 'ಕೊಡಲಾರದ ಕೈ ಎಂಜಲು' ಎಂಬಂತೆ ನಡೆದುಕೊಳ್ಳುತ್ತಾ ಕಾಲ

ತಳ್ಳುತ್ತಾನೆ. ಪರಿಣಾಮವಾಗಿ ಹುಸಿಯ, ಮೋಸದ ಪಾಪಕ್ಕೂ ಪಕ್ಕಾಗುತ್ತಾನೆ.

ಮಾನವನನ್ನು ಅಡ್ಡದಾರಿಗೆ ಎಳೆಯುವ ದೌರ್ಬಲ್ಯ-ದುರ್ಗುಣಗಳಲ್ಲಿ ಸುಳ್ಳುತನ-ಕಳ್ಳತನಗಳು ಮುಖ್ಯವಾಗಿವೆ. ಅದರಿಂದಾಗಿಯೇ ಅವು ಪ್ರಪಂಚದಾದ್ಯಂತ ಮಹಾ ಪಾಪಗಳೆಂದೇ ಪರಿಗಣಿತವಾಗಿವೆ. ಸರ್ವಜ್ಞನದೂ ಅದೇ ಅಭಿಪ್ರಾಯ. ಅವನ ದೃಷ್ಟಿಯಲ್ಲಿ

ಕಳ್ಳತನ ಮೋಸಗಳು ಸುಳ್ಳಿನ ಮೂಲವವು
ಕಳ್ಳ ಕೈಗಳ್ಳ ಮೈಗಳ್ಳನೊಮ್ಮೆ ತಾ
ಕೊಳ್ಳಗಾಣುವನು ಸರ್ವಜ್ಞ

ಹುಸಿಯ ಪೇಳ್ವುದರಿಂದ ಹಸಿದು ಸಾವುದು ಲೇಸು
ಹುಸಿದು ಮೆರೆಯುವನ ಬದುಕಿಂದ ಹಂದಿಯ
ಇಸಿಯು ಲೇಸೆಂದ ಸರ್ವಜ್ಞ

ಯಾವುದೋ ಒಂದು ಸ್ವಾರ್ಥ-ಪ್ರಯೋಜನಕ್ಕಾಗಿ, ಹೊಟ್ಟೆ ಹೊರೆದು ಕೊಳ್ಳುವುದಕ್ಕಾಗಿ ಸುಳ್ಳು ಹೇಳುವುದಕ್ಕಿಂತಲೂ ಹಸಿದು ಸಾಯುವುದೇ ಮೇಲು. ಹಾಗಾದಲ್ಲಿ, ದಿಟವೇ ಪುಣ್ಯದ ಪುಂಜವಾಗಿರುವುದರಿಂದಾಗಿ, ಸತ್ಯವಂತಿಕೆಯ ಪರಿಪಾಲನೆಯಾದಂತಾಗಿ ಪುಣ್ಯ ಪ್ರಾಪ್ತಿಯಾಗುವುದು. ಅದನ್ನು ಬಿಟ್ಟು ಸುಳ್ಳು ಹೇಳಿ, ಅದರ ಪರಿಣಾಮವಾಗಿ ಕ್ಷಣಿಕವಾಗಿ ಮೆರೆಯಬಹುದಾದ ಸುಳ್ಳಿಗನ ಬದುಕು, ಹಂದಿಯ ಇಸಿಯಂತೆ ನಿಕೃಷ್ಟವೂ ಹೇಯವೂ ಆಗಿ ಪರಿಣಮಿಸುತ್ತದೆ. ಅದೂ ಅಲ್ಲದೆ ಸುಳ್ಳುತನದಿಂದ ಮಹತ್ತಮವಾದ ಪಾಪ ಪಾಲಿಗೆ ಬರುತ್ತದೆ. ಹೀಗಿರುವುದರಿಂದಲೇ ಸರ್ವಜ್ಞ ಸುಳ್ಳುಗಾರನ ವ್ಯವಹಾರವೇ ಸಲ್ಲದೆಂಬುತ್ತಾನೆ.

ಅಹಂಕಾರವೆಂದರೆ 'ನಾನು' ಎನ್ನುವ ಹೆಮ್ಮೆ, ನಾನೇ ಮಿಗಿಲೆಂಬ ಸೊಕ್ಕು. ಮನುಷ್ಯನಿಗೆ ಆವರಿಸಲು ದೇಹಬಲ, ಧನಬಲ, ವಿದ್ಯಾಬಲ, ಅಧಿಕಾರ ಬಲಗಳಲ್ಲಿ ಯಾವುದಾದರೊಂದೋ, ಹಲವೋ ಕಾರಣವಾಗಿರುತ್ತವೆ. ಆದ್ದರಿಂದ ಅಹಂಕಾರವೆಂಬುದು ಒಂದು ದೃಷ್ಟಿಯಲ್ಲಿ ಎಂಥವರ ತಲೆಯನ್ನೂ ತಿರುಗಿಸಬಲ್ಲ ಅಮಲು ಇದ್ದಂತೆ. ಇದರಿಂದಾಗಿಯೇ ಮನುಷ್ಯ ಮದಾಂಧ ಗಜದಂತೆ ವರ್ತಿಸುತ್ತಾನೆ, ಮೆರೆಯುತ್ತಾನೆ, ಉರಿದಾಡುತ್ತಾನೆ,

ಅಂಧಕನು ನಿಂದಿರಲು ಮುಂದೆ ಬಪ್ಪರ ಕಾಣ
ಬಂದರೆ ಬಾಯೆನದಿರ್ಪ ಗರುವಿಯ
ದಂದುಗವೆ ಬೇಡ ಸರ್ವಜ್ಞ

ಈ ಗರ್ವೋದ್ಧತ ಕುರುಡನಿಗೂ ಕುರುಡಾಗಿ ವರ್ತಿಸುತ್ತಾನೆ. ಬದವರನ್ನು ಬಾ ಎಂದು ಕರೆಯುವ ಸೌಜನ್ಯವನ್ನು ಪ್ರಕಟಿಸುವ ಸಜ್ಜನಿಕೆಯು ಇವನಲ್ಲಿರುವುದಿಲ್ಲ. ಅಂತಹ ಅಹಂಕಾರ, ಉನ್ಮತ್ತ ವಿಕಾರ. ಆದರದು ಬಹುದಿನದ, ಕೊನೆ ಬಾಳುವ ಸರಕಲ್ಲ, ಒಮ್ಮಿಲ್ಲೊಮ್ಮೆ ಆತ

ಉದ್ದುರುಟು ಮಾತಾಡಿ ಇದ್ದುದನು ಹೋಗಾಡಿ
ಉದ್ದನ ಮರದ ತುದಿಗೇರಿ ತಲೆಯೂರಿ
ಬಿದ್ದು ಸತ್ತಂತೆ ಸರ್ವಜ್ಞ.

ಹಾಳಾಗಿ ಹೋಗುವುದು ಖಚಿತ.

ಯಾವುದಾದರೊಂದು ಮಾನಸಿಂಕ ವ್ಯಥೆಯ, ವ್ಯಗ್ರತೆಯ ಮರೆವಿಗಾಗಿಯೋ ಬೇಸರದ ಪರಿಹಾರಕ್ಕಾಗಿಯೇ ಮೋಜಿಗಾಗಿಯೋ ಸಹವಾಸದ ಸುಖಕ್ಕಾಗಿಯೇ ಸಾಮಾನ್ಯವಾಗಿ ಮನುಷ್ಯ ಒಂದಿಲ್ಲೊಂದು ವ್ಯಸನಕ್ಕೆ ಶರಣು ಹೋಗುತ್ತಾನೆ. ಸರ್ವಜ್ಞ ಕೆಲವು ವ್ಯಸನಾಧೀನರ ಚಿತ್ರಗಳನ್ನು ಹೀಗೆ ಕಂಡರಸಿದ್ದಾನೆ.

ಭಂಗಿಯನು ಸೇದುವನ ಭಂಗವನು ಏನೆಂಬೆ
ಭಂಗಿಯ ಗುಂಗು ತಲೆಗೇರಲಾಡುತಿಹ
ಮಂಗನಂತಿಹನು ಸರ್ವಜ್ಞ.

ಸಿಂದಿಯನು ಸೇವಿಪನು ಹಂದಿಯಂತಿರುತಿಹನು
ಹಂದಿಯೊಂದೆಡೆಗೆ ಉಪಕಾರಿ, ಕುಡಿಕನು
ಹಂದಿಗೂ ಕಷ್ಟ ಸರ್ವಜ್ಞ.

ಹೆಂಡವನು ಕುಡಿಕುಡಿದು ಕಂಡವರ ತಾ ಜರಿದು
ಬಂಡುನುಡಿಗಳಿಗೆ ನಾಚದ ನೀಚನ
ಕಂಡಿಹರೆ ತೊಲಗು ಸರ್ವಜ್ಞ.

ಇಲ್ಲಿಯ ಮಂಗನ ಪ್ರತಿಮೆ ಭಂಗಿ ಸೇದುವವನ ಬೇಜವಾಬ್ದಾರಿತನದ ಬಡಬಡಿಕೆಯನ್ನು ಕಣ್ಣಿಗೆ ಕಟ್ಟಿದರೆ, ಹಂದಿಯ ಪ್ರತಿಮೆ ಸಿಂದಿ ಕುಡಿಯುವವನ ಹೊಲಸು ತನವನ್ನೂ ಕ್ಷುದ್ರತೆಯನ್ನೂ ಮನಸ್ಸಿಗೆ ತಟ್ಟಿಸುತ್ತದೆ. 'ಹಂದಿಯೊಂದೆಡೆಗೆ ಉಪಕಾರಿ' ಎಂಬ ಮಾತಿನಲ್ಲಿಯ ಧ್ವನಿ ವೈಪರೀತ್ಯವಂತೂ ಮರ್ಮಭೇದಕವಾಗಿದೆ. ಹೆಂಡ ಕುಡುಕನ ಭಂಡತನದ ಚಿತ್ರವಂತೂ ಎದ್ದು ಬರುವಂತೆ ಜೀವಂತವಾಗಿದೆ! ಇಲ್ಲಿಯ ವ್ಯಕ್ತಿಗಳೆಲ್ಲ ಒಂದೊಂದು ವ್ಯಸನಕ್ಕೆ ಮಾತ್ರ ಒಳಗಾದವರಾಗಿದ್ದಾರೆ. ಕೆಲವರು ಒಂದರಿಂದ, ಇನ್ನೊಂದು ದುರ್ವ್ಯಸನವನ್ನೂ ಅಂಟಿಸಿಕೊಂಡು, ಹಾಳಾಗಿ ಹೋಗುವುದುಂಟು.

ಮಧ್ಯಪಾನವ ಮಾಡಿ ಇದ್ದುದೆಲ್ಲವ ನೀಗಿ
ಬಿದ್ದು ಬರುವವನ ಸದ್ದಡಗಿ, ಸಂತಾನ
ವೆದ್ದು ಹೋಗುವದು ಸರ್ವಜ್ಞ.

ವ್ಯಸನದಲಿ ದೇಹವು ಮಸಣವನು ಕಾಣುವುದು
ವ್ಯಸನವನು ಬಿಟ್ಟು ಹಸನಾಗಿ ದುಡಿದರೆ
ಅಶನ ವಸನಗಳು ಸರ್ವಜ್ಞ

ಒಟ್ಟಾರೆ, ಆರೋಗ್ಯದ ದೃಷ್ಟಿಯಿಂದ ಹಿತಕಾರಿಯಾದ ವೀಳೆಯದ ಸೇವನೆ, ನೀರಾಪಾನದಂಥ ವ್ಯಸನಗಳು ಸ್ವಾಗತಾರ್ಹವಾದರೂ ನಮ್ಮ ವಿವೇಕಕ್ಕೆ ಮಾರಕವಾಗಿ ಪರಿಣಮಿಸಿ ನಮ್ಮ ತನು-ಮನ-ಧನಗಳಿಗೆ ಹಾನಿಯನ್ನುಂಟು ಮಾಡುವ ವ್ಯಸನಗಳು ಸಲ್ಲವು ಎಂಬ ನೀತಿಯ ಪರಿಮಳ ಇಲ್ಲೆಲ್ಲಾ ತೀಡಿದೆ.

ವೈರಾಗ್ಯದ ವ್ರತ ಎಂದರೆ ಮಾನವ ತನ್ನಲ್ಲಿ ಸಹಜವಾಗಿ ಜನ್ಮಜಾತವಾಗಿ ಕಾಣಿಸಿಕೊಳ್ಳುವ ರಕ್ತಿ-ಆಸಕ್ತಿಗಳಿಂದ ತನ್ನನ್ನು ತಾನು ಬಿಡಿಸಿಕೊಂಡು, ದೈವಿಕ ಚಿಂತನೆಯಲ್ಲಿ ತೊಡಗಿ ಆತ್ಮೋನ್ನತಿಯನ್ನು ಸಾಧಿಸಲು ಪರಿಶ್ರಮಿಸುವುದು. ಇದು ಹಿಮ್ಮುಖವಾಗಿ ಕೃತಿಗೆ ಇಳಿಯುವುದುಂಟು. ಬಹಿರಂಗದ ಆಚರಣೆ ಒಂದು ಬಗೆಯಾದರೆ ಅಂತರಂಗದ ಶೋಧನೆ ಇನ್ನೊಂದು ಆಚರಣೆ ಈ ಎರಡೂ ಅಷ್ಟೇ ಪ್ರಧಾನವಾದವುಗಳಲ್ಲ. ಅವುಗಳಲ್ಲಿ ತರತಮ ಭಾವವಿದೆ. ಬಹಿರಂಗದ ಆಚರಣೆಯ ಅಂಗವಾಗಿ ನಡೆಯಿಸುವ ಕ್ರಿಯೆಗಳೆಲ್ಲ ಅಗತ್ಯ ಆವರಣ ಸೃಷ್ಟಿಗೆ ಪೋಷಕವಾದ ಔಪಚಾರಿಕ ಸಾಧನ ಮಾತ್ರ ಆಗಿವೆ, ಅಂತರಂಗದ ಶೋಧನೆಯಂತೆ ಅನಿವಾರ್ಯವಾದವುಗಳಲ್ಲಿ ಎಂಬುದು ಸರ್ವಜ್ಞನ ನಿಲುವು.

ಓದಿ ಬೂದಿಯ ಪೂಸಿ, ತೇದು, ಕಾವಿಯ ಹೊದೆದು
ಹೋದಾತ ಯೋಗಿಯೆನೆಬೇಡ, ಇಂದ್ರಿಯವ
ಕಾದಾತ ಯೋಗಿ ಸರ್ವಜ್ಞ

ತಿಳಿಯ ಕಾಸಿದತುಪ್ಪ ವಳಿದು ಹಾಲಪ್ಪುದೆ?
ಕಳೆಬೆಳಗನರಿಯದ ಜ್ಞಾನಿ ಸಂಸಾರವನು
ಮತ್ತೆ ಹೊದ್ದುವನೇ? ಸರ್ವಜ್ಞ

ಹಾಲಿನಂತಹ ಮಾನವನೊಬ್ಬ ಸಂಸಾರದ ಮಾರ್ಗವಾಗಿ ಹಾದು ಸನ್ಯಾಸಿಯಾಗಿ ಮಾರ್ಪಟ್ಟು, ಮುಂದೆ ಉಗ್ರ ತಪಸ್ಸಿನ ಪರಿತಾಪಕ್ಕೆ ಒಳಗಾಗಿ ಶಿವಜ್ಞಾನಿಯಾಗಬಲ್ಲ ಸಾಧನ ಮಾರ್ಗದ ಶಕ್ತಿಪೂರ್ಣ ಚಿತ್ರಣ ಇಲ್ಲಿ ಹೆಪ್ಪುಗಟ್ಟಿ ನಿಂತಿದೆ.

ಅಂತಿರ್ದ ಇಂತಿರ್ದ ಎಂತಿರ್ದನೆನಬೇಡ
ಕಂತೆಯನು ಹೊದ್ದು ತಿರಿದುಂಬ ಶಿವಯೋಗಿ
ಎಂತಿರ್ದಡೇನು? ಸರ್ವಜ್ಞ

ಅಂತ್ಯ ಜಾತಿಯೊಳಿರ್ಪ ಮುಂತೆ ತೀರ್ಥದೊಳಿರ್ಪ
ದಂತಿಯೋರಿರ್ಪ ತಿಂದುಂಬ ಶಿವಯೋಗಿ
ಎಂತಿರ್ದಡೇನು ಸರ್ವಜ್ಞ.

ಹಾಲುಂಬು ಹಂಸವನು ಹೋಲಬಲ್ಲದೆ ಯೋಗಿ
ಮೇಲಣ ಪದವನರಿಯದಿರೆ, ಗಿಳಿಯೋದಿ
ಕಾಳುಗೆಟ್ಟಂತೆ ಸರ್ವಜ್ಞ.

ಜ್ಞಾನಿ ಸಂಸಾರದೊಳು ತಾಳಿರಲು ತಿಳಿದಿಹನು
ಭಾನು ಮೋಡದಲಿ ಹೊಳೆವಂತೆ, ಇಹಪರದಿ
ತಾನು ಬೆಳಗಿಹನು ಸರ್ವಜ್ಞ.

ವೈರಾಗ್ಯದ ವ್ರತಕ್ಕೆ ಪ್ರತಿಯಾದ ಋತುವೆನ್ನಿಸಿದ ಸಂಸಾರ ಪಥದ ಕುರಿತ ಸರ್ವಜ್ಞನ ಚಿಂತ-ಮಂಥನ ಹೆಚ್ಚು ಮಹತ್ವದ್ದೂ ಇಂದಿಗೂ ಹೆಚ್ಚು ಸಂಗತವಾದುದೂ ಆಗಿದೆ. ಏಕೆಂದರೆ ಅದು ಬಹುಸಂಖ್ಯಾ ಜನರ ಬಾಳು-ಬದುಕಿನ, ಜೀವ-ಜೀವಾಳಕ್ಕೆ ಸಂಬಂಧಿಸಿದುದೇ ಆಗಿದೆ. ಸ್ವತಃ ವಿರಾಗಿಯಾಗಿ ಬದುಕಿರಬಹುದಾದ ಸರ್ವಜ್ಞ ಇತರ ವಿರಕ್ತರಂತೆ ವೈರಾಗ್ಯಕ್ಕೆ ಅವಾಸ್ತವ ಒತ್ತುಕೊಟ್ಟು, ಸಾಂಸಾರಿಕ ಜೀವನ ಕಡೆಗಣಿಸಿ ಖಂಡಿಸುವಂತಹ ಕುರುಡುತನಕ್ಕೆ ಒಳಗಾಗದಿದ್ದುದ ಆತನ ಸಮತೂಕದ ನಿಲುವಿಗೆ, ಬದುಕಿನ ನಿಷ್ಠೆಗೆ ನಿದರ್ಶವಾಗಿದೆ. ವೈರಾಗ್ಯದ ಬದುಕು ಎಲ್ಲರಿಗೂ ಹೇಳಿ ಮಾಡಿಸಿದಂಥದಾಗಲಿ, ನಿಲುಕುವಂತದಾಗಲಿ ಅಲ್ಲ, ಒಂದು ವೇಳೆ ನಿಲುಕಿದರೂ ಅದನ್ನು ವಿಸ್ತರಿಸುವುದು ಸುಲಭಸಾಧ್ಯವಾದುದಂತೂ ಅಲ್ಲವೇ ಅಲ್ಲ. ಇಂತಹ ಆರೋಗ್ಯಕರವಾದ ನಿಲುವನ್ನು ಸರ್ವಜ್ಞ ತಾಳಿದ. ಬದುಕಿನ ಸರ್ವಗ್ರಾಹಿಯೂ ವಸ್ತುನಿಷ್ಠವೂ ಆದ ನಿರೀಕ್ಷಣೆಯ ಫಲವಾಗಿಯೇ ಆತನಿಗೆ ಅದು ಸಾಧ್ಯವಾಗಿದ್ದಿತು.

ಆಡೆಯ ಕಟ್ಟಲು ಬಹುದು ಕಡವಸವನುಡಬಹುದು
ಬಿಡದೆ ದೇಗುಲದೊಳಿರಬಹುದು ಕರಣಗಳ
ತಡೆವುದೇ ಕಷ್ಟ ಸರ್ವಜ್ಞ.

ಅಡವಿಯನ್ನು ಹೊಗಬಹುದು ಮಡದಿಯನು ಬಿಡಬಹುದು
ಬಿಡದೆ ಧ್ಯಾನದೊಳಿರಬಹುದು ವಾಸನೆಯ
ಕೊಡಹಲಳಬಲ್ಲ ಸರ್ವಜ್ಞ.

ಎಂಬುದಾಗಿ ಭಾವವೇಶಕ್ಕೆ ಒಳಗಾಗಿಯೂ ಯಾವುದೋ ಒಂದು ಆದರ್ಶದ ಬೆನ್ನು ಹತ್ತಿಯೋ ಸಂಸಾರವನ್ನು ತ್ಯಜಿಸಿ ಸನ್ಯಾಸವನ್ನು ಸ್ವೀಕರಿಸಿಯೂ ಸಂಸಾರದ ನೂರೆಂಟು ಎಳೆತ-

ಸೆಳೆತಗಳಿಗೆ ಬಲಿ ಬಿದ್ದು ಒದ್ದಾಡುವ ದುರ್ಬಲರನ್ನು ಡೋಂಗಿಗಳಾಗಿ ಮೆರೆಯುವವರನ್ನು ಕುರಿತು ಆತ ಹೇಳಿದ್ದಾನೆ.

ಆಧ್ಯಾತ್ಮವಾದಿಗಳು ಹೆಣ್ಣು-ಹೊನ್ನು-ಮಣ್ಣು ಈ ಮೂರರ ಹಿಡಿತದಿಂದ ದೂರವಿರಬೇಕೆಂದು ಅದರಿಂದಲೇ ಆತ್ಮೋನ್ನತಿ ಸಾಧ್ಯವೆಂದು ಹೇಳುತ್ತಲೇ ಬಂದಿದ್ದಾರೆ. ಸರ್ವಜ್ಞನ ಚಿಂತನೆಯೂ ಇದೇ ದಾರಿಯನ್ನು ತುಳಿದಿರುವಂತೆ ಭಾಸವಾಗುತ್ತದೆ.

ಹೆಣ್ಣಿನ ಹೊನ್ನಿನ ಮಣ್ಣಿನ ಬಲೆಯನ್ನು
ಹಣ್ಣೆಸಿ ಜಗವನದರೊಳು ಹಿಡಿದು ಮು
ಕ್ಕಣ್ಣನ ನೋಡ ಸರ್ವಜ್ಞ

ಹೆಣ್ಣು, ಹೊನ್ನು, ಮಣ್ಣು ಈ ಮೂರರ ಮುಪ್ಪುರಿಯಿಂದ ಶಿವನು ಪ್ರಪಂಚವನ್ನೇ ಬಂಧಿಸಿದ್ದಾನೆಂಬುದು ಇಲ್ಲಿಯ ಮುಖ್ಯ ಆಶಯ. ಈ ಮೂರೂ ಪ್ರಪಂಚಕ್ಕೆ ಅರ್ಥಾತ್ ಮಾನವ ಜೀವಿಗಳಿಗೆ ಅನಿವಾರ್ಯ ಅಗತ್ಯಗಳು, ಮಾತ್ರವಲ್ಲ ಆಕರ್ಷಣೆಗಳೂ ಆಗಿವೆ ಎಂಬುದೂ ಇದರಿಂದ ವ್ಯಂಜಿತವಾಗುತ್ತದೆ.

ಮಣ್ಣು ಎಂಬುದು ಮೂಲತಃ ಮಿತವಾದ ಅರ್ಥದಲ್ಲಿ ಭೂಮಿ-ನೆಲ-ಹೊಲ ಎಂದಾದರೆ ವಿಶಾಲ ಅರ್ಥದಲ್ಲಿ ರಾಜ್ಯವೆಂಬುದಾಗಿದೆ. ಏನಿದ್ದರೂ ಈ ಎರಡೂ ಬಗೆಯ ಮಣ್ಣು ಹೊನ್ನಿನ ಹಾಗೆ ಸಂಪತ್ತಿನ ಬಳಕೆಗೆ ಹಾಗೂ ಆ ಮೂಲಕ ಬದುಕಿನ ಭೋಗ ಮತ್ತು ಅಧಿಕಾರದ ಚಲಾವಣೆಗಳಿಗೆ ಪ್ರಮುಖ ಸಾಧನವಾಗಿವೆ. ಈ ಕಾರಣದಿಂದಲೇ ಮಣ್ಣು ಮತ್ತು ಹೊನ್ನುಗಳು ಒಂದೇ ನಾಣ್ಯದ ಎರಡು ಮುಖಗಳಾಗಿವೆ ಎನ್ನಬಹುದು. ಹೊನ್ನಿನ ಬಲ ಲೌಕಿಕದ ಬದುಕಿಗೆ ಮೂಲಭೂತವೂ, ಶಕ್ತಿಶಾಲಿಯೂ ಆದ ಬಲವಾಗಿರುವುದು ಸರ್ವ ವೇದ್ಯ. ಅನೇಕ ಬಾರಿ ಅದರಿಂದಾಗಿಯೇ ಲೋಕ ವ್ಯವಹಾರದಲ್ಲಿ ಮಮತೆ, ಮನ್ನಣೆ ದೊರೆಯುತ್ತದೆ. ಪ್ರತಿಷ್ಠೆ ಪರಾಕು ಹಾಕುತ್ತವೆ.

ಮಡದಿ ಮಕ್ಕಳ ಮಮತೆ ಒಡಲೊಡವೆಯಿರುವನಕ
ಒಡಲೊಡವೆ ಕೆಡೆದ ಮರುದಿನವೆ ಅವರೆಲ್ಲ
ಕಡೆಗೆ ಸಾರಿಹರು ಸರ್ವಜ್ಞ

ಬಗೆಬಗೆಯ ಭೋಗವಿರೆ ನಗುತಿಹರು ಸತಿಸುತರು
ನಗೆ ಹೋಗಿ ಹೊಗೆಯು ಬರಲವರು, ಅಡವಿಯಲಿ
ಒಗೆದು ಬರುತಿಹರು ಸರ್ವಜ್ಞ

ಧನಕನಕವುಳ್ಳನಕ ದಿನಕರನವೋಲಕ್ಕು
ಧನಕನಕ ಹೋದ ಮರುದಿನ ಹಾಳೂರ

ಶುನಕನಂತಕ್ಕು ಸರ್ವಜ್ಞ

ಮಡದಿ ಮಕ್ಕಳಂತಹ ರಕ್ತ ಸಂಬಂಧಿಗಳ ಪ್ರೀತಿ-ಮಮತೆಯೂ ಕೂಡ ಸುಖ ಭೋಗದ ಸಾಧನವಾದ ಒಢವೆ ಅಥವಾ ಸಂಪತ್ತನ್ನು ಅವಲಂಬಿಸಿರುತ್ತದೆ ಎಂಬ ಮಾತು ಕಹಿಯಾದರೂ ಅನೇಕ ಕಡೆ ಕಂಡು ಬರುವ ಸತ್ಯ.

ಮಾನವ ಸದಾ ತನ್ನ ಪರಿಸರದ ದುರ್ಜನರ ಬಗೆಗೆ ಎಚ್ಚರಿಕೆ ವಹಿಸಲೇಬೇಕು. ಸಜ್ಜನರ ಸಂಗತಿಯ ಫಲ ಎಂಥದೆಂಬುರನ್ನು ಮನಸ್ಸಿನಲ್ಲಿ ಹಸಿರಾಗಿ ಇರಿಸಿಕೊಂಡು, ತನ್ನ ಬದುಕಿನ ಒಳಿತನ್ನು ತಾನು ಸಾಧಿಸಬೇಕು. ಈ ಕುರಿತು ಸರ್ವಜ್ಞನ ಅನುಭವ ಮನವೀಯವಾಗಿದೆ.

ಸಜ್ಜನರ ಸಂಗವದು ಹೆಜ್ಜೇನು ಕೊಡದಂತೆ
ದುರ್ಜನರ ಸಂಗದೊಡನಾಟ, ಬಚ್ಚಲಿನ
ರೊಚ್ಚಿನಂತಿಹುದು ಸರ್ವಜ್ಞ

ಕುದಿಯದ ಕೂಳಿಂದ ಹದುಳದಂಬಲಿ ಲೇಸು
ಹೃದಯಶೂನ್ಯರುಗಳೊಲವಿಂದ ಅರಿದರಲಿ
ಕದನವೆ ಲೇಸು ಸರ್ವಜ್ಞ

ಮನುಷ್ಯನ ಸಾಮಾನ್ಯ ವ್ಯವಹಾರಗಳ ಕಡೆ ಗಮನ ಹರಿಸಿದ ಸರ್ವಜ್ಞ ರಾಜಕೀಯ ವ್ಯವಹಾರಗಳ ಕಡೆಗೂ ಚಿಂತನೆ ನಡೆಸಿದ್ದಾನೆ. ರಾಜ್ಯವೊಂದರ ಅಧಿಕಾರ ಸೂತ್ರಗಳನ್ನೆಲ್ಲ ಕೈವಶವಾಗಿಸಿಕೊಂಡು, ಅದನ್ನು ತೂಗಿಸಿಕೊಂಡು ಹೋಗುವಂತಹ ಸರ್ವ ಜವಾಬ್ದಾರಿ ಹೊತ್ತ ರಾಜನೊಬ್ಬನ ಅಗತ್ಯ ಅಂದು ಅನಿವಾರ್ಯವಾಗಿತ್ತು. ರಾಜನೇ ಇಲ್ಲದ ಒಂದು ರಾಜ್ಯ, ಅರಾಜಕತೆಗೆ ಈಡಾಗದೇ ಬದುಕಿ ಬಾಳುವುದು ಸಾಧ್ಯವೆಂಬ ಕಲ್ಪನೆಯೇ ಅಂದು ಊಹಿಸಲು ಅಸಾಧ್ಯವಾಗಿತ್ತು.

ಗುರುವು ಇಲ್ಲದ ಮಠವು ಹಿರಿಯರಿಲ್ಲದ ಮನೆಯು
ಅರಸಿಲ್ಲದೂರು ಇವು ಮೂರು, ನುಲಿಹರಿದ
ಹೊರಸಿನಂತಕ್ಕು ಸರ್ವಜ್ಞ

ನಾಡೆಂಬ ದೇಹಕ್ಕೆ ರೂಢಿಪತಿಯೇ ಪ್ರಾಣ
ನಾಡಳಿಯೆ ರೂಢಿಪತಿ ಕೆಡಗು, ಅರಸಳಿಯೆ
ನಾಡೆಲ್ಲ ಕೆಡಗು ಸರ್ವಜ್ಞ

ಅರಸನಿಲ್ಲದ ಊರು ಅರಾಜಕತೆಗೆ ಈಡಾಗದಿರದು ಎಂಬ ಆಶಯದ ಆವಿಷ್ಕಾರಕ್ಕಾಗಿ ಸರ್ವಜ್ಞ ಬಳಸಿರುವ ದೃಷ್ಟಾಂತಗಳು ಒಂದೊಂದೂ ಅರ್ಥಪೂರ್ಣವಾಗಿವೆ. ಮಠದ ಗುರು ಹಾಗೂ ಮನೆಯ ಹಿರಿಯರ ದೃಷ್ಟಾಂತಗಳು ವಿವೇಕಯುತ ಮಾರ್ಗದರ್ಶನ ಹಾಗೂ ಮಠ-

ಮನೆಯಂಥ ಸಂಸ್ಥೆಗಳನ್ನು ತೂಗಿಸಿಕೊಂಡು ಹೋಗುವ ಜಾಣತನವನ್ನು ಧ್ವನಿಸುತ, ಅರಸನ ಕರ್ತವ್ಯ ಕರ್ಮಗಳನ್ನು ಬೆಳಗಬಲ್ಲ ಸತ್ವವನ್ನೊಳಗೊಂಡಿದೆ. ರಾಜನಾದವನು ಈ ಗುರಿಯನ್ನು ಸಾಧಿಸಬೇಕಿದ್ದಲ್ಲಿ, ಯಾವ ಗುಣಾದರ್ಶಗಳನ್ನು ಅಳವಡಿಸಿಕೊಂಡವನಾಗಿರಬೇಕೆಂಬುದೂ ಜಿಜ್ಞಾಸೆಯ ವಿಷಯವೇ ಆಗಿದೆ.

ಪರನಾರಿ ಸೋದರನು ವರಶತ್ರುದಲ್ಲಣನು
ಕರ ಪಾಪ ಭಯವ ಹೊರೆವ, ಗುಣಿಯಹ ನೃಪಗೆ
ಸ್ಥಿರ ವಿಹಳು ಲಕ್ಷ್ಮಿ ಸರ್ವಜ್ಞ

ಬಂಡಾರ ತುಂಬಿ ನೀ ಬಂಡಿಯಲಿ ಹೇರುವರೆ
ಮಂಡಲವನಾಳಿ ಮರೆಯುವರೆ, ಒಕ್ಕಲನು
ಕೊಂಡಾಡಬೇಕು ಸರ್ವಜ್ಞ

ಒಕ್ಕಲನು ನಲುಗಿಸದೆ ಲೆಕ್ಕವನು ಸಿಕ್ಕಿಸದೆ
ಕಕ್ಕುಲತೆಯಿಂದ ನಡೆಯಿಸುವ ಅರಸು ತಾ
ಚಿಕ್ಕಂದವಿರುವ ಸರ್ವಜ್ಞ

ರಾಜ್ಯದ ಹಿತವನ್ನು ರಕ್ಷಿಸುವ ಬಗೆಯಲ್ಲಿ ಅಧಿಕಾರ ಚಲಾಯಿಸಬೇಕಾದ ಮಂತ್ರಿವರ್ಗ ಮತ್ತು ರಾಜ್ಯ ರಕ್ಷಣೆಯ ಹೊಣೆ ಹೊತ್ತ ಕಾವಲುದಳ, ಆಡಳಿತ ವರ್ಗ, ಪರಿವಾರ ಇವರು ಕೂಡ ತಮ್ಮ ಕರ್ತವ್ಯ ಪ್ರಜ್ಞೆಯನ್ನು ಬದಿಗೊತ್ತಿ, ಅರಸರ ದೌರ್ಜನ್ಯದಲ್ಲಿ ಪಾಲುಗೊಂಡು ದುರ್ನಡತೆಗಿಳಿದರೆ ಬಡಪಾಯಿ ಪ್ರಜೆಗಳಿಗೆ ದುರ್ಭರಗತಿ ಒದಗಿ, ರಾಜ್ಯದ ಬದುಕು ನರಕಪ್ರಾಯವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ.

ಅರಸು ಕೊಲುವಡೆ, ಮಂತ್ರಿ ಕರೆಸಿ ಕಷ್ಟವ ಕೊಡಲು
ಬೆರಸಿ ತಳವಾರ ಬೀಳಲ್ಕೆ, ಪರಿಹರಿಪ
ರಾರಿನ್ನು ಹೇಳು! ಸರ್ವಜ್ಞ

ಅರಸ ರಕ್ಕಸನಂತೆ ವರ ಮಂತ್ರಿ ಹುಲಿಯಂತೆ
ಬರೆವಾದ ನಾಡ ನರಿಯಂತೆ! ಪರಿವಾರ
ಗರಗಸದಂತೆ ಸರ್ವಜ್ಞ

ಅರಸರ ದೌರ್ಬಲ್ಯಗಳನ್ನೂ ಸರ್ವಜ್ಞ ಗುರುತಿಸಿದ್ದಾನೆ. ಅವನ ಅನುಭವದಲ್ಲಿ ಅರಸರು ಚಿತ್ತ ಚಾಂಚಲ್ಯಕ್ಕೆ ಹೆಸರಾದವರು. ಆದುದರಿಂದ ಅವರೊಡನೆ ವ್ಯವಹರಿಸುವಾಗ ಯಾರೇ ಆಗಲಿ

ಮೈಯೆಲ್ಲ ಕಣ್ಣಾಗಿರುವುದು ಉತ್ತಮ ಎಂಬುದು ಸರ್ವಜ್ಞನ ಅಭಿಮತ.

ಅರಸನೋಲಯಿಸುವರೆ ಕರ ಭೀತಿ ಬೇಕಯ್ಯ
ಅರಸು ಕರಿಯುರಗನೊಳೆಚ್ಚರವಿಲ್ಲದಿರೆ
ತ್ವರಿತದಿಂ ತೊಲಗು ಸರ್ವಜ್ಞ

ನಚ್ಚಿದಂತರಸಿನ ಇಚ್ಛೆಯಂತಿರುವುದದು
ಒಚ್ಚೊತ್ತು ತಪ್ಪಿ ನಡೆದಿಹರೆ, ಹೊತ್ತಾರೆ
ಕಿಚ್ಚು ಕಾದಂತೆ ಸರ್ವಜ್ಞ

ಸರ್ವಜ್ಞನ ಈ ಜೀವನಾನುಭವ ಇಂದಿನ ಹೊಸ ಪರಿಸ್ಥಿತಿಯಲ್ಲಿ ಹೊಂದುವಂತದಾಗಿದೆ. ಇಂದು ರಾಜ-ಮಹಾರಾಜರಿಲ್ಲದಿದ್ದರೂ ಸರ್ಕಾರಿ ಕಛಏರಿ, ಇನ್ನಿತರ ಸಂಘ ಸಂಸ್ಥೆಗಳಲ್ಲಿಯೂ ಅಧಿಕಾರಿ ವರ್ಗದ ಕಾರುಬಾರು ದರಬಾರುಗಳು ಹಿಂದಿನ ಅರಸರ ಆಡಳಿತ ಅಂಧ ಆಡಳಿತವನ್ನೇ ಅಂಧಾನುಕರಿಸುತ್ತಲಿವೆ.

ಕನ್ನಡ ಸಂಸ್ಕೃತಿಯ ಕಾಲವಾಹಿನಿಯಲ್ಲಿ ತೇಲಿ ಬಂದ ಜೀವನ ಮೌಲ್ಯಗಳನ್ನು, ಸಮಕಾಲೀನ ಸಮಾಜದ ಸೃಜನಶೀಲ ಸಮೀಕ್ಷಕನಾಗಿ ಪರಿಶೀಲಿಸಿ ಪರಿಶೋಧಿಸುವ ಒಂದು ಪ್ರಾಮಾಣಿಕ ಪ್ರಯತ್ನವನ್ನು ಸರ್ವಜ್ಞ ನಡೆಸಿದ್ದಾನೆ. ಸಮಾಜದ ವಿವಿಧ ಮತ-ವರ್ಗಗಳ ವಿಚಾರ ಪ್ರಣಾಲಿ, ಆಚಾರದ ಅಸಂಗತಿಗಳನ್ನು ತಾನು ಬದುಕಿದ ಐತಿಹಾಸಿಕ ಸಂದರ್ಭಕ್ಕೆ ಅನುಗುಣವಾಗಿ ಆಳವಾಗಿ ಬಗೆದು, ಅಳೆದು ತೂಗಿ ಮೌಲ್ಯಗಳ ಕುರಿತ ತನ್ನ ಮೌಲಿಕ ಚಿಂತನೆಯನ್ನು ಸರ್ವಜ್ಞ ತನ್ನ ವಚನಗಳಲ್ಲಿ ಹರಳು ಗಟ್ಟಿಸಿದ್ದಾನೆ.

ಅಧ್ಯಾಯ - ೫

ಬಸವಣ್ಣ ಮತ್ತು ಸರ್ವಜ್ಞರ ವಚನಗಳ ತೌಲನಿಕ ವಿವೇಚನೆ

ಸಾಮಾಜಿಕ ಕಳಕಳಿ ಎಂಬುದು ದಾರ್ಶನಿಕರು, ಜ್ಞಾನಿಗಳು, ಚಿಂತಕರು ಬೆಳೆಸಿಕೊಂಡು ಬಂದ ಒಂದು ಆಲೋಚನಾ ಕ್ರಮ. ಸಮಾಜದಲ್ಲಿನ ಹಲವಾರು ಲೋಪದೋಷಗಳನ್ನು ಗುರ್ತಿಸಿ ಅದನ್ನು ತಿದ್ದುವ ಕೆಲಸ ಹಿಂದಿನಿಂದಲೂ ಮಾಡಿರುವುದು ಅವರ ಚಿಂತನೆಗಳಲ್ಲಿ ಗೋಚರಿಸುತ್ತದೆ. ಹಾಗೆಯೇ ಬಸವಣ್ಣ ಹಾಗೂ ಸರ್ವಜ್ಞರ ವಚನಗಳಲ್ಲಿ ಸಾಮಾಜಿಕ ಕಳಕಳಿಯ ದರ್ಶನವನ್ನು ಬಿಂಬಿಸುವ ಹಲವಾರು ವಚನಗಳನ್ನು ನಾವು ಕಾಣಬಹುದು. ವಿಶೇಷವಾಗಿ ಈ ಇಬ್ಬರಲ್ಲೂ ಸಾಮಾಜಿಕ ಸಾಮಾಜಿಕ ಕಳಕಳಿಯ ಅಂಶಗಳು ಹಲವಾರು ಸ್ಥರಗಳಲ್ಲಿ ಒಂದೇ ರೀತಿ ಅಭಿವ್ಯಕ್ತಗೊಂಡಿರುವುದನ್ನು ಅವರ ವಚನಗಳನ್ನು ಅಧ್ಯಯನಕ್ಕೊಳಪಡಿಸಿದಾಗ ತಿಳಿಯುತ್ತದೆ. ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಕಳಕಳಿಯ ಅಂಶಗಳು ಸಾತ್ವಿಕವಾಗಿ ಮೂಡಿ ಬಂದರೆ ಅವು ಸರ್ವಜ್ಞನಲ್ಲಿ ಧುಮ್ಮಿಕ್ಕುವ ಜಲಪಾತದಂತೆ ಭೋರ್ಗರೆಯುತ್ತವೆ. ಕೆಲವು ವೇಳೆ ಅವನ ಸಾಮಾಜಿಕ ಕಳಕಳಿಯ ಮಾತುಗಳು ಕಪಾಲಕ್ಕೆ ಕೊಟ್ಟಂತಿರುತ್ತವೆ. ಹಾಗೂ ಛಟೀರನೆ ಚಾಟಿಯಿಂದ ಏಟು ಹೊಡೆದಂತೆ ಬೀಳುತ್ತವೆ.

ಬಸವಣ್ಣ ಹಾಗೂ ಆ ಯುಗದ ಇತರ ವಚನಕಾರರ ಪ್ರಭಾವ ಸರ್ವಜ್ಞನ ಮೇಲೆ ತುಂಬಾ ಆಗಿದೆ. ಈ ವಿಷಯವನ್ನು ಮಾರ್ಮಿಕವಾಗಿ ವಿವರಿಸುತ್ತ ಆರ್.ಸಿ. ಹಿರೇಮಠ ಅವರು ಹೀಗೆ ಹೇಳಿದ್ದಾರೆ.

"ವಚನಕಾರರಂತೆ ಸರ್ವಜ್ಞ ವಿಚಾರವಾದಿ, ಅನುಭಾವಿ, ಸಮಾಜ ವಿಮರ್ಶಕ ಮತ್ತು ಕ್ರಾಂತಿಕಾರಕ. ಜನಸಾಮಾನ್ಯರ ಜೀವನವನ್ನು ತಿದ್ದಿ ತೀಡುವುದೇ ಅವನ ಉದ್ದೇಶವಾಗಿತ್ತು. ದಯೆ ಆತನ ಧರ್ಮವಾಯಿತು, ಕಾಯಕ ವೃತ್ತಿಯಾಯಿತು. ಸಮಾಜದಲ್ಲಿದ ಜಾತಿ ಮತಗಳ ವೈಷಮ್ಯವನ್ನು ತೊಡೆದುಹಾಕಲು, ಮೇಲು ಕೀಳೆಂಬ ಭಾವನೆಯನ್ನು ಕಿತ್ತು ಬಿಸುಟಲು ಆತನು ನಿರಂತರ ಹೋರಾಡಿದನು. ಸದಾಚಾರ ಸನ್ಮಾರ್ಗಗಳೇ ಜೀವನದ ಮೌಲ್ಯಗಳೆಂದು ಸ್ಪಷ್ಟಪಡಿಸಿದನು. ಶಿವಶರಣರ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರಗಳನ್ನು ಸರ್ವಜ್ಞನು ತನ್ನ ವಚನಗಳಲ್ಲಿ ಪ್ರತಿಪಾದಿಸಿರುವಂತೆ ಅವರ ಜೀವನ ಹಾಗೂ ಸಾಮಾಜಿಕ ಮೌಲ್ಯಗಳನ್ನು ಧಾರಾಳವಾಗಿ ಪ್ರತಿಪಾದಿಸಿದ್ದಾನೆ".[೧]

ಈ ಹಿನ್ನೆಲೆಯಲ್ಲಿ ಸರ್ವಜ್ಞನಿಗೆ ಶ್ರೇಷ್ಠ ಕಾವ್ಯ ರಚನೆಯ ಬಗ್ಗೆ ಇರುವ ಕಳಕಳಿಗಿಂತ ಸುತ್ತಲಿನ ಜನಜೀವನವನ್ನು ತಿದ್ದುವ ಉದ್ದೇಶವೇ ಪ್ರಧಾನವಾದುದಾಗಿದೆ.

ಸರ್ವಜ್ಞನ ಆಲೋಚನಾ ಪ್ರಪಂಚವನ್ನು ರೂಪಿಸಿದವರಲ್ಲಿ ಬಸವಣ್ಣ ಹಾಗೂ ವಚನಕಾರರು ಪ್ರಮುಖರು. ಬಸವಣ್ಣನವರು ಯಾವ ಹೊಸ ಮೌಲ್ಯಗಳನ್ನು ಪ್ರತಿಪಾದಿಸಿ ನೂತನ ಸಮಾಜವೊಂದರ ಕನಸನ್ನು ಕಂಡರೋ ಅದೆಲ್ಲವನ್ನು ಸರ್ವಜ್ಞನು ಒಪ್ಪಿಕೊಂಡಿದ್ದಾನೆ, ಅಪ್ಪಿಕೊಂಡಿದ್ದಾನೆ.

ವಚನಕಾರರು ಯಾವ ಧಾರ್ಮಿಕ ಸಂಪ್ರದಾಯವನ್ನು ಒಪ್ಪಿಕೊಂಡರೋ ಅದಕ್ಕೂ

೧. ವಚನ ಸಾಹಿತ್ಯ ಮತ್ತು ಸರ್ವಜ್ಞ ಕವಿ, ಕ.ವಿ.ವಿ. ಪುಟ-೩೬

ಸರ್ವಜ್ಞನಿಗೂ ಹೇಗೆ ಸಂಬಂಧ ಕಲ್ಪನೆಯಾಯಿತೆಂಬುದು ಬಹುಶಃ ಕೊನೆಯವರೆಗೂ ಅಜ್ಞಾತವಾಗಿ ಉಳಿಯುತ್ತದೆ. ಅವನು ಹುಟ್ಟಿನಿಂದ ವೀರಶೈವನಲ್ಲದಿದ್ದರೂ ಅವನ ಮನೋಭಾವಕ್ಕೆ ವಚನಕಾರರ ವೈಚಾರಿಕ ಧೋರಣೆ ಬಹಳವಾಗಿ ಹಿಡಿಸಿದಂತೆ ತೋರುತ್ತದೆ. ಅವನ ರಚನೆಗಳಲ್ಲಿ ಬರುವ ಷಟ್ಸ್ಥಲದ ಪ್ರಸ್ತಾಪ, ಇಷ್ಟಲಿಂಗ, ಜಂಗಮಗಳನ್ನು ಹೊಗಳಿರುವುದು, ಬಸವಣ್ಣನವರನ್ನು ಗೌರವದಿಂದ ಸ್ಮರಿಸುವುದು ಇತ್ಯಾದಿಗಳು ಅವನಿಗೂ ವೀರಶೈವ ಸಂಪ್ರದಾಯಕ್ಕೂ ಇದ್ದ ನಿಕಟ ಸಂಬಂಧವನ್ನು ಸೂಚಿಸುತ್ತವೆ. ಬಸವಣ್ಣನವರಂತೆ ಸರ್ವಜ್ಞನೂ ಸಮಕಾಲೀನ ಸಮಾಜದ ಮೇಲ್ಮೆಗಾಗಿ ಮಿಡಿದಿದ್ದಾನೆ. ಅದರ ವ್ಯವಸ್ಥೆಯನ್ನು ಕಂಡು ಕಟುವಾಗಿ ಟೀಕಿಸಿದ್ದಾನೆ. ಬೇರೆ ಬೇರೆ ಜಾತಿಗಳ ಬಗ್ಗೆ ಇವನಂತೆ ಹೆಸರು ಹೇಳಿ ನಿಷ್ಠುರವಾಗಿ ಖಂಡಿಸಿರುವವರು ಅಪೂರ್ವ. ಧಾರ್ಮಿಕ ಡಾಂಬಿಕತನ, ಜಾರರು, ಚೋರರು, ಮೂರ್ಖರು, ಕಪಟರು, ಜೂಜುಗಾರರು ಎಲ್ಲರೂ ಇವನ ಚಾಟಿಯೇಟಿಗೆ ಗುರಿಯಾಗಿದ್ದಾರೆ. ಎ.ಆರ್. ಕೃಷ್ಣಶಾಸ್ತ್ರಿಗಳ ಮಾತಿನಲ್ಲಿ ಹೇಳುವುದಾದರೆ "ಅವನ ಬರವಣಿಗೆ ದನದಂತೆ ನುಗ್ಗುತ್ತದೆ".[೨] ಅದರ ಜೊತೆಗೆ ಸಮಾಜದಲ್ಲಿ ಉತ್ತಮವಾದದ್ದನ್ನು ಕಂಡಾಗ ಸಂಕೋಚವಿಲ್ಲದೆ ಮೆಚ್ಚಿದ್ದಾನೆ.

ಸರ್ವಜ್ಞನ ರಚನೆಗಳ ಉದ್ದೇಶ ನೀತಿ ಬೋಧನೆ. ಅವನ ಕಣ್ಣ ಮುಂದಿದ್ದವರು ಮುಖ್ಯವಾಗಿ ಸಮಾಜದ ಕೆಳವರ್ಗದ ಜನ. ಆ ಜನರಿಗೆ ಅವರ ಭಾಷೆ ಮತ್ತು ರೀತಿಯಲ್ಲಿಯೇ ವಚನಕಾರರಿಗೆ ಸಮ್ಮತವಾದ, ತನ್ನ ಅನುಭವಕ್ಕೆ ಸರಿಯೆಂದು ತೋರುವ ನೀತಿ ವಿವೇಕವನ್ನು ಬೋಧಿಸುವುದು ಸರ್ವಜ್ಞನ ಉದ್ದೇಶ. ಈ ದೃಷ್ಟಿಯಿಂದ ಅವನು ಜನತೆಯ ಕವಿಯಾಗುತ್ತಾನೆ; ಅವನ ಕೃತಿ ನೀತಿಯ ಕಾವ್ಯವಾಗುತ್ತದೆ.

ಬಸವಣ್ಣನವರಿಗೂ ಸರ್ವಜ್ಞನಿಗೂ ಎದ್ದು ಕಾಣುವ ವ್ಯತ್ಯಾಸವೊಂದಿದೆ. ಬಸವಣ್ಣನವರ ನೀತಿ ಭೋದೆಯ ಜೊತೆ ಮತ ಸಂಬಂಧಿಯಾದ ಶಾಸ್ತ್ರ ವಿವರಣೆಯೂ ಸಾಕಷ್ಟು ಪ್ರಮಾಣದಲ್ಲಿ ಬರುತ್ತದೆ. ಏಕೆಂದರೆ ಬಸವಣ್ಣ ಮತದ ಪರಿಸರದಲ್ಲಿಯೇ ಸಾಮಾಜಿಕ ಆಂದೋಲನವನ್ನು ಮಾಡ ಹೊರಟಿದ್ದರಿಂದ ಮತ ಪ್ರಸಾರವೂ ಅವರಿಗೆ ಅನಿವಾರ್ಯವಾಗಿತ್ತು. ಸರ್ವಜ್ಞನಿಗೆ ಮತ ಪ್ರಸಾರ ಮುಖ್ಯ ಅಲ್ಲವೇ ಅಲ್ಲ.

ಬಸವಣ್ಣ, ಅಲ್ಲಮ, ಅಂಬಿಗರ ಚೌಡಯ್ಯ, ಮಹಾದೇವಿಯಕ್ಕರ ಪ್ರಭಾವ ವಲಯಗಳು ನಿಚ್ಚಳವಾಗಿ ಸರ್ವಜ್ಞನ ಮೇಲಿದೆ. ಅಲ್ಲಿನ ಭಾವ ಮತ್ತು ಉಕ್ತಿಗಳನ್ನು ತೆಗೆದುಕೊಂಡು, ಸಂಕ್ಷಿಪ್ತ ತ್ರಿಪದಿಗಳಲ್ಲಿ ಅಳವಡಿಸಿ, ಅವುಗಳಿಗೆ ಹೊಸ ಜೀವಕಳೆಯನ್ನು ತುಂಬಿದ್ದಾನೆ.

ಬಸವಣ್ಣನಂತೆಯೇ ಸರ್ವಜ್ಞನು ಅಪಾರವಾದ ಲೋಕಾನುಭವದೊಡನೆ ಜನತೆಯ ಮನಸ್ಸನ್ನು ಕೆಣಕುವ, ಕೆದಕುವ, ಹೊಡೆದೆಬ್ಬಿಸುವ ರೀತಿ ಇವನದು. ಬರವಣಿಗೆಯ ಮೂಲಕ ಮೌಢ್ಯವನ್ನು ವಿರೋಧಿಸುವ ತನ್ನ ದಾರಿಯಲ್ಲಿ ಈತ ಸಾಕಷ್ಟು ಯಶಸ್ವಿಯೂ ಆಗಿದ್ದಾನೆ.

ಬಾಹ್ಯ ವ್ರತಾಚಾರಗಳಿಗೆ ಮಾತ್ರ ಮಹತ್ವವೊದಗಿರುವುದನ್ನು ಕಂಡಾಗ ಬಸವಣ್ಣನವರು

೨. ಸರ್ವಜ್ಞ ಕವಿ, ಎ.ಆರ್.ಕೃಷ್ಣಶಾಸ್ತ್ರಿ ಪುಟ-೫೫

ನೀರ ಕಂಡಲ್ಲಿ ಮುಳುಗುವರಯ್ಯಾ,
ಮರನ ಕಂಡಲ್ಲಿ ಸುತ್ತುವರಯ್ಯಾ!
ಬತ್ತುವ ಜಲವ ಒಣಗುವ ಮರನ
ಮಚ್ಚಿದವರು ನಿಮ್ಮನೆತ್ತ ಬಲ್ಲರು,
ಕೂಡಲಸಂಗಮದೇವಾ?

ಎಂದರೆ, ಸರ್ವಜ್ಞನಲ್ಲಿ ಇದೇ ವಿಚಾರವನ್ನು ಈ ಮುಂದಿನಂತೆ ಕಾಣಬಹುದಾಗಿದೆ

ಮೀಪರೇ ಪೋಪರೇ ಪಾಪವೇನದು ಕೆಸರೆ?
ಮೀಪರೆ ಮೈಯ್ಯ ಮಲಪೋಪುದಾಪಾಪ
ಲೇಪವಾಗಿಕ್ಕು ಸರ್ವಜ್ಞ

ಎಂದು ವಿಡಂಬಿಸುತ್ತಾನೆ. ಇಂತಹ ವಚನಗಳಲ್ಲಿ ಅಜ್ಞಾನದಿಂದ ಬಾಹ್ಯ ವ್ರತಾಚಾರಗಳಿಗೆ ಒಳಗಾಗದಂತೆ ಎಚ್ಚರಿಸುತ್ತಾನೆ.

ಮನುಷ್ಯನ ಕೀಳು ಮೇಲುಗಳು, ಆ ಜಾತಿ, ಈ ಜಾತಿ, ಆ ಧರ್ಮ, ಈ ಧರ್ಮ ಎಂಬವುಗಳ ಮೇಲೆ ನಿಷ್ಕರ್ಷೆಯಾಗತಕ್ಕವುಗಳಲ್ಲಿ ಯಾರು ತನ್ನ ಆತ್ಮ ಗುಣಗಳಿಂದ ದೇವರಿಗೆ ಮೆಚ್ಚುಗೆಯಾಗುವ ರೀತಿಯಲ್ಲಿ ನಡೆದುಕೊಳ್ಳುತ್ತಾನೋ ಅವನೇ ಮೇಲು ಅವನೇ ಜಾತಿವಂತನೆಂಬುದನ್ನು

ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ?
ಜಾತಿ ವಿಜಾತಿಯೆನ ಬೇಡ, ದೇವನೊಲಿ
ದಾತನೇ ಜಾತ! ಸರ್ವಜ್ಞ

ಎಂಬ ಈ ವಚನದಲ್ಲಿ ಸರ್ವಜ್ಞ ಜಾಗೃತಿ ಮೂಡಿಸಿದರೆ, ಬಸವಣ್ಣನವರು

ಚೆನ್ನಯ್ಯನ ಮನೆಯ ದಾಸನ ಮಗನು;
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು.
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲಸಂಗಮದೇವ ಸಾಕ್ಷಿಯಾಗಿ.

ಎಂದು ಹೇಳಿ

ಆಚಾರವನರಿಯಿರಿ ವಿಚಾರವನರಿಯಿರಿ;
ಜಂಗಮಸ್ಥಲ ಲಿಂಗ ಕಾಣಿರಯ್ಯಾ,
ಜಾತಿ ಭೋದವಿಲ್ಲ, ಸೂತಕವಿಲ್ಲ, ಅಜಾತಂಗೆ ಕುಲವಿಲ್ಲ!
ನುಡಿದಂತೆ ನಡೆಯದಿದ್ದಡೆ
ಕೂಡಲಸಂಗಯ್ಯ ಮೆಚ್ಚ ಕಾಣಿರಯ್ಯಾ

ಎಂದು ಹೇಳುತ್ತಾರೆ. ಈ ವಚನಗಳಿಂದ ಇಬ್ಬರ ಆಶಯ ಒಂದೇ ಆದೆಂದರೆ ಜಾತಿ ಕುಲಗಳು ಮುಖ್ಯವಲ್ಲ ದೇವರಿಗೆ ಮೆಚ್ಚುಗೆಯಾಗುವ ರೀತಿಯಲ್ಲಿ ಸತ್ಪಥದಿಂದ ಸದಾಚಾರಗಳಿಂದ ನಡೆದು ಕೊಳ್ಳುವವನೇ ಕುಲವಂತನು ಅವನೇ ಅತ್ಯುತ್ತಮನೆಂದು ಹೇಳುತ್ತಾರೆ.

ಸಮಾಜವನ್ನು ತಿದ್ದುವ ಸಂದರ್ಭದಲ್ಲಿ ಬಸವಣ್ಣನವರು ವಿಶೇಷ ಒತ್ತು ಕೊಟ್ಟಿದ್ದು ವ್ಯಕ್ತಿಯ ನಡೆ-ನುಡಿ, ಆಚಾರ-ವಿಚಾರಗಳಿಗೆ. ಬೇರೆಯವರನ್ನು ತಿದ್ದುವ ಮುನ್ನ ಅವರು ತಮ್ಮ ವ್ಯಕ್ತಿಗತ ದೋಷಗಳನ್ನು ಸರಿಪಡಿಸಿಕೊಳ್ಳುವತ್ತ ಕಣ್ಣುಹಾಯಿಸಿ

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ;
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ.

ಎಂದು ಸಾಮಾಜಿಕತೆಯ ಶೋಭೆಯನ್ನು ನುಡಿದ ಬಸವಣ್ಣನವರಂತೆಯೇ ಸರ್ವಜ್ಞನು ಸಹ ವ್ಯಕ್ತಿಯ ನಡೆ-ನುಡಿ, ಆಚಾರಗಳಿಗೆ ವಿಶೇಷ ಮನ್ನಣೆ ಕೊಟ್ಟು ಹೀಗೆ ನುಡಿಯುತ್ತಾನೆ.

ಹುಸಿಯ ಪೇಳ್ವುದರಿಂದ ಹಸಿದು ಸಾವುದು ಲೇಸು
ಹುಸಿದು ಮೆರೆಯುವವನ ಬದುಕಿನಿಂದ ಹಂದಿಯ
ಇಸಿಯು ಲೇಸೆಂದ ಸರ್ವಜ್ಞ

ಎಂದಿರುವನು.

ಅಂತರಂಗ ಬಹಿರಂಗ ಶುದ್ಧಿಗೆ ಕಳ್ಳತನ ಮಾಡದಿರುವುದು, ಕೊಲ್ಲದಿರುವುದು, ಸುಳ್ಳಾಡದಿರುವುದು, ಸಿಟ್ಟಾಗದಿರುವುದು, ಇತರರನ್ನು ಕಂಡು ಅಸಹ್ಯ ಪಡದಿರುವುದು, ತನ್ನನ್ನೇ ತಾನು ಹೊಗಳಿ ಕೊಳ್ಳದಿರುವುದು, ಬೇರೆಯವರನ್ನು ಬೈಯದಿರುವುದು ಅತ್ಯಾವಶ್ಯಕವೆಂಬ ಮಾತನ್ನು ಬಸವಣ್ಣ ಹೇಳಿ, ಅಂಥ ಬದುಕಿಗೆ ಮಹತ್ವ ನೀಡಿದ್ದರಿಂದ ಉತ್ತಮ ಜನಾಂಗವನ್ನು, ಸಮಾಜವನ್ನು ರೂಪಿಸಲು ಕಾರಣವಾಯಿತು. ಇಂಥ ಗುಣಗಳನ್ನೇ ಸರ್ವಜ್ಞ ನುಡಿದಿದ್ದಾನೆ. ಇವು ವ್ಯಕ್ತಿಯ ಅಂತರಂಗ ಬಹಿರಂಗ ಶುದ್ಧಿಗೆ ಅನನ್ಯವೆಂಬುದನ್ನು ಸರ್ವಜ್ಞನು ಅನುಮೋದಿಸಿದ್ದಾನೆ.

ವಾಸ್ತವವಾಗಿ ಬಸವಣ್ಣ ಹಾಗೂ ಸರ್ವಜ್ಞರಿಬ್ಬರೂ ಮೌಢ್ಯದ ಕಡುವೈರಿಗಳು. ಈ ದಿಕ್ಕಿನಲ್ಲಿ ಇವರಿಬ್ಬರೂ ಕೈಯಾಡಿಸದ ಎಡೆಯಿಲ್ಲ. ಇಂಥ ಸಂದರ್ಭದಲ್ಲಿ ಮಾತು ತುಂಬಾ ಸ್ಪಷ್ಟ, ಮೇಲೆ ಬಿದ್ದು ಮೂಗು ಕುಯ್ದಿಷ್ಟು ಒರಟು, ಕಠಿಣ, ಮುಲಾಜಿನ ಸೋಲ್ಲು ಇಲ್ಲ.

ಸರ್ವಜ್ಞನು ಇಂತಹ ಮೌಢ್ಯಾಚರಣೆಯವರನ್ನು ಕುರಿತು ಟೀಕಿಸುವಾಗ ಅಂತರಂಗದಲ್ಲೇ ಭಕ್ತಿಯಿಲ್ಲದೆ ಕೇವಲ ಪ್ರದರ್ಶನಕ್ಕಾಗಿ ಆಡಂಬರದ ಪೂಜೆ ಮಾಡುವವರನ್ನು ಕಂಡು

ಒಸೆದೆಂಟು ದಿಕ್ಕಿನಲ್ಲಿ ಮಿಸುನಿ ಗಿಣ್ಣಲು ಗಿಂಡಿ

ಹಸಿದು ಮಾಡುವನ ಪೂಜೆಯದು ಬೋಗಾರ
ಪಸರ ವಿಟ್ಟಂತೆ ಸರ್ವಜ್ಞ.

ಡಂಭಾಚಾರಕ್ಕಾಗಿ ಸುಳ್ಳು ಪೂಜೆ ಮಾಡುವವನು ತನ್ನ ಪೂಜಾ ಸಾಮಾಗ್ರಿಗಳಾದ ಮೂರ್ತಿಗಳನ್ನು, ತಂಬಿಗೆ, ಗಿಂಡಿ, ಬಟ್ಟಲು ಮೊದಲಾದವುಗಳನ್ನು ಕಂಚುಗಾರರ ಅಂಗಡಿಯಂತೆ ಹರವಿಕೊಂಡು ಕುಳಿತು ಮಾಡುವ ಪೂಜೆಯು ವ್ಯರ್ಥವಾಗುವದು. ಅದರಲ್ಲಿ ಭಕ್ತಿಯಿಲ್ಲದ್ದರಿಂದ ಅವನಿಗೆ ಪೂಜೆಯು ವ್ಯರ್ಥವಾಗುವುದು. ಅದರಲ್ಲಿ ಭಕ್ತಿಯಿಲ್ಲದ್ದರಿಂದ ಅವನಿಗೆ ಏನೂ ಪುಣ್ಯವು (ಫಲವು) ಬರಲಾರದು ಎಂದು ಟೀಕಿಸುತ್ತಾನೆ.

ಇದೇ ಆಡಂಬರ ಭಕ್ತಿಯನ್ನು ಬಸವಣ್ಣನವರು ತಮ್ಮ ವಚನವೊಂದರಲ್ಲಿ ಹೀಗೆ ವರ್ಣಿಸುತ್ತಾರೆ.

ಕಣ್ಣ ಮುಚ್ಚಿ ಕನ್ನಡಿಯ ತೋರುವಂತೆ;
ಇರುಳು ಹಗಲಿನ ನಿದ್ರೆ ಸಾಲದೆ?
ಬೆರಳನೆಣಿಸಿ ಪರಮಾರ್ಥವ ಹಡೆವಡೆ
ಚೋದ್ಯವಲ್ಲವೆ? ಹೇಳಾ!
ಮೂಗ ಮುಚ್ಚಿ ಮುಕ್ತಿಯ ಬಯಸುವ
ನಾಚಿಕೆಯಿಲ್ಲದವರ ನಾನೇನೆಂಬೆ,
ಕೂಡಲಸಂಗಮದೇವಾ?

ಕೇವಲ ಯಾಂತ್ರಿಕವಾಗಿ ದೇವಸ್ಥಾನಕ್ಕೆ ಹೋಗಿ, ವಿವೇಕವಿಲ್ಲದೆ ಮೂರ್ತಿ ಪೂಜೆಮಾಡಿ ಅಷ್ಟರಿಂದಲೇ ಧನ್ಯರಾದೆವೆಂದು ಭಾವಿಸುವ ಜನರನ್ನು ಕುರಿತು ಸರ್ವಜ್ಞ ಹೀಗೆ ನುಡಿದಿದ್ದಾನೆ.

ಕಲ್ಲಗುಂಡೆಯ ಮೇಲೆ ಮಲ್ಲಿಗೆಯರಳಕ್ಕಿ
ನಿಲ್ಲದೆ ಹಣೆಯ ಬಡಿವಡೆ ಬುಗುಟಲ್ಲ
ದಿಲ್ಲ ಕಂಡಯ್ಯ ಸರ್ವಜ್ಞ.

ಇಂತಹ ಯಾಂತ್ರಿಕತೆಯನ್ನು ಮೂರ್ತಿಪೂಜೆಯನ್ನು ಮಾಡುವವರನ್ನು ಕುರಿತಂತೆ ಬಸವಣ್ಣನವರು ವಚನವೊಂದರಲ್ಲಿ ಹೀಗೆ ನುಡಿಯುತ್ತಾರೆ.

ಮಾಡಿ ನೀಡಿ ಲಿಂಗವ ಪೂಜಿಸಿಹೆನೆಂಬುವರು ನೀವೆಲ್ಲಾ ಕೇಳಿರಣ್ಣಾ
ಹಾಗದ ಕೆರಹ ಹೊರಗೆ ಕಳೆದು
ದೇಗುಲಕ್ಕೆ ಹೋಗಿ ದೇವರಿಗೆ ನಮಸ್ಕಾರವ ಮಾಡುವನಂತೆ
ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲ.
ಧನವನಿರಿಸದಿರಾ, ಇರಿಸಿದಡೆ ಭವ ಒಪ್ಪುದು ತಪ್ಪದು.
ಕೂಡಲಸಂಗನ ಶರಣರಿಗೆ ಸವಸಲೆಬೇಕು.

ಕೆರವನ್ನು ಹೊರಗೆ ಇಟ್ಟು ದೇವಾಲಯದೊಳಕ್ಕೆ ಹೋಗಿ ದೇವರಿಗೆ ನಮಸ್ಕಾರ ಮಾಡುವವನ ಧ್ಯಾನವೆಲ್ಲಾ ಇಟ್ಟು ಬಂದ ಕೆರದ ಮೇಲೆಯೇ ಇರುವುದು. ಆ ಕೆರವನ್ನು ಯಾರು ಮೆಟ್ಟಿ ಕೊಂಡೊಯ್ವರೋ, ಅದೆಲ್ಲಿ ಕಳೆದು ಹೋಗುವುದೋ ಎಂಬ ಚಿಂತೆ ಆವರಿಸಿರುವುದು. ಅಂದಮೇಲೆ ದೇವರ ಧ್ಯಾನವೆಲ್ಲಿ ಬಂತು?

ಎಂದು ಹೇಳುತ್ತಾ ಮುಂದುವರಿದು

ಬಂಡಿ ತುಂಬಿ ಪತ್ರೆಯ ತಂದು ಕಂಡಕಂಡಲ್ಲಿ ಮಜ್ಜನಕ್ಕೆರೆವಿರಿ
ತಾಪತ್ರಯವ ಕಳೆದು ಪೂಜಿಸಿ
ತಾಪತ್ರಯವ ಲಿಂಗನೊಲ್ಲ
ಕೂಡಲಸಂಗಮದೇವ ಬರಿಯುದಕದಲ್ಲಿ ನೆನೆವನೆ?

ಎಂದು ಮೂರ್ತಿ ಪೂಜೆ ಅಷ್ಟರಿಂದಲೇ ಧನ್ಯರಾದೆವೆಂದು ಭಾವಿಸುವವರನ್ನು ಕಂಡು ಬಸವಣ್ಣನವರು ಮರುಗಿದ್ದಾರೆ.

ಜಾತಿಗಳ ಉಗಮ ವಿಚಾರ ಬಂದಾಗ ಬಸವಣ್ಣ ಮತ್ತು ಸರ್ವಜ್ಞರಲ್ಲಿ ಏಕಾಭಿಪ್ರಾಯ ಪೂರಕ ವಚನಗಳು ಮೂಡಿವೆ. ಸಾಮಾಜಿಕ ವ್ಯವಸ್ಥೆಯ ಅತ್ಯಂತ ಕೀಳು ಪದ್ಧತಿಗಳಲ್ಲಿ ಒಂದಾದ ಜಾತಿಯತೆ.ನ್ನು ಕುರಿತು ಇರ್ವರೂ ಕಿಡಿಕಾರಿದ್ದಾರೆ.

ಜಾತಿಗಳ ಉಗಮ ಸ್ವರೂಪ ರಚನೆಗಳನ್ನು ಕುರಿತು ಆ ಕಾಲದಲ್ಲಿಯೇ ಬಸವಣ್ಣನವರು ಸಮಾಜಶಾಸ್ತ್ರಜ್ಞರಂತೆ ವ್ಯಾಖ್ಯಾನ ಮಾಡುತ್ತಾರೆ. ಕಸುಬುಗಳೇ ಜಾತಿಗಳಾಗಿದ್ದು, ಕಸುಬುಗಳನ್ನು ಮೇಲು ಕೀಳುಗಳೆಂದು ವಿಂಗಡಿಸಿ ಜಾತಿಗಳಿಗೂ ಆ ಗುಣವನ್ನೇ ಅಂಟಿಸಿದ್ದು, ಶ್ರಮಜೀವನದ ಗೌರವವನ್ನು ಅಲ್ಲಗಳೆದದ್ದು ದೇಶದ ದಾರಿದ್ರ್ಯಕ್ಕೆ ಅವನತಿಗೆ ಕಾರಣವಾಯಿತೆಂದು ಹೇಳಿದ ರಸ್ಕಿನ್ ಹುಟ್ಟುವುದಕ್ಕೆ ಏಳೆಂಟು ಶತಮಾನಗಳ ಹಿಂದೆಯೇ ಬಸವಣ್ಣನವರು ಸ್ಪಷ್ಟ ಪಡಿಸುತ್ತಾರೆ.

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ;
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ
ಕರ್ಣದಲಿ ಜನಿಸಿದವರುಂಟೇ ಜಗದೊಳಗೆ?
ಇದು ಕಾರಣ ಕೂಡಲಸಂಗಮದೇವಾ
ಅಂಗಸ್ಥಲವನರಿದವನೆ ಕುಲಜ.

ಎಂದು ಜಾತಿಯ ಒಗಟನ್ನವರು ಬಿಡಿಸುತ್ತಾರೆ. ಎಲ್ಲ ಕಸುಬುಗಳಿಂದ ಬರುವ ಉತ್ಪನ್ನಗಳು ಬ್ರಾಹ್ಮಣರಿಂದ ಹಿಡಿದು ಎಲ್ಲರಿಗೂ ಬೇಕು. ಕಮ್ಮರ ತಟ್ಟಿದ ಬಾಚಿ, ನೇಕಾರ ನೇಯ್ದ ಬಟ್ಟೆ, ರೈತ ಬೆಳೆದ ಧಾನ್ಯ, ಕವಾಡಿಗ ಕರೆದ ಹಾಲು ಎಲ್ಲ ವರ್ಣದವರಿಗೂ ಅತ್ಯವಶ್ಯ. ಹೀಗಿರುವಾಗ ಉದ್ಯೋಗಗಳಲ್ಲಿ ಕೀಳು ಮೇಲುಗಳನ್ನೆಣಿಸುವುದೇ ಮೂರ್ಖತನ. ಕಾಯಕವೇ ಪೂಜೆ, ಅದೇ ಮುಕ್ತಿ ಎಂದು ಘೋಷಿಸಿ ಅವರ ಅನಿವಾರ್ಯತೆಯನ್ನು, ಮಹತ್ವವನ್ನು, ಶ್ರೇಷ್ಠತೆಯನ್ನು ಜಗತ್ತಿಗೆ

ಸಾರಿದ ಅವತಾರ ಪುರುಷರಲ್ಲಿ ಬಸವಣ್ಣನವರೇ ಮೊದಲಿಗರು. ಅವರ ಸಾಮಾಜಿಕ ಕಾಳಜಿ ಅವಿಸ್ಮರಣೀಯವಾದುದು. ಕೇವಲ ಮಾಡುವ ಕೆಲಸಗಳಿಂದ ಅವರ ಕುಲವನರಸುವ ಬದಲು ಸಕಲರು ಒಂದೇ ಎಂಬ ಮನೋಭಾವವನ್ನು ಹನ್ನೆರಡನೆಯ ಶತಮಾನದಲ್ಲಿ ಸಾರಿದ ಸಾಮಾಜಿಕ ಸಮಾನತೆಯ ಹರಿಕಾರ ಬಸವಣ್ಣ. ಇಂಥವರ ಪ್ರಭಾವ ಮತ್ತು ಅವರ ನಿಲುವುಗಳು ಸರ್ವಜ್ಞನಲ್ಲೂ ಧ್ವನಿಸಿವೆ.

ಸರ್ವಜ್ಞ ಸಹ

ಕುಲವಿಲ್ಲ ಯೋಗಿಗೆ ಛಲವಿಲ್ಲ ಜ್ಞಾನಿಗೆ
ತೊಲೆ ಕಂಬವಿಲ್ಲ ಗಗನಕ್ಕೆ, ಸ್ವರ್ಗದಲಿ
ಹೊಲಗೇರಿಯಿಲ್ಲ ಸರ್ವಜ್ಞ.

ಕೂಳಿಂದ ಕುಲ ಬೆಳೆದು ಬಾಳಿಂದ ಬಲ ಬೆಳೆದು
ಕೂಳು ನೀರುಗಳು ನೀಗಿದರೆ ಕುಲಗಳನು
ಕೇಳ ಬೇಡೆಂದ ಸರ್ವಜ್ಞ.

ಹೀಗೆ ಖಂಡತುಂಡವಾಗಿ ಸಕಲರು ಒಂದೇ ಎನ್ನುವ ಸಾರವನ್ನು ಸಾರಿ, ಕುಲ ಮದದಲ್ಲಿ ಬೇಯ ಬೇಡಿರೆಂದು ಹೇಳುತ್ತಾನೆ.

"ಸರ್ವಜ್ಞ ಶಾಸ್ತ್ರೀಯವಾಗಿ ವೀರಶೈವ ಧರ್ಮಕ್ಕೆ ಮತಾಂತರ ಹೊಂದಿದ್ದನೇ ಎಂಬುದೇ ಸಂದೇಹಾಸ್ಪದವಾಗಿರುವಾಗ ಆ ಮತದ ಪ್ರಸಾರಕ್ಕೆ ಅವನು ಪ್ರಯತ್ನಿಸಿದನೆನ್ನುವುದು ಇನ್ನೂ ಸಂದೇಹಾಸ್ಪದವಾಗಿ ಕಾಣುತ್ತದೆ. ಸರ್ವಜ್ಞನಲ್ಲಿ ವೀರಶೈವ ಧರ್ಮ ಪರಿಭಾಷೆ ಅಲ್ಲಲ್ಲಿ ಬರುವುದೇನೋ ನಿಜ. ಅದು ತೀರಾ ಗೌಣವಾದುದು. ತನ್ನ ಸುತ್ತ-ಮುತ್ತಣ ಜೀವಿಗಳನ್ನು ವೀರಶೈವರನ್ನಾಗಿ ಮಾಡುವುದಕ್ಕಿಂತ ಅವರನ್ನು ಮನುಷ್ಯರನ್ನಾಗಿ ಮಾಡುವುದು ಅವನಿಗೆ ಮುಖ್ಯವಾಗಿ ಕಂಡಿತು. ಅವನಲ್ಲಿ ಇತರ ಧರ್ಮಗಳ ವಿಡಂಬನೆ ಬಂದಿದ್ದರೂ ಎಷ್ಟೋ ಕಡೆ ಅವುಗಳ ಶ್ರೇಷ್ಠತೆಯನ್ನೂ ಎತ್ತಿ ಹಿಡಿಯಲು ಹಿಂಜರಿದಿಲ್ಲ".[೩]

ಕೊಲುವ ಧರ್ಮವನೊಯ್ದು ಒಲೆಯೊಳಗಿಕ್ಕುವುದು
ಕೊಲಲಾಗದೆಂಬ ಜೈನರ ಮತವೆನ್ನ
ತಲೆಯ ಮೇಲಿರಲಿ ಸರ್ವಜ್ಞ.

ಉಪ್ಪು ಸಪ್ಪನೆಯಕ್ಕು ಕರ್ಪೂರ ಕರಿದಿಕ್ಕು
ಸರ್ಪಂಗೆ ಬಾಲವೆರಡಕ್ಕು ಶ್ರವಣರು
ತಪ್ಪಿನುಡಿದಂದು.

೩. ಸರ್ವಜ್ಞ ಒಂದು ಸಮೀಕ್ಷೆ, ಎಂ. ಚಿದಾನಂದಮೂರ್ತಿ, ಪುಟ-೧೬

ಇಲ್ಲಿಯ ತ್ರಿಪದಿಗಳಲ್ಲಿ ಜೈನ ಧರ್ಮದ ಶ್ರೇಷ್ಠತೆಯನ್ನು, ಶ್ರವಣರ ಸತ್ಯ ನಿಷ್ಠೆಯನ್ನು ಕೊಂಡಾಡಿದ್ದಾನೆ. ಅದೇ ಶ್ರವಣರನ್ನು ಟೀಕಿಸಿರುವ ಪದ್ಯಗಳೂ ಅವನಲ್ಲುಂಟು. ಬಸವಣ್ಣನವರಲ್ಲಾದರೆ ಪರಮತ ವಿಡಂಬನೆ ಮಾತ್ರ ಉಂಟು. ಇದಕ್ಕೆ ಕಾರಣ ಇವರ ಉದ್ದೇಶದಲ್ಲೇ ಅಡಗಿದೆ. ಸರ್ವಜ್ಞ ಜೀವನವನ್ನು ಸಾಕ್ಷಿಯಾಗಿ ನೋಡಿದ್ದಾನೆ, ಸಮಗ್ರವಾಗಿ ನೋಡಿದ್ದಾನೆ ದುರ್ಗುಣವನ್ನು ಕಂಡಲ್ಲಿ ಕಟುವಾಗಿ ಟೀಕಿಸಿದ್ದಾನೆ. ಉತ್ತಮವಾದದ್ದನ್ನು ಮೆಚ್ಚಿ ಹೊಗಳಿದ್ದಾನೆ ಮತ್ತು ತಲೆಯ ಮೇಲಿಟ್ಟುಕೊಂಡು ಮೆರೆದಿದ್ದಾನೆ.

ಬಸವಣ್ಣನವರಲ್ಲಿ ಬ್ರಾಹ್ಮಣ ವರ್ಗದ ಪ್ರಶಂಸೆ ಅಪ್ಪಿ-ತಪ್ಪಿಯೂ ಬರುವುದಿಲ್ಲ. ಬಸವಣ್ಣನವರು ಸಮಾಜದಲ್ಲಿ ಬೇರೆ ಬೇರೆ ಜಾತಿಗಳಿಗಿರುವ ಮೇಲು-ಕೀಳುಗಳನ್ನು ಖಂಡಿಸಿದ್ದಾರೆ. ಸರ್ವಜ್ಞನೂ ಸಹ ಈ ಬಗೆಯ ಮೇಲು-ಕೀಳುಗಳನ್ನು ಟೀಕಿಸಿದ್ದಾನೆ. ಹಾರುವರೆಂಬುವರ ಹಾಸುವರು ನರಕಕ್ಕೆ ಎಂದು ಒಂದು ಕಡೆ ಬ್ರಾಹ್ಮಣರನ್ನು ನಿಂದಿಸಿದರೆ, ಅದೇ ಉಸಿರಿನಲ್ಲಿ ಆರೈದು ನಡೆವ ದ್ವಿಜರುಗಳ ಸಂಸರ್ಗವಾರಿಂದಲಧಿಕ ಎಂದು ಶ್ರೇಷ್ಠ ನಡತೆಯುಳ್ಳ ಬ್ರಾಹ್ಮಣರನ್ನು ಕೊಂಡಾಡಿದ್ದಾನೆ.

ಜಾತಿವಿಡಿದು ಸೂತಕವನರಸುವೆ
ಜ್ಯೋತಿವಿಡಿದು ಕತ್ತಲೆಯನರಸುವೆ
ಇದೇಕೋ ಮರುಳುಮಾನವಾ?
ಜಾತಿಯಲ್ಲಿ ಅಧಿಕನೆಂಬೆ
ವಿಪ್ರ ಶತಕೋಟಿಗಳಿದ್ದಲ್ಲಿ ಫಲವೇನೋ?
ಭಕ್ತ ಶಿಖಾಮಣಿ ಎಂದುದು ವಚನ.
ನಮ್ಮ ಕೂಡಲಸಂಗನ ಶರಣರ ಪಾದ ಪುರುಷವ ನಂಬು
ಕೆಡಬೇಡ, ಮಾನವಾ.

ಎಂಬ ಬಸವಣ್ಣನವರ ಉಕ್ತಿಯನ್ನು ಸರ್ವಜ್ಞನ ಈ ತ್ರಿಪದಿಯು ಜ್ಞಾಪಕಕ್ಕೆ ತರುತ್ತದೆ.

ಯಾತರ ಹೂವದು ನಾತರೆ ಸಾಲದೆ
ಜಾತಿ ವಿಜಾತಿಯೆನಬೇಡ ಶಿವನೊಲಿ
ಜಾತನೆ ಜಾತಿ ಸರ್ವಜ್ಞ

ಒಟ್ಟಿನಲ್ಲಿ ಸರ್ವಜ್ಞನ ಮೇಲೆ ಪರಮಾವಧಿ ಪ್ರಭಾವವನ್ನು ಬೀರಿದವರು ಬಸವಣ್ಣನವರು. ಬಸವಣ್ಣನವರ ಭಾವಗಳು, ವಚನಗಳ ಭಾಗಗಳು, ಇಡೀ ವಚನಗಳು ಸರ್ವಜ್ಞನಲ್ಲಿ ಚೆಲ್ಲುವರಿದಿದೆ.

ಕುರಿವಿಂಡು ಕಬ್ಬಿನ ಉಲಿವ ತೋಂಟವ ಹೊಕ್ಕು
ತರನರೆಯದೆ ತನಿರಸದೆ
ಹೊರಗಣೆಲೆಯನೆ ಮೇದುವು
ನಿಮ್ಮನರೆವ ಮದಕರಿಯಲ್ಲದೆ

ಕುರೆ ಬಲ್ಲುದೆ ಕೂಡಲಸಂಗಮದೇವ.

ಬಸವಣ್ಣನವರ ಈ ವಚನ ಸರ್ವಜ್ಞನಲ್ಲಿ ಈ ಬಗೆಯಲ್ಲಿ ಮೂಡಿ ಬಂದಿವೆ.

ಕುರೆ ಕೊಬ್ಬಿನೊಳು ಹೊಕ್ಕು ಅರಿಯದೇ ತನಿರಸವ
ಹೊರಗಣ ಸೋಗೆಯಗಿವಂತೆ ತತ್ವದ
ಕುರುಹನಾರರೆಗು ಸರ್ವಜ್ಞ.

ಬಸವಣ್ಣನವರ ಮೊದಲನೆಯ ವಚನದಲ್ಲಿ ಬಂದಿರುವ ಮದಕರಿ ಚಿತ್ರ ಸರ್ವಜ್ಞನಲ್ಲಿ ಬಿಟ್ಟು ಹೋಗಿದ್ದರೂ ನಷ್ಟವೇನಿಲ್ಲ. ಕುರಿ ಕಬ್ಬನ್ನು ತಿನ್ನಲಾರದೇ ಅದರ ಸೋಗೆಯನ್ನು ಅಗಿಯುತ್ತದೆ ಎಂಬ ಚಿತ್ರವೇ, ಅಂತಹ ಕಬ್ಬನ್ನು ಸೀಳುವ ಶಕ್ತಿಯುಳ್ಳ ಆನೆಯನ್ನು ಧ್ವನಿಸುತ್ತದೆ.

ಬಸವಣ್ಣನವರ ಉಕ್ತಿಗಳನ್ನೂ ಭಾವಗಳನ್ನೂ ಆಧರಿಸಿ ಸರ್ವಜ್ಞನಲ್ಲಿ ಹುಟ್ಟಿದ ತ್ರಿಪದಿಗಳು ಹತ್ತಾರಿವೆ.

ಉಣಬಂದ ಲಿಂಗಕ್ಕೆ ಉಣಲಿಕ್ಕದಂತರಿಸಿ
ಉಣದಿರ್ದ ಲಿಂಗಕ್ಕುಣಬಡಿಸಿ ಕೈಮುಗಿವ
ಬಣಗುಗಳ ನೋಡಾ ಸರ್ವಜ್ಞ.

ಎಂಬ ತ್ರಿಪದಿಯ ಭಾವಕ್ಕೆ ಬಸವಣ್ಣನವರ

ಕಲ್ಲು ನಾಗರ ಕಂಡಡೆ ಹಾಲನೆರೆಯೆಂಬರು
ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ
ಉಂಬ ಜಂಗಮ ಬಂದಡೆ ನಡೆಯೆಂಬರು
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ,
ನಮ್ಮ ಕೂಡಲಸಂಗನ ಶರಣರ ಉದಾಸೀನವ ಮಾಡಿದಡೆ
ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ.

ಎಂಬ ಸುಪ್ರಸಿದ್ಧ ವಚನ ಮೂಲವೆಂಬುದು ಸ್ಪಷ್ಟ. ಎಂಬ ಜಗಮ ಎಂಬುದರ ಬದಲು ಅದೇ ಅರ್ಥದಲ್ಲಿ ಉಣ ಬಂದ ಲಿಂಗವೆಂದು ಬಳಸಿರುವುದು ಸೋಗಸಾಗಿದೆ.

ಒಡಲದಂಡಿಸಿ ಮುಕ್ತಿ ಪಡೆವನೆಂಬುವನೆಗ್ಗ
ಬಡಿಗೆಯಿಂ ಹುತ್ತ ಹೊಡೆಯಲೊಳಗಿಹ ಸರ್ಪ
ಮಡಿವುದೇ ಹೇಳ ಸರ್ವಜ್ಞ.

ಎಂಬ ಸರ್ವಜ್ಞನ ತ್ರಿಪದಿಗೂ ಬಸವಣ್ಣನವರ ಈ ವಚನವೇ ಮೂಲ.

ಹುತ್ತವ ಬಡಿದಡೆ ಹಾವು ಸಾಯಬಲ್ಲುದೇ ಅಯ್ಯಾ?
ಅಘೋರ ತಪವ ಮಾಡಿದಡೇನು?
ಅಂತರಂಗ ಆತ್ಮಶುದ್ಧಿಯಿಲ್ಲದವರನೆಂತು ನಂಬುವನಯ್ಯಾ

ಕೂಡಲಸಂಗಮದೇವ.

ಒಡಲನ್ನು ದಂಡಿಸಿ ಆತ್ಮಶುದ್ಧಿಯಾಯಿತು ಎಂದು ಭ್ರಮಿಸುವುದು, ಹಾವನ್ನು ಕೊಲ್ಲಲು ಹುತ್ತವನ್ನು ಹೊಡೆದಂತೆ ಎಂಬ ಸರ್ವಜ್ಞನ ತ್ರಿಪದಿಯ ಭಾವ ಮೂಲತಃ ಬಸವಣ್ಣನವರದು.

ಸಿರಿಯ ಸಂಸಾರವು ಸ್ಥಿರವೆಂದು ನಂಬದಿರು
ಹಿರಿದೊಂದು ಸಂತೆ ನೆರೆದೊಂದು ಜಾವಕ್ಕೆ
ಹರಿದು ಹೋಹಂತೆ ಸರ್ವಜ್ಞ.

ಎಂಬ ತ್ರಿಪದಿಯು ಬಸವಣ್ಣನವರ ಈ ವಚನದ ಭಾವವನ್ನು ಹೋಲುತ್ತದೆ.

ಸಂಸಾರವೆಂಬುದು ಗಾಳಿಯ ಸೊಡರು,
ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ
ಇದ ನಚ್ಚಿ ಕೆಡಬೇಡ
ಸಿರಿಯೆಂಬುದ ಮರೆದು, ಪೂಜಿಸು ನಮ್ಮ ಕೂಡಲಸಂಗಮದೇವನ.

ಸಂಸಾರವನ್ನು ಒಂದು ಕ್ಷಣ ನೆರೆಯುವ ಸಂತೆಗೆ ಹೋಲಿಸುವ ಉಪಮೆ ಸರ್ವಜ್ಞನಿಗೆ ಬಸವಣ್ಣನವರಿಂದ ಬಂದಿದೆ, ಸಜ್ಜನರ ಡೊಂಕು ಅನಪೇಕ್ಷಣೀಯವಾದದ್ದೇನೂ ಅಲ್ಲ ಎಂದು ಸರ್ವಜ್ಞ ಹೇಳುವಾಗ ಅವನ ಮನಸ್ಸಿನ ಹಿನ್ನೆಲೆಯಲ್ಲಿ ಕೂಡಲಸಂಗನ ಶರಣರಡೊಂಕು ಲಿಂಗಕ್ಕೆ ಸಸಿನ ಎಂಬ ಬಸವಣ್ಣನವರ ಮಾತು ಇದೆ. ಸರ್ಪನ ನೆರಳಲ್ಲಿ ವಿಶ್ರಮಿಸುತ್ತಿರುವ ಕಪ್ಪೆ, ಕೂಸುಳ್ಳ ಸೂಳೆ, ಧನದ ಆಸೆಗೆ ಒತ್ತುಕೊಂಡು ಅನುಭವಿಸುವ ಬವಣೆ, ಆನೆಯ ಮೇಲೆ ಹೋಗುವವರನ್ನು ಕಂಡು ವ್ಯರ್ಥವಾಗಿ ನಾಯಿ ಬೊಗಳುವುದು ಈ ಅದ್ಭುತ ಶಬ್ಧ ಚಿತ್ರಗಳಿಗೆ ಮಾರು ಹೋದ ಸರ್ವಜ್ಞ, ಅವನ್ನು ಬಸವಣ್ಣನವರಿಂದ ಸ್ವೀಕರಿಸಿ ಯಥೋಚಿತವಾಗಿ ಚಿತ್ರಿಸಿದ್ದಾನೆ.

ಎಷ್ಟೋ ಕಡೆ ಎರಡು ಮೂರು ವಚನಗಳ ಭಾವವನ್ನು ಒಂದು ಪದ್ಯದಲ್ಲಿ ಧ್ವನಿಸಿರುವುದುಂಟು. ಸಂಕ್ಷಿಪ್ತತೆಯಿಂದಾಗಿ ಅಂತಹ ಪದ್ಯಗಳು ಹೆಚ್ಚು ಶಕ್ತಿಯನ್ನು ಗಳಿಸಿಕೊಳ್ಳುತ್ತವೆ.

ಎಲ್ಲರೂ ವೀರರು ಎಲ್ಲರೂ ಧೀರರು
ಎಲ್ಲರೂ ಮಹಿಮರು ಎಲ್ಲರೂ ಪ್ರಥಮರು
ಕಾಳೆಗದ ಮುಖದಲ್ಲಿ ಕಾಣಬಾರದು
ಈಡುವ ಮುಖದಲ್ಲಿ ಕಾಣಬಾರದು
ನಮ್ಮ ಕೂಡಲಸಂಗನ ಶರಣರು ಧೀರರು,
ಉಳಿದವರೆಲ್ಲಾ ಅಧೀರರು.

ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿ ರಚಿತವಾದ ಸರ್ವಜ್ಞನ ತ್ರಿಪದಿಗಳು ಹಲವಾರು. 'ಸರ್ವಜ್ಞ ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿಯೂ ತನ್ನ ಸ್ವಂತಿಕೆಯನ್ನು ಕಾಪಾಡಿಕೊಂಡಿದ್ದಾನೆ'. ಎಷ್ಟೋ ಕಡೆ ಮೂಲದ ಉಕ್ತಿಯನ್ನು ತೆಗೆದುಕೊಂಡು ಉತ್ತಮವಾಗಿ ರಚಿಸಿದ್ದಕ್ಕೆ ಹಲವು

ಉದಾಹರಣೆಗಳಿವೆ.

ಹೊಲೆಯೊಳಗೆ ಹುಟ್ಟಿ ಕುಲವನರಸುವ
ಎಲವೋ ಮಾತಂಗಿಯ ಮಗ ನೀನು
ಸತ್ತುದನೆಳೆವನೆತ್ತಣ ಹೊಲೆಯ?
ಹೊತ್ತು ತಂದು ನೀವು ಕೊಲುವಿರಿ
ಶಾಸ್ತ್ರವೆಂಬುದು ಹೋತಿಂಗೆ ಮಾರಿ
ವೇದವೆಂಬುದು ನಿಮಗೆ ತಿಳಿಯದು
ನಮ್ಮ ಕೂಡಲಸಂಗನ ಶರಣರು
ಕರ್ಮವಿರಹಿತರು, ಶರಣ ಸನ್ನಿಹಿತರು, ಅನುಪಮ ಚರಿತ್ರರು,
ಅವರಿಗೆ ತೋರಲು ಪ್ರತಿಯಿಲ್ಲವೋ

ಎಂಬ ಬಸವಣ್ಣನವರ ವಚನವೊಂದರಿಂದ ಪ್ರೇರಿತರಾಗಿ ಸರ್ವಜ್ಞ

ಸತ್ತುದ ತಿಂಬಾತನೆತ್ತಣ ಹೊಲೆಯನು
ಎತ್ತಿ ಜೀವದುದ ಕೊರಳರಿದು ತಿಂಬಾತ
ನುತ್ತಮದ ಹೊಲೆಯ ಸರ್ವಜ್ಞ

ಈ ತ್ರಿಪದಿಯನ್ನು ಬರೆದಿದ್ದಾನೆನ್ನುವುದರಲ್ಲಿ ಅನುಮಾನವಿಲ್ಲ. ಬಸವಣ್ಣನವರು ತಮ್ಮ ವಚನದಲ್ಲಿ ಬ್ರಾಹ್ಮಣರು ಯಾಗದ ನೆಪದಲ್ಲಿ ಪ್ರಾಣಿಗಳನ್ನು ಕೊಲ್ಲುವ ಪದ್ಧತಿಯನ್ನು ವಿರೋಧಿಸಿದ್ದಾರೆ. ಹೊಲೆಯ ಸತ್ತದ್ದನ್ನು ಮಾತ್ರ ತೆಗೆದುಕೊಂಡು ಹೋಗುವನು ಎಂಬ ಬಸವಣ್ಣನವರ ಮಾತಿನ ಕಟಕಿ ಸರ್ವಜ್ಞನಲ್ಲಿಯೂ ಬಂದಿದೆ. ಸರ್ವಜ್ಞನ ವಚನದಲ್ಲಿಯೂ ಬ್ರಾಹ್ಮಣ ವರ್ಗದ ವಿಡಂಬನೆಯಿದೆಯೆಂದು ಗೊತ್ತಾಗುವುದು ಬಸವಣ್ಣನವರ ವಚನದ ಜೊತೆಗೆ ಹೋಲಿಸಿದಾಗ ಮಾತ್ರ. ಈ ವಚನ ದ್ವಿಜದರ್ಶನ ಪದ್ಧತಿಯಲ್ಲಿ ಬಂದಿರುವುದೂ ಅಂತಹ ಭಾವನೆಯನ್ನು ಉಂಟುಮಾಡಬಹುದು. ಬರೀ ವಚನವನ್ನು ತೆಗೆದುಕೊಂಡಾಗ, ಬದುಕಿರುವ ಪ್ರಾಣಿಗಳ ಕೊರಳು ಕೊಯ್ದು ತಿಂಬಾತ ಎನ್ನುವ ಮಾತು ಸಮಾಜವನ್ನು ವಂಚಿಸಿ ಬೇರೆಯವರ ಸುಖವನ್ನು ಬಲಿಕೊಟ್ಟು ತಮ್ಮ ಸ್ವಾರ್ಥವನ್ನು ಈಡೇರಿಸಿಕೊಳ್ಳುವ ವಂಚಕರ ಸಮೂಹಕ್ಕೆ ಅನ್ವಯಿಸಬಹುದು. ಆಗ ಅರ್ಥ ಇನ್ನೂ ವಿಶಾಲವಾಗುತ್ತದೆ.

ಬಸವಣ್ಣ ಹಾಗೂ ಸರ್ವಜ್ಞರಲ್ಲಿ ಕಂಡುಬರುವ ಸಮನ್ವಯ ಸಾಮಾಜಿಕ ಕಳಕಳಿಗಳಲ್ಲಿ ಪರಮಾತ್ಮನ ಕಲ್ಪನೆಯು ಒಂದು. ಇವರೀರ್ವರಲ್ಲೂ ದೇವರ ಕಲ್ಪನೆ ವಿಶಾಲವಾದುದೂ, ಮತಾತೀದವಾದುದೂ ಆಗಿದೆ. ಗುಡಿಯ ವ್ಯವಸ್ಥೆಯನ್ನೇ ಬಸವಣ್ಣನವರು ಪ್ರತಿಭಟಿಸುತ್ತಾರೆ. ವಿಗ್ರಹಗಳ ಆರಾಧನೆಯನ್ನು ತಿರಸ್ಕರಿಸುತ್ತಾರೆ. ಗುಡಿಕಟ್ಟುವ, ವಿಗ್ರಹಗಳನ್ನು ಮಾಡಿಸುವ, ಅಂತವುಗಳ ಪೂಜೆ ಮಾಡುವ ಜನರನ್ನು ಬಸವಣ್ಣ ಎಚ್ಚರಿಸುವ ವಿಧಾನ ಗಮನಾರ್ಹ.

ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ ಬಡವನಯ್ಯಾ
ಎನ್ನ ಕಾಲೆಕಂಭ, ದೇಹವೆ ದೇಗುಲ
ಶಿರವೆ ಹೊನ್ನಕಲಶವಯ್ಯಾ
ಕೂಡಲಸಂಗಮದೇವಾ, ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ಎಂದು ಹೇಳುತ್ತಾರೆ. ಸ್ಥಾವರ ದೇವಾಲಯಗಳು ಭಕ್ತರನ್ನು ಧಾರ್ಮಿಕ ದಾಸ್ಯಕ್ಕೆ ಗುರಿ ಮಾಡಿ, ದಾರಿ ತಪ್ಪಿಸುವಂಥವುಗಳು. ಇಂಥ ದಾರಿ ತಪ್ಪಿಸುವ ಗುಡಿಗಳ ಹಂಗು ತೊರೆದ ಬಸವಣ್ಣನವರು ಅದಕ್ಕಿಂತ ಭಿನ್ನವಾದ ದೇವಾಲಯವೊಂದನ್ನು ಕಟ್ಟುವ ವಿಧಾನ ತುಂಬಾ ಅರ್ಥಪೂರ್ಣವೆನಿಸುತ್ತದೆ.

ಸಂಪತ್ತುಳ್ಳವರು ದೇವಾಲಯ ಕಟ್ಟಿಸುತ್ತಾರೆ. ನಾನು ಬಡವ, ನನ್ನಿಂದ ಅವರಂತೆ ದೇವಾಲಯ ಕಟ್ಟಿಸಲು ಸಾಧ್ಯವೇ? ಎನ್ನುವ ಬಸವಣ್ಣನವರ ಮಾತುಗಳಲ್ಲಿ ತಾನು ಬಡವ ಎನ್ನುವುದಕ್ಕಿಂತ ದೇವಾಲಯ ಕಟ್ಟಿಸುವವರನ್ನು ಎಚ್ಚರಿಸುವ ಭಾವವಿದೆ. ಬಸವಣ್ಣನವರೇನೂ ಬಡವರಾಗಿರಲಿಲ್ಲ, ಕಲ್ಯಾಣ ರಾಜ್ಯದ ಪಧಾನಿಯಾಗಿದ್ದ ಅವರಿಗೆ ಬಡತನವೆಂದರೆ ನಂಬಲು ಸಾಧ್ಯವಿಲ್ಲ. ಮನಸ್ಸು ಮಾಡಿದ್ದರೆ ಬೇಕಾದಲ್ಲಿ ಬೇಕಾದ ಹಾಗೆ ದೇವಾಲಯ ಕಟ್ಟಿಸುವ ಶಕ್ತಿ ಅವರಲ್ಲಿತ್ತು. ಹಾಗೆ ಕಟ್ಟಿಸಿದರೆ ಅವರನ್ನು ಯಾರೂ ತಪ್ಪಾಗಿ ಭಾವಿಸುತ್ತಿರಲಿಲ್ಲ. ಆಧರೆ ಅಂಥ ದೇವಾಲಯ ಕಟ್ಟಿಸಿ ಜನರನ್ನು ಪೂಜಾರಿ ಪುರೋಹಿತರ ಕಪಿಮುಷ್ಠಿಗೆ ಸಿಲುಕಿಸುವ ಮತ್ತು ಮಾನವ ಮಾನವರಲ್ಲೇ ಮೇಲು-ಕೀಳು ಪರಿಗಣಿಸುವ, ಶೋಷಣೆಗೆ ಕೇಂದ್ರವಾಗಿಸುವ ಬಯಕೆ ಬಸವಣ್ಣನವರಿಗಿರಲಿಲ್ಲ. ಹಾಗೆಂದಾಕ್ಷಣ ಗುಡಿ, ದೇವರ ಬೇಡು ಎಂದು ಅವರ ಅರ್ಥವಲ್ಲ. ಅವರು ಬಯಸುವ ದೇವಾಲಯ ವಿನೂತನವಾದುದು. ಆ ದೇವಾಲಯಕ್ಕೆ ಅವರ ಕಾಲುಗಳೇ ಕಂಬಗಳು, ದೇಹವೇ ದೇವಾಲಯದ ಗೋಡೆ, ತಲೆಯೇ ದೇವಾಲಯದ ಶಿಖರದ ಮೇಲಿರುವ ಚಿನ್ನದ ಕಳಸ ದೇಹವೆಂಬ ದೇವಾಲಯದಲ್ಲಿ ಅಡಗಿರುವ ಜೀವವೇ ಶಿವನು ಆ ಶಿವನ ಸಾಕ್ಷಾತ್ಕಾರ ಪಡೆಯುವುದೇ ಮಾನವನ ಪರಮಗುರಿ. ಇಂಥ ದೇವರನ್ನು ಕಾಣಲು, ಪೂಜಿಸಲು ಪೂಜಾರಿ-ಪುರೋಹಿತರೆಂಬ ಮಧ್ಯಸ್ಥರ ಅವಶ್ಯಕತೆ ಇಲ್ಲ. ದೇಹದಲ್ಲಿರುವ ಶಿವನನ್ನು ಮನ ಬಂದಾಗ, ತನಗಿಷ್ಟವಾದ ರೀತಿಯಲ್ಲಿ ತಾನೇ ಪೂಜಿಸಬಹುದು. ಗುಡಿಯ ದೇವರಂತೆ ಇಲ್ಲಿ ಪೂಜಾರಿ-ಭಕ್ತ-ದೇವರು ಬೇರೆಬೇರೆಯಲ್ಲ ಹೀಗೆ ಬಸವಣ್ಣನವರು ದೇಹವೇ ದೇವಾಲಯವೆಂದು ಬಣ್ಣಿಸಿದ್ದಾರೆ. ಸರ್ವಜ್ಞನು ಇದೇ ಅಭಿಪ್ರಾಯವನ್ನು ಬೇರೊಂದು ರೀತಿಯಲ್ಲಿ ಸಮರ್ಥಿಸುತ್ತಾನೆ.

ಆಗಿಲ್ಲ ಹೋಗಿಲ್ಲ ಮೇಗಿಲ್ಲ ಕೆಳಗಿಲ್ಲ
ತಾಗಿಲ್ಲ ತಪ್ಪು ತಡೆಹಿಲ್ಲ ಲಿಂಗಕ್ಕೆ
ದೇಗುಲವಿಲ್ಲ ಸರ್ವಜ್ಞ.

ಎಂದು ಹೇಳುತ್ತಾ ಮುಂದುವರಿದು ನುಡಿಯುತ್ತಾನೆ.

ದೇಹ ದೇವಾಲಯವು ಜೀವವೇ ಶಿವಲಿಂಗ
ಬಾಹ್ಯಂಗಳಳಿಂದು ಭಂಜಿವಂಗೆ ಮುಕ್ತಿ ಸಂ
ದೇಹವಿಲ್ಲೆಂದ ಸರ್ವಜ್ಞ.

ಎಂದು ಹೇಳಿ ಬಸವಣ್ಣನವರಂತೆ ಪರಮಾತ್ಮನ ಕಲ್ಪನೆಯನ್ನು ವಿಶಾಲವಾಗಿಸಿ, ಮತಾತೀತವಾದುದಾಗಿಸಿದ್ದಾನೆ. ದೇವರು ಸರ್ವವ್ಯಾಪಿಯಾಗಿರುವ ವಿಷಯವನ್ನು ತಿಳಿಸುತ್ತಾನೆ. ಹೀಗೆ ಇರ್ವರಲ್ಲೂ ದೇವರು-ದೇವಾಲಯಗಳ ಬಗ್ಗೆ ಸಮಾನ ಮನೋಧರ್ಮಗಳು ವ್ಯಕ್ತವಾಗಿವೆ.

ಮಾನವ ಸಮಾಜದ ಘಟಕ, ವ್ಯಕ್ತಿಯನ್ನು ಬಿಟ್ಟು ಸಮಾಜವು ಇರಲಾರದು. ಆದುದರಿಂದಲೇ ಬಸವಣ್ಣ ಹಾಗೂ ಸರ್ವಜ್ಞರು ತಮ್ಮ ವಚನಗಳಲ್ಲಿ ಉತ್ತಮ ಸಮಾಜದ ನಿರ್ಮಾಣಕ್ಕೆ ಬೇಕಾದಂತಹ ಜೀವನ ಮೌಲ್ಯಗಳನ್ನು ತಿಳಿಸಿದ್ದಾರೆ. ನೈತಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ವ್ಯಕ್ತಿಯು ಬೆಳೆದರೆ ಅವನಿಂದ ಸಮಾಜಕ್ಕೆ ಒಳ್ಳೆಯದಾಗುವುದು ಎಂಬ ಆಶಯ ಅವರದಾಗಿದೆ.

ಬಸವಣ್ಣನವರ ವಚನಗಳಲ್ಲಿ ಅಂದಿನ ಧಾರ್ಮಿಕ, ಸಾಮಾಜಿಕ ಹಿನ್ನೆಲೆಯ ಚಿತ್ರವು ಮೂಡಿ ಬಂದಿದೆ. ಅಪೇಕ್ಷಣೀಯವಲ್ಲದ ಅಂತಹ ಪರಿಸ್ಥಿತಿಯನ್ನು ಪಲ್ಲಟಿಸುವುದು ಬಸವಣ್ಣನ ಉದ್ದೇಶವಾಗಿತ್ತು. ಅಂತೆಯೇ ಸಮಾಜರಚನೆ, ಧರ್ಮ, ನೀತಿಗಳನ್ನು ಸರಳಗೊಳಿಸಿ, ಸಕಲ ಜೀವಾತ್ಮರ ಲೇಸನ್ನು ಸಾಧಿಸುವ ಸುಗಮ ಹಾದಿಯನ್ನು ಬಸವಣ್ಣನವರು ತಮ್ಮ ವಚನಗಳ ಮೂಲಕ ನಿರೂಪಿಸಿದ್ದಾರೆ. ಅಲ್ಲದೆ ಈ ವಚನಗಳು ಬಸವಣ್ಣನ ವ್ಯಕ್ತಿತ್ವದ ವಿಶೇಷವನ್ನು ಪ್ರತಿಬಿಂಬಿಸುವಂತೆಯೇ ಇವೆ. ಆಗ ವೇದಶಾಸ್ತ್ರ ಸ್ಮೃತಿಗಳ ತಿರುಳು ಹಿಂದೆ ಉಳಿದು ಬರಿಯ ಕರ್ಮಕಾಂಡಕ್ಕೆ ಪಂಡಿತರ ವಾದ ವಿವಾದಕ್ಕೆ ಮಹತ್ವ ಬಂದಿತ್ತು. ಅಂತೆಯೇ ಬಸವಣ್ಣ

ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತಿದೆ!
ವೇದ ಘನವೆಂಬೆನೆ? ಪ್ರಾಣವಧೆಯ ಹೇಳುತ್ತಿದೆ!
ಶ್ರುತಿ ಘನವೆಂಬೆನೆ? ಮುಂದಿಟ್ಟರಸುತ್ತಿದೆ!
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ,
ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು ಕೂಡಲಸಂಗಮದೇವನ!

ಎಂದು ಹೇಳಬೇಕಾಯಿತು. ಯಜ್ಞದ ಹೆಸರಿನಲ್ಲಿ ನಡೆಯುತ್ತಿದ್ದ ಪ್ರಾಣಿವಧೆಯು ಬಸವಣ್ಣನ ಹೃದಯವನ್ನು ಹಿಂಡಿತು. ಇಂತಹ ಬಸವಣ್ಣನವರ ವಚನಗಳ ಮಾದರಿಯಲ್ಲೇ ಸರ್ವಜ್ಞನ ವಚನಗಳು ಮೂಡಿ ಬಂದಿವೆ.

ವೇದವೇ ಹಿರಿದೆಂದು ವಾದವನು ಮಾಡುವಿರಿ
ವೇದದಲೇನು ಅರಿದಿಹುದು? ಅನುಭವಿಯ
ವೇದವೇ ವೇದ! ಸರ್ವಜ್ಞ.

ಓದು ವಾದಗಳಿಂದ ವೇದ ತಾ ಘನವಹುದೆ?
ವೇದದ ಹೃದಯವರಿಯದಲೆ ದ್ವಿಜರೆಲ್ಲ
ಬೂದಿಯಾಗಿಹರು! ಸರ್ವಜ್ಞ.

ಎಂದು ಅಂದಿನ ಸಮಾಜದಲ್ಲಿದ್ದ ಹೀನ ಸಂಸ್ಕೃತಿಯ ಕೊಳೆಯನ್ನು ತೆಗೆಯುವ ಕಾರ್ಯವನ್ನು ತನ್ನ ವಚನ. ರಚನೆಯ ಮೂಲಕ ಮಾಡಿ ಜಾಗೃತಿಯ ಬೀಜವನ್ನು ಬಿತ್ತ ಹೊರಟ ಸರ್ವಜ್ಞನ ಸಾಧನೆ ಅವಿಸ್ಮರಣೀಯವಾದುದು.

ಮಾನವನ ನಡೆ-ನುಡಿ ಗುಣಶೀಲಗಳ ಬಗ್ಗೆಯು ಬಸವಣ್ಣನವರು ಮಾತನಾಡಿದ್ದಾರೆ. ಇವೇ ಸಾಮಾಜಿಕ ಸಂಸ್ಕೃತಿಯೊಂದರ ಅಡಿಗಲ್ಲು ಎಂಬ ಭಾವನೆ ಅವರಲ್ಲಿದ್ದುದೇ ಇಂತಹ ವಚನಗಳ ರಚನೆಗೆ ಕಾರಣವಿರಬೇಕು ಎಂದೆನಿಸುತ್ತದೆ. ಸತ್ಯ, ಸದಾಚಾರ, ಅಹಿಂಸೆ, ಸಮಾನತೆ, ಜ್ಞಾನ, ಸಹನೆ-ಸಮಾಧಾನ, ದುರಾಶೆಯಿಂದ ಮುಕ್ತಿ, ವ್ಯಭಿಚಾರದಿಂದ ದೂರಾಗುವಿಕೆ, ದಾನ, ಲೋಭಿಯಾಗದಿರುವುದು, ನಿಷ್ಕಪಟಿ, ಸಭ್ಯವರ್ತಿಸಿ ಸ್ತ್ರೀಯರನ್ನು ಮನ್ನಿಸುವುದು, ಶರಣರನ್ನು ಮನ್ನಿಸುವುದು, ಪೂಜ್ಯರಲ್ಲಿ ಭಕ್ತಿ, ಸಜ್ಜನರ ಸಂಗದಿಂದ ದೊರೆಯುವ ಸುಖ, ತನು-ಮನ ಭಾವದಲ್ಲಿ ಶುದ್ಧತೆ ಶ್ರದ್ಧೆ, ಅಂಧಶ್ರದ್ಧೆಯಿಂದ ದೂರವಾಗುವಿಕೆ, ಇತ್ಯಾದಿ ಸಾಮಾಜಿಕ ಕಳಕಳಿಯ ಅಂಶಗಳು ಬಸವಣ್ಣ ಹಾಗೂ ಸರ್ವಜ್ಞರ ವಚನಗಳಲ್ಲಿ ಯಥೇಚ್ಛವಾಗಿ ನೋಡಬಹುದು. ಹನ್ನೆರಡನೆಯ ಶತಮಾನದ ಬಸವಣ್ಣನ ಈ ಎಲ್ಲಾ ಚಿಂತನೆಗಳು, ಸಾಮಾಜಿಕ ಕಳಕಳಿಯ ಅಂಶಗಳೆಲ್ಲಾ ಹದಿನಾರನೆಯ ಶತಮಾನದ ಸರ್ವಜ್ಞನೆಂಬ ಉತ್ತರಾಧಿಕಾರಿಯಲ್ಲಿ ಮಗದೊಮ್ಮೆ ಪಲ್ಲವಿಸುದುದು ಜನಸಾಮಾನ್ಯರ ಅದೃಷ್ಟವೇ ಸರಿ.

ಸತ್ಯವನ್ನು ಕುರಿತಂತೆ- ಸದಾ ಜನರು ಸತ್ಯವಂತ ಪ್ರಾಮಾಣಿಕ ಮನೋಭಾವದವರಾಗಿರ ಬೇಕೆಂಬ ಆಶಯವನ್ನು ಬಸವಣ್ಣನವರು ಬೋಧಿಸಿದರು ಅದರಂತೆ

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿ ಭೋ!
ಸತ್ಯವ ನುಡಿವುದೆ ದೇವಲೋಕ; ಮಿಥ್ಯವ ನುಡಿವುದೆ ಮರ್ತ್ಯಲೋಕ.
ಆಚಾರವೆ ಸ್ವರ್ಗ; ಅನಾಚಾರವೇ ನರಕ
ಕೂಡಲಸಂಗಮದೇವಾ, ನೀವೆ ಪ್ರಮಾಣು.

ಎಂದು ಸರಳವಾದ ರೀತಿಯಲ್ಲಿ ಸತ್ಯದ ಮಹತ್ವವನ್ನು ತಿಳಿಸಿದರೆ ಸರ್ವಜ್ಞನು ಸತ್ಯವು ಶೀಲದ ತಿರುಳು ಎಂದು ತನ್ನ ವಚನದಲ್ಲಿ

ಸತ್ಯರಿಗೆ ಧರೆಯೆಲ್ಲ ಮಸ್ತಕವನೆರಗುವುದು
ಹೆತ್ತ ತಾಯಿ ಮಗನ ಕರೆವಂತೆ ಸ್ವರ್ಗದವ
ರಿತ್ತ ಬಾರೆಂಬರು ಸರ್ವಜ್ಞ.

ಎಂದು ಹೇಳಿ ಬಸವಣ್ಣನವರಂತೆಯೇ ಸತ್ಯವಂತರಿಗೆ ಎಂದಿಗೂ ಸಮಾಜದಲ್ಲಿ ಬೆಲೆ ಎಂಬ ಮಾತನ್ನು ನುಡಿದಿರುವನು.

ಮನುಷ್ಯನ ಗುಣಶೀಲಗಳು ನಿರ್ಧಾರವಾಗುವುದು ಅವನ ನಡೆ-ನುಡಿಗಳಿಂದ ಎಂದು ಅರಿತ ಸರ್ವಜ್ಞನು ಸದಾಚಾರದ ಬದುಕಿಗೆ ಹೆಚ್ಚಿನ ಮನ್ನಣೆ ನೀಡುತ್ತಾನೆ, ಅವನ ಅಳಿವು-ಉಳಿವುಗಳೂ ಅವುಗಳಿಂದಲೇ ಎಂದು

ಕಣ್ಣು ನಾಲಗೆ ಮನವು ತನ್ನವೆಂದೆನಬೇಡ
ಅನ್ಯರು ಕೊಂದರೆನಬೇಡ ಇವು ಮೂರು
ತನ್ನನ್ನೇ ಕೊಲುಗು ಸರ್ವಜ್ಞ

ಹೇಳಿದರೆ,

ಇದೇ ನಿಲುವು ಬಸವಣ್ಣನವರಲ್ಲಿ ಹೀಗೆ ವ್ಯಕ್ತವಾಗುತ್ತದೆ

ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದಡೆ
ಹಿಡಿದಿರ್ದ ಲಿಂಗವು ಘಟಸರ್ಪನಯ್ಯಾ,
ನುಡಿಯಲು ಬಾರದು, ನಡೆಯಲು ಬಾರದು,
ಲಿಂಗದೇವನೆ ದಿಬ್ಯವೂ ಅಯ್ಯಾ
ಬಡವನ ಕೋಪ ಅವುಡಿಗೆ ಮೃತ್ಯುವಾದಂತೆ
ಕಡೆದಾಂಟದು, ಕಾಣಾ, ಕೂಡಲಸಂಗಮದೇವಾ.

ಎಂದು ನಡೆನುಡಿಗಳ ಸಾಮರಸ್ಯದ ಬಗ್ಗೆ ತಿಳಿಯಪಡಿಸುತ್ತಾರೆ.

ಸಾಮಾಜಿಕ ನೆಲೆಯಲ್ಲಿ ವಾಸಿಸುವ ಬಹುತೇಕ ಮೌಲ್ಯಗಳಲ್ಲಿ ಅಹಿಂಸೆಗೆ ಬಸವಣ್ಣ ಹಾಗೂ ಸರ್ವಜ್ಞರು ಪರಮೋಚ್ಚ ಸ್ಥಾನ ನೀಡಿದ್ದಾರೆ. ಬಸವಣ್ಣನವರು ಜೀವಹಿಂಸೆ ಮಾಡಬೇಡ ಎಂದು ಹೇಳುವಾಗ ಧರ್ಮವನ್ನು ಆಶ್ರಯಿಸಿ ಹೀಗೆ ಹೇಳುತ್ತಾರೆ.

ದಯವಿಲ್ಲದ ಧರ್ಮವದೇವುದಯ್ಯಾ
ದಯವೇ ಬೇಕು ಸಕಲಪ್ರಾಣಿಗಳೆಲ್ಲರಲ್ಲಿಯು.
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.

ಎಂದು ಅಹಿಂಸೆಯ ವ್ಯಾಖ್ಯಾನ ಮಾಡಿದರೆ, ಸರ್ವಜ್ಞನ ಅಹಿಂಸಾ ಧರ್ಮದ ತಿರುಳನ್ನು ನುಡಿದು ಬೆಳೆಸುತ್ತಾನೆ. ಜೀವದಯೆಯೇ ಒಂದು ಬಹುಮುಖ್ಯವಾದ ಜೀವನ ಮೌಲ್ಯವೆಂದು ನಂಬಿದ ಸರ್ವಜ್ಞನು

ಕೊಂದು ಮಾಡುವ ಭಕ್ತಿಯಂದವೆಂತೆನೆ ಪೇಳ್ವೆ
ಗಂಧದ ಮರನ ನೆರೆ ಸುಟ್ಟು ಇದ್ದಿಲನು

ತಂದು ಪೂಸುವರೆ ಸರ್ವಜ್ಞ.

ಎಂದು ಹೇಳಿ ಕೊಲ್ಲದಿಷ್ಟಾಧರ್ಮವು ಎಲ್ಲರಿಗೂ ಇಷ್ಟ ಎಂದು ಹೇಳುತ್ತಾನೆ.

ದಾನಗುಣವೆಂಬ ಮೌಲ್ಯದ ಕಳಕಳಿಯನ್ನು ಇಬ್ಬರು ವಚನಕಾರರು ಸಮಯೋಚಿತವಾಗಿಯೇ ನುಡಿದಿದ್ದಾರೆ. ಬಸವಣ್ಣನವರು ದಾನದ ಪ್ರಸ್ತಾಪ ಮಾಡುವಾಗ ಕಾಗೆ-ಕೋಳಿಗಳ ಉದಾಹರಣೆಯನ್ನು ಕೊಡುತ್ತಾರೆ.

ಬಸವಣ್ಣನವರು

ಆಯುಷ್ಯವುಂಟು ಪ್ರಳಯವಿಲ್ಲೆಂದು ಅರ್ಥವ ಮಡುಗುವಿರಿ
ಆಯುಷ್ಯವು ತೀರಿ ಪ್ರಳಯ ಬಂದಡೆ ಅರ್ಥವನುಂಬವರಿಲ್ಲ.
ನೆಲನನಗೆಂದು ಮಡಿಗದಿರಾ- ನೆಲ ನುಂಗಿದಡುಗುಳುವುದೆ?
ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆರಹಿ, ಉಣ್ಣದೆ ಹೋಗದಿರಾ!
ನಿನ್ನ ಮಡದಿಗಿರಲೆಂದಡೆ, ಮಡದಿಯ ಕೃತಕ ಬೇರೆ
ನನ್ನೊಡಲು ಕಡೆಯಲು ಮತ್ತೊಬ್ಬನಲ್ಲಿ ಗಡಕದೆ ಮಣ್ಣಳೆ?
ಹೆರರಿಗಿಕ್ಕಿ ಹೆಗ್ಗುರಿಯಾಗಿ ಕೆಡ ಬೇಡ
ಕೂಡಲಸಂಗನ ಶರಣರಿಗೆ ಒಡನೆ ಸಮೆಸುವುದು.

ಎಂದು ಮನಮುಟ್ಟುವಂತೆ ದಾನ ವಿಚಾರವನ್ನು ಅರುಹಿದರೆ, ಸರ್ವಜ್ಞನಲ್ಲಿ ದಾನ ಹಿರಿಮೆ ತುಂಬ ವಿಸ್ತಾರವಾಗಿ ಬಣ್ಣಿಸಲ್ಪಟ್ಟಿದೆ. ದಾನ ಮಾಡುವುದು ಧಾರ್ಮಿಕನ ಕರ್ತವ್ಯಗಳಲ್ಲಿ ಒಂದು ಎಂಬುದು ಆಗಿನ ಸಮಾಜದಲ್ಲಿ ರೂಢವಾಗಿದ್ದರೂ, ದಾನ ಮಾಡಲು ಜನ ಹೇಗೆ ಹಿಂಜರಿಯುತ್ತಾರೆ ಎಂಬುದನ್ನು ತುಂಬಾ ಮಾರ್ಮಿಕವಾಗಿ ಚಿತ್ರಿಸಿದ್ದಾನೆ.

ದಾನವೆಂದರೆ ತಲೆಯ ಜಾಣದಲಿ ಕಡಿದಂತೆ
ತಾನೊಂದು ತಪ್ಪು ಮಾಡಿದರೆ ನೂರಾರ
ಮೌನದಲಿ ತೆರುವ ಸರ್ವಜ್ಞ.

ಇನ್ನೂ ಕೆಲವರು ದಾನವನ್ನೇನೊ ಮಾಡುತ್ತಾರೆ ಆದರೆ ಆ ಮೇಲೆ ಮರ ಮರ ಮರಗುತ್ತಾರೆ. ಇಂಥವರನ್ನು ಸಂದರ್ಶಿಸಿದ ಸರ್ವಜ್ಞನು ಹೇಳುತ್ತಾನೆ-

ಕೊಟ್ಟು ಕುದಿಯಲು ಬೇಡ ಕೊಟ್ಟು ಮರುಗಲು ಬೇಡ
ಕೊಟ್ಟು ನಾ ಕೆಟ್ಟೆನೆನ ಬೇಡ ಶಿವನಲ್ಲಿ
ಕಟ್ಟಿಹುದು ಬುತ್ತಿ ಸರ್ವಜ್ಞ.

ಮುಂದುವರಿದು ದಾನವನ್ನು ಎಷ್ಟಾದರೂ ಕೊಡಲಿ! 'ಕೊಟ್ಟಿದ್ದನ್ನು ಆಡದೆ ಕೊಡುವವನು ರೂಢಿಯೊಳಗುತ್ತಮನು' ಎಂದಿರುವುದಲ್ಲದೆ ದಾನಗಳಲ್ಲೆಲ್ಲ ಶ್ರೇಷ್ಠವಾದದಾನ ಅನ್ನದಾನವೇ ಎಂದು ಹೇಳಿ

ಅನ್ನದೇವರ ಮುಂದೆ ಇನ್ನು ದೇವರು ಉಂಟೆ
ಅನ್ನವಿರುವತನಕ ಪ್ರಾಣವು- ಜಗದೊಳ
ಗನ್ನವೇ ದೈವ ಸರ್ವಜ್ಞ

ಎಂದು ಹೇಳಿ ಬಸವಣ್ಣನವರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ದಾನವ ಮಹತ್ವವನ್ನು ಎತ್ತಿ ಹಿಡಿದಿರುವನು.

ಬಸವಣ್ಣನವರು ಸ್ತ್ರೀಯರಿಗೆ ಪೂಜ್ಯ ಸ್ಥಾನ ಕೊಟ್ಟಿದ್ದರು. ವಾಸ್ತವವಾಗಿ ಯತ್ರ ನಾರ್ಯಸ್ತು ಪೂಜ್ಯಂತೇ......... ಎಂಬ ಉಕ್ತಿ ಸಾರ್ಥಕವಾದುದು ಬಸವೇಶ್ವರ ಕಾಲದಲ್ಲಿ ಎನ್ನಬೇಕು. ಅವರು ಮಹಿಳೆಯರನ್ನು ಪುರುಷರಿಗೆ ಸರಿಸಮಾನಳನ್ನಾಗಿ ಭಾವಿಸಿದರು ಇದಕ್ಕೆ ಮುಖ್ಯ ಕಾರಣ ಬಸವಣ್ಣನವರ 'ಶರಣಸತಿ- ಲಿಂಗಪತಿ ಭಾವ'.

ಸಕಲ ಕ್ಷೇತ್ರಗಳಲ್ಲೂ ಸ್ತ್ರೀ ಪುರುಷನಿಗೆ ಸಮಾನಳು ಎಂಬ ಅಂಶವನ್ನು ಅವರು ತಿಳಿಸಿ ಅನುಭವ ಮಂಟಪದಲ್ಲಿ ಸ್ತ್ರೀಯರಿಗೊಂದು ಬಹುಮುಖ್ಯ ಸ್ಥಾನ ಕೊಟ್ಟರು. ಸಂಸಾರದಲ್ಲಿದ್ದುಕೊಂಡೆ ಅವರು ದೇವರಿಗೆ ಪ್ರಿಯವಾಗುವ ಮಾರ್ಗದರ್ಶನವನ್ನು ನೀಡಿದರು, ಉದ್ಧರಿಸಿದರು. ಹೆಣ್ಣು ಗಂಡಿಗೆ ಪೂರಕವೆಂದು, ಗಂಡು ಪೆಣ್ಣಿಗೆ ಪೂರಕವೆಂದೂ- ಸಮಾಜಕ್ಕೆ ಅವರಿಬ್ಬರೂ ರೆಕ್ಕೆಗಳೆಂದು ಅವರು ಸ್ಪಷ್ಟ ಪಡಿಸಿದರು. ಈ ಹಿನ್ನೆಲೆಯಲ್ಲಿ ಸ್ತ್ರೀಯರಿಗೆ ಮನ್ನಣೆ ಸಿಗಬೇಕೆಂದು ತಿಳಿಸಿ.

'ಪರವಧುವನ್ನು ಮಹಾದೇವಿಯೆಂಬೆ' ಎಂದು ಸ್ತ್ರೀಯರನ್ನು ಗೌರವದಿಂದ ಕಾಣಬೇಕೆಂದು ಕರೆಕೊಟ್ಟರು. ಆದಕ್ಕಾಗಿ ಅವರು

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ
ಛಲಬೇಕು ಶರಣಂಗೆ ಲಿಂಗಜಂಗಮ ಒಂದೆ ಎಂಬ
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ
ಛಲವಿಲ್ಲದವರ ಮೆಚ್ಚ, ಕೂಡಲಸಂಗಮದೇವ.

ಈ ವಚನದಲ್ಲಿ ಛಲ ಎಂಬುದು ಮನುಷ್ಯನಿಗೆ ಅತ್ಯಗತ್ಯ ಎಂದು ಹೇಳುವ ಸಂದರ್ಭದಲ್ಲಿ ಪರಸತಿಯನೊಲ್ಲೆನೆಂಬ ಛಲಬೇಕು ಎಂದು ಹೇಳಿರುವುದು ಪರಸ್ತ್ರೀಗೆ ಅವರು ನೀಡಿದ ಸ್ಥಾನವನ್ನು ತಿಳಿಸುತ್ತದೆ. ಮುಂದೆ ಅವರೆ

ತೊರೆಯ ಮೀವ ಅಣ್ಣಗಳಿರಾ, ತೊರೆಯ ಮೀವ ಸ್ವಾಮಿಗಳಿರಾ,
ತೊರೆಯಿಂ ಬೋ, ತೊರೆಯಿಂ ಬೋ;
ಪರನಾರಿಯರ ಸಂಗವ ತೊರೆಯಿಂ ಬೋ!
ಪರಧನದಾಮಿಷವ ತೊರೆಯಿಂ ಬೋ!

ಇವ ತೊರೆಯದೆ ಹೋಗಿ ತೊರೆಯ ಮಿಂದಡೆ,

ಬರುದೊರೆ ಹೋಹುದು, ಕೂಡಲಸಂಗಮದೇವಾ.

ಎಂದು ಉಪದೇಶಿಸುತ್ತಾರೆ. ಇದೇ ವಿಚಾರವಾಗಿ ಸರ್ವಜ್ಞನು ಹೀಗೆ ನುಡಿಯುತ್ತಾನೆ. ಕೌಟುಂಬಿಕ ಜೀವನದಲ್ಲಿ ಶಾಂತಿ ಸಮಾಧಾನಗಳನ್ನು ನೆಲೆಗೊಳಿಸುವವಳು ಸ್ತ್ರೀಯಲ್ಲವೆ ಮತ್ತಾರಲ್ಲ. ಅವನಲ್ಲಿ ಸ್ತ್ರೀಯ ಮಹಿಮೆ ವಿಶೇಷವಾಗಿ ಮೂಡಿ ಬಂದಿದೆ.

ಹೆಣ್ಣಿನಿಂದಲೆ ಇಹವು ಹೆಣ್ಣಿನಿಂದಲಿ ಪರವು

ಹೆಣ್ಣಿಂದ ಸಕಲ ಸಂಪದವು ಹೊಣ್ಣೊಲ್ಲ

ದಣ್ಣಗಳು ಎಲ್ಲಿ ಸರ್ವಜ್ಞ

ಹಾಗೆಯೇ ಹೆಣ್ಣನ್ನು ಮನ್ನಿಸದಿದ್ದರೆ ಆಗುವ ಅನಾಹುತವನ್ನು ತೆರೆದಿಡುವ ಪ್ರಯತ್ನ ಮಾಡುತ್ತಾನೆ.

ನಾರಿ ಪರರುಪಕಾರಿ ನಾರಿ ಸ್ವರ್ಗಕ್ಕೆ ದಾರಿ

ನಾರಿ ಸಕಲರಿಗೆ ಹಿತಕಾರಿ ಮುನಿದರೆ

ನಾರಿಯೇ ಮಾರಿ ಸರ್ವಜ್ಞ

ಎಂದು ಹೇಳುತ್ತಾನೆ.

ಬಸವಣ್ಣನವರು ಪರಸ್ತ್ರೀಯರ ಬಗ್ಗೆ ಗೌರವತಾಳಬೇಕು ಎಂಬ ಅಂಶವನ್ನು ಸಾರಿದರೆ, ಸರ್ವಜ್ಞನು ಸ್ತ್ರೀಯಿಂದಲೇ ಸರ್ವಸಂಪದವು ಎಂದು ಹೇಳಿ ಅವಳಿಗೆ ಮನ್ನಣೆ ನೀಡದಿದ್ದರೆ ಅವಳೇ ಮುನಿದು ಮಾರಿಯಾಗಿ ನಾಶಕ್ಕೂ ಕಾರಣಳಾಗುತ್ತಾಳೆ ಎಂದು ತಿಳಿಸುತ್ತಾನೆ.

ಅಂದಿನ ಸಾಮಾಜಿಕ ಸಂದರ್ಭವನ್ನು ಸಶಕ್ತವಾಗಿ ಚಿತ್ರಿಸುವ ಬಸವಣ್ಣನವರ ಈ ಕೆಳಕಂಡ ವಚನವು ಮನುಷ್ಯ ಸಂಬಂಧಗಳು ವಿಕೃತಗೊಂಡು, ಕುಸಿಯುತ್ತಿದ್ದ ಸಮಾಜ ವ್ಯವಸ್ಥೆಯಲ್ಲಿ ಪರಕೀಯತೆಯಲ್ಲಿ ನರಳುವ ಮನುಷ್ಯನ ಹೃದಯ ವಿದ್ರಾವಕ ಸ್ಥಿತಿಯನ್ನು ಹೇಳುತ್ತದೆ.

ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ

ನೆಲ ಹತ್ತಿ ಉರಿದಡೆ ನಿಲಲು ಬಹುದೆ?

ಏರಿ ನೀರುಂಬಡೆ ಬೇಲಿ ಕಯ್ಯ ಮೇವಡೆ,

ನಾರಿ ತನ್ನ ಮನೆಯಲ್ಲಿ ಕಳುವಡೆ,

ತಾಯ ಮೊಲೆವಾಲು ನಂಜಾಗಿ ಕೊಲುವಡೆ

ಇನ್ನಾರಿಗೆ ದೂರುವೆನಯ್ಯಾ ಕೂಡಲಸಂಗಮದೇವಾ?

ಎಂಬ ವಚನವು ಬಸವಣ್ಣನವರಿಗಿದ್ದ ಸಾಮಾಜಿಕ ಕಳಕಳಿಯನ್ನು ಧ್ವನಿಯುಕ್ತವಾಗಿ ಪ್ರತಿಪಾದಿಸುತ್ತದೆ. ಅದೇ ಸರ್ವಜ್ಞನಲ್ಲಿ

ಹಿಂದೆ ಪಾಪವ ಮಾಡಿ ಮುಂದೆ ಪುಣ್ಯವು ಹೇಗೆ?

ಹಿಂದೆ ಮುಂದರಿದು ನಡೆಯದಿರೆ ನರಕದಲಿ
ಬೆಂದು ಸಾಯುವರು ಸರ್ವಜ್ಞ

ಇಬ್ಬರಲ್ಲೂ ಒಂದಲ್ಲ ಒಂದು ವಿಷಯದಲ್ಲಿ ಸಾಮಾಜಿಕ ಕಳಕಳಿಯನ್ನು ಬಿಂಬಿಸುತ್ತವೆ.

ಸರ್ವಜ್ಞ ವಚನ ವಾಙ್ಮಯದಲ್ಲಿ ಆಳವಾಗಿ ಮುಳುಗಿದವನು. ಅವನ ಕೃತಿ ರಚನೆಯ ಸಮಯದಲ್ಲಿ ಅವನಿಗರಿವಿಲ್ಲದೆಯೇ ಉಕ್ತಿಗಳು ಮತ್ತು ಭಾವಗಳು ವಚನ ವಾಙ್ಮಯದಿಂದ ನುಸುಳಿ ಬಂದಿವೆ. ಇಡೀ ಆಲೋಚನಾ ವಿಧಾನ ಮತ್ತು ಜೀವನ ದೃಷ್ಟಿಗಳನ್ನು ರೂಪಿಸಿದ್ದೇ ವಚನ ವಾಙ್ಮಯ.

ಸರ್ವಜ್ಞನಲ್ಲಿ ಅಲ್ಲಮನ ನಿಷ್ಠುರ್ಯವಿದೆ, ಸ್ವಾಭಿಮಾನವಿದೆ, ಕೆಟ್ಟಗುಣವಿದೆ. ಆದರೆ ಬಸವಣ್ಣನ ವಿನಯವಾಗಲಿ, ಅಕ್ಕನ ಮಾರ್ದವತೆಯನ್ನಾಗಲಿ ಅವನಲ್ಲಿ ಕಾಣಲು ಸಾಧ್ಯವಿಲ್ಲ ಕಾವ್ಯಗುಣದ ದೃಷ್ಟಿಯಿಂದ ಸರ್ವಜ್ಞ ಬಸವಣ್ಣನವರನ್ನು ಹೋಲುತ್ತಾನೆ. ಇಬ್ಬರದೂ ನಿಜವಾದ ಕವಿ ಹೃದಯ. ವಚನಕಾರರಲೆಲ್ಲ ಬಸವಣ್ಣನವರ ಪ್ರಭಾವ ಸವಜ್ಞನ ಮೇಲೆ ಅಪರಿಮಿತವಾಗಿದೆ. ಸರ್ವಜ್ಞನು ಮಾನಸಿಕವಾಗಿ ವಚನಕಾರರ ಕಾಲದವನು, ಆಲೋಚನೆಯಲ್ಲಿ ಅವರ ಕ್ರಾಂತಿಯ ಯುಗಕ್ಕೆ ಸೇರಿದವನು. ಆದರೆ ಇದ್ದದ್ದು ವಚನಕಾರ ವೈಚಾರಿಕ ಪ್ರಖರತೆ ತಣ್ಣಗಾದ ಕಾಲದಲ್ಲಿ. ಅಂತೆಯೇ ಬಸವಣ್ಣ ಹಾಗೂ ಸರ್ವಜ್ಞರದು ಸರ್ವಾಂಗಸುಂದರ ಸಮಾಜ ರಚನೆಯ ಯೋಜನೆಯಾಗಿತ್ತು. ಅದಕ್ಕಾಗಿ ಇಬ್ಬರೂ ತಮ್ಮ ತಮ್ಮ ಕಾಲದಲ್ಲಿ ಪ್ರಚಲಿತವಿದ್ದ ವಿವಿಧ ಸಮಾಜದ ನ್ಯೂನತೆಗಳನ್ನು ನಿವಾರಿಸಿ, ಒಂದು ಹೊಸ ಸಮಾಜರಚನೆಯ ಕಾರ್ಯವನ್ನು ಕೈಕೊಂಡರು.

ಅಧ್ಯಾಯ - ೬

ಸಮಾರೋಪ

ಬಸವಣ್ಣ ಮತ್ತು ಸರ್ವಜ್ಞರು ಸಮಾಜದ ಉದ್ಧಾರವನ್ನು ಬಯಸಿದ ಮಹಾನ್ ಚಿಂತಕರು. ಇವರಿಬ್ಬರ ಸಾಮಾಜಿಕ ಕಳಕಳಿಯಲ್ಲಿ ಬಹುಪಾಲು ಸಾಮ್ಯತೆಗಳೂ, ಕೆಲವು ಭಿನ್ನತೆಗಳೂ ಇವೆ. ಬಸವಣ್ಣ ಹಾಗೂ ಸರ್ವಜ್ಞ ಇಬ್ಬರೂ ತಮ್ಮ ವಚನಗಳಲ್ಲಿ ತಮ್ಮ ಕಾಲದ ಸಮಾಜದ ಚಿತ್ರಣವನ್ನು ಕಂಡರಿಸಿದ್ದಾರೆ.

ಹನ್ನೆರಡು, ಹದಿನೈದನೆಯ ಶತಮಾನದಲ್ಲಿ ಬದುಕಿ ಸಮಾಜ ಚಿಂತನೆಗೈದ ಈ ಇರ್ವರೂ ವಚನಕಾರರ ವಚನಗಳು ಇಂದಿಗೂ ಜನಸಾಮಾನ್ಯರ ನಾಲಿಗೆಯ ಮೇಲೆ ನರ್ತನಗೈಯ್ಯುತ್ತಿರುವುದು ಅವರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಬಸವಣ್ಣನವರ ಧ್ಯೇಯ, ಧೋರಣೆಗಳನ್ನೇ ಬಹುಪಾಗಿ ನಾವು ಸರ್ವಜ್ಞನಲ್ಲೂ ಕಾಣಬಹುದಾಗಿದೆ. ಸತ್ಯ, ಅಸಿಭಾವ, ನುಡಿದಂತೆ ನಡೆಯುದು, ಇದ್ದುದನ್ನು ಇದ್ದಹಾಗೆಯೇ ತಿಳಿಸಿ ಹೇಳಿದ್ದು, ಅವರ ಜೊತೆಜೊತೆಯೇ ಇದ್ದುಕೊಂಡು ಜನಸಾಮಾನ್ಯರ ಭಾವ ಮಿಡಿತಗಳಿಗೆ ಸ್ಪಂದನ ನೀಡಿದ್ದು, ಅವರಿಗೆ ಇಂದಿಗೂ ಎಲ್ಲಿಲ್ಲದ ಮಾನ್ಯತೆ ಮತ್ತು ಪುರಸ್ಕಾರ ಸಿಗಲು ಕಾರಣಗಳಾಗಿವೆ.

ಅವರಿಗೆ ತಿಳಿಯುವ ತಿಳಿಯಾದ ಭಾಷೆಯಲ್ಲಿ ತಿಳಿಸುತ್ತ ಆ ಮೂಲಕ ಸಾಮಾಜಿಕ ಅನಿಷ್ಟ ಪದ್ಧತಿಗಳ ವಿರುದ್ಧ ಪ್ರತಿಭಟಿಸುತ್ತಾ ವ್ಯಕ್ತಿಯ ಉನ್ನತಿಗೆ ಮಾರ್ಗದರ್ಶಕರಾಗಿ ದುಡಿದ ಇವರು ಜಿಡ್ಡುಗಟ್ಟಿದ ಸಂಪ್ರದಾಯಗಳ, ಪಟ್ಟಭದ್ರರ ಹಿಡಿತಗಳಿಂದ, ಪುರೋಹಿತ ಶಾಹಿಯ ಕಪಿಮುಷ್ಠಿಯಿಂದ, ಜನ ಜೀವನವೆಲ್ಲಾ ಉಸಿರುಕಟ್ಟಿ ಸಾಯುವಂತಾಗಿದ್ದ ಸಂದರ್ಭದಲ್ಲೇ ಅದರ ವಿರುದ್ಧ ಪ್ರತಿಭಟಿಸಿ ಸಾಮಾನ್ಯ ಜನರ ಒಳಿತಿಗಾಗಿ ಶ್ರಮಿಸಿದರು. ಅಂದು ಸಮಾನತೆ ನೆಲೆಗೊಳ್ಳದೆ ಎಲ್ಲೆಡೆಯೂ ಅಸಮಾನತೆಯು ಹೊಗೆಯಾಡುತ್ತಿತ್ತು. ಧಾರ್ಮಿಕ ಕ್ಷೇತ್ರವಂತೂ ಕೆಲವೇ ಕೆಲವರ ಹಿಡಿತಕ್ಕೊಳಗಾಗಿ ಬಹುಜನರ ಶೋಷಣೆಗೆ ಕಾರಣವಾಗಿತ್ತು. ಸಾಮಾಜಿಕ ಕಳಕಳಿಯ ಭಾಗವಾದ ಜೀವನ ಮೌಲ್ಯಗಳು ಗಾಳಿಯ ಪಾಲಾಗಿದ್ದವು. ಬದುಕಿಗೆ ಮಾರಕವಾಗಿದ್ದ ಎಲ್ಲ ಅಂಶಗಳನ್ನು ಕುಟ್ಟಿ ನೆಲಸಮ ಮಾಡಿ ಸಮಷ್ಟಿ ಹಿತವನ್ನುವ ಕಾಯುವಂತಹ ಜೀವನ- ಸಾಮಾಜಿಕ ಮೌಲ್ಯಗಳನ್ನು ಜನಮನದಲ್ಲಿ ಬಿತ್ತುವ ತುರ್ತು ಅಗತ್ಯವಿತ್ತು. ಅಂದಿನ ಅವ್ಯವಸ್ಥೆಯೇ ಸುವ್ಯವಸ್ಥೆಯನ್ನು ತರುವ ವ್ಯಕ್ತಿತ್ವಗಳಿಗಾಗಿ ಹುಡುಕಾಟ ನಡೆಸಿತ್ತು. ಅಂಥ ಸಂದರ್ಭಗಳಲ್ಲಿ ಮುಂದೆ ಬಂದವರು ಬಸವಣ್ಣ ಹಾಗೂ ಸರ್ವಜ್ಞ, ಇವರ ಮಾರ್ಗದರ್ಶನ ಹಾಗೂ ಪ್ರೇರಣೆಯಿಂದ ಇವರ ಜೊತೆ ಅನಾ ಕಾಲಘಟ್ಟದಲ್ಲಿ ಅವಕಾಶಗಳಿಂದ ವಂಚಿತರಾಗಿ ತುಳಿತಕ್ಕೊಳಗಾದವರು, ಸಮುದಾಯದ ಕಳಕಳಿಯುಳ್ಳ ಸಮಾನ ಮನೋಧರ್ಮದವರು ಬೆರೆತು ಸಂಘಟಿತರಾಗಿ ಹೊಸ ಸಮಾಜದ ಹೊಳವು ಹಾಕಿದರು. ತಮ್ಮ ಮನಸ್ಸಿನಲ್ಲಿದ್ದ ಸುಂದರ ಸಮಾಜವನ್ನು ಕಟ್ಟಲು ಪ್ರಾಮಾಣಿಕ ಪ್ರಯತ್ನ ಮಾಡಿದರು.

ಸಮಾಜ ಸುಧಾರಣೆಯ ತನ್ನ ಕಾರ್ಯದಲ್ಲಿ ಎಷ್ಟೇ ಅಡ್ಡಿ ಆತಂಕಗಳ ಎದುರಾದರೂ

ಇವರೀರ್ವರೂ ಯಾವುದಕ್ಕೂ ಜಗ್ಗದೆ ಮುನ್ನಡೆದರು. ಇವರಿಗೆ ವೈಯಕ್ತಿಕ ಸುಖವಾಗಲಿ, ಕೇವಲ ಪರರ ಚಿಂತನೆಯಾಗಲಿ ಇರಲಿಲ್ಲ. ತಾವು ಪ್ರೀತಿಸುವ, ಟೀಕಿಸುವ, ಗೌರವಿಸುವ ಜನರ ಬದುಕು ಸಹನೀಯವಾಗಬೇಕೆಂಬುದು ಇವರ ಹಂಬಲವಾಗಿತ್ತು. ಹೀಗಾಗಿ ಇವರ ಸಾಮಾಜಿಕ ಕಳಕಳಿಗಳು ಶುದ್ಧವಾದ ಮಾನವ ಪ್ರೀತಿಯಿಂದ ಮೂಡಿ ಬಂದವುಗಳೇ ಹೊರತು ಮತೀಯವಾದವುಗಳಲ್ಲ.

ಬಸವಣ್ಣನವರ ನಂತರ ಅವರಂತೆ ಸಾಮಾಜಿಕ ಆಂದೋಲನಕಾರ ಹುಟ್ಟಲು ಏನಿಲ್ಲವೆಂದರೂ ನಾಲ್ಕುನೂರು ವರ್ಷ ಕಾಯಬೇಕಾದುದು ಒಂದು ವಿಪರ್ಯಾಸ. ಆದ್ದರಿಂದಲೇ ಸರ್ವಜ್ಞನನ್ನು ವಚನಕಾರರ ಉತ್ತರಾಧಿಕಾರಿ ಎಂದು ಕರೆಯುವುದರಲ್ಲಿ ಅರ್ಥವಿದೆ. ಸರ್ವಜ್ಞ ವಚನಗಳನ್ನು ಬರೆದಿದ್ದರೂ ಅವನವು ವಚನಗಳಲ್ಲಿ ತ್ರಿಪದಿ ಪದ್ಯಗಳು. ವಚನ ರಚನೆಯ ದೃಷ್ಟಿಯಿಂದ ತೋಂಟದ ಸಿದ್ದಲಿಂಗ ಮುಂತಾದವರು ವಚನಕಾರರ ಉತ್ತರಾಧಿಕಾರಿಗಳು ಸರ್ವಜ್ಞನಲ್ಲ. ಆದರೆ, ಯಾವ ಸಾಮಾಜಿಕ ಕಳಕಳಿ, ಪ್ರತಿಭಟನೆ, ಸಿಡಿತ, ತುಡಿತ, ಕೋಪ, ಕೆಳವರ್ಗದವರಿಗಾಗಿ ಮಿಡಿತ, ವ್ಯವಸ್ಥೆಯ ಬಗ್ಗೆ ಪ್ರತಿರೋಧಗಳಿಗೆ ವಚನಕಾರರು ಸಂಕೇತವಾಗಿರುವರೋ ಆ ಒಟ್ಟು ದೃಷ್ಟಿಯಿಂದ ಸರ್ವಜ್ಞನೇ ವಚನಕಾರರ ನಿಜವಾದ ಉತ್ತರಾಧಿಕಾರಿಯೆನಿಸಿಕೊಳ್ಳಲು ಯೋಗ್ಯನಾಗುತ್ತಾನೆ.

ಬಸವಣ್ಣ ಹಾಗೂ ವಚನಕಾರರಂತಹ ಕ್ರಾಂತಿ ದೃಷ್ಟಿಯುಳ್ಳವನಾಗಿದ್ದರೂ ಸರ್ವಜ್ಞ ಒಂದು ವೈಯಕ್ತಿಕ ಶಕ್ತಿಯಾಗಿ ಉಳಿದ. ಸಾಮೂಹಿಕವಾದ ಆಂದೋಲನವೊಂದರ ಕೇಂದ್ರ ವ್ಯಕ್ತಿಯಾಗುವ ಸಾಮರ್ಥ್ಯ ಅವನಲ್ಲಿದ್ದರೂ, ಕಾಲವು ಬಹುಶಃ ಅವನಿಗೆ ಅನುಕೂಲವಾಗಿರಲಿಲ್ಲ ಮತ್ತು ನಿಷ್ಠುರ ಸ್ವಭಾವದ ಅವನಿಗೆ ಸಮೂಹದ ನಾಯಕನಾಗಿ ಸಂಸ್ಥೆಯನ್ನು ಕಟ್ಟುವ ಕೌಶಲವೂ ಇರಲಿಲ್ಲ ಎಂಬುದು ಗಮನಿಸಬೇಕಾದ ವಿಷಯ. ತಮ್ಮ ಆದರ್ಶಗಳನ್ನು ಸಮಕಾಲೀನರಾಗಿ ಕಾರ್ಯಕಾರಿ ಗೊಳಿಸುವಲ್ಲಿ ಬಸವಣ್ಣ ಹಾಗೂ ಸರ್ವಜ್ಞರಂಥ ಶರಣರು ವಿಫಲರಾಗಿರಬಹುದು. ಆದರೆ ಅವರು ಪ್ರತಿಪಾದಿಸಿದ ಸಾರ್ವಕಾಲಿಕ ಮೌಲ್ಯಗಳಿಂದಾಗಿ ಅವರು ಇಂದಿಗೂ ನಮಗೆ ಪ್ರಸ್ತುತವಾಗುತ್ತಲೆ ಇದ್ದಾರೆ.

ಮನುಕುಲದ ಇತಿಹಾಸದ ಸಿಂಹಾವಲೋಕನ ಮಾಡಿದರೆ ಆದರ್ಶ ಚೇತನಗಳು ಬೇಕಾದಷ್ಟು ಸಿಗುತ್ತವೆ. ಅವರೊಂದಿಗೆ ಭ್ರಷ್ಟ, ದುಷ್ಟ ಶಕ್ತಿಗಳು ಸರಿಮಿಗಿಲಾಗಿ ನಿಂತು ಆರೋಗ್ಯಕರ ಬದುಕನ್ನು ಅಸ್ವಸ್ಥಗೊಳಿಸುತ್ತ ಬಂದಿರುವುದನ್ನು ಕಾಣಬಹುದು. ಬಸವಣ್ಣ ಮತ್ತು ಸರ್ವಜ್ಞರಂಥ ಶರಣರ ಕಾಲದಲ್ಲಿ ಇಂಥ ವ್ಯಕ್ತಿಗಳಿದ್ದುದರಿಂದಲೇ ಅವರ ಹೋರಾಟ ನಿರೀಕ್ಷಿತ ಯಶಸ್ಸುಗೊಳಿಸಲು ಸಾಧ್ಯವಾಗದೆ ಹೋಯಿತು. ಇಂದೂ ಅಂಥ ಶಕ್ತಿಗಳಿಗೆ ಕೊರತೆಯಿಲ್ಲ ಇಪ್ಪತ್ತೊಂದನೆಯ ಶತಮಾನದ ಸಮಕಾಲೀನ ಭಾರತೀಯ ಬದುಕನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಹೋದರೆ, ಸೃಜನಶೀಲ ವ್ಯಕ್ತಿಯೊಬ್ಬ ಮಾನಸಿಕ ಕ್ಷೋಭೆಗೊಳಗಾಗಿ ತಲ್ಲಣಗೊಳ್ಳುವಂತಾಗುತ್ತದೆ. ಅವರು ತಮ್ಮ ಹೊಟ್ಟೆ ಪಾಡಿಗಾಗಿ ಏನೆಲ್ಲಾ ನಾಟಕಗಳನ್ನಾಡುತ್ತಾ, ಮತ್ತೊಬ್ಬರ ಸ್ವಸ್ಥಮನಸ್ಸನ್ನು, ಜನಪರ ಕಾಳಜಿಯ ಚಿಂತನೆಗಳನ್ನು ಶಂಕಿಸುತ್ತಲೇ ಹೋಗುತ್ತಾರೆ. ನಾನ ರೀತಿಯ ಒಳದಾರಿಗಳನ್ನು ಹುಡುಕಿ ಇತರರನ್ನು ನಾಶ ಮಾಡಲು

ಹವಣಿಸುತ್ತಾರೆ. ಈ ವಿಚ್ಛಿದ್ರಕಾರಿ ಶಕ್ತಿಗಳು ಹಣ, ಹೆಂಡ, ಮಣ್ಣು, ಅಧಿಕಾರ, ಕೀರ್ತಿ, ಇತ್ಯಾದಿ ಆಸೆ ಆಮಿಷಗಳಿಗೆ ಬಲಿಯಾಗಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರವನ್ನು ನಾಶಮಾಡುತ್ತವೆ. ಇದು ಇನ್ನೂ ದೊಡ್ಡ ದುರಂತವನ್ನು ತಂದೊಡ್ಡುವ ಮುನ್ನವೇ ಎಚ್ಚೆತ್ತುಕೊಳ್ಳಬೇಕಾಗಿದೆ.

ಬಸವಣ್ಣ ಸರ್ವಜ್ಞರಂಥ ವಚನಕಾರರ ಕ್ರಾಂತಿ ಅಂದು ಭಿನ್ನವಾಗಿದ್ದರೂ ಸುದೈವದಿಂದ ಅವರ ಚಿಂತನೆಗೈದ ಅನುಭವಾಮೃತದ ವಚನ ಸಾಹಿತ್ಯ ನಮ್ಮ ಮುಂದಿದೆ. ನಾವು ಅವರ ಆದರ್ಶ ತತ್ವಗಳನ್ನು ಅರಗಿಸಿಕೊಂಡು ಅಲ್ಲಿಯ ಸಾರ್ವಕಾಲಿಕ ಮೌಲ್ಯಗಳನ್ನು ಸಮಕಾಲೀನ ಸಮಾಜದ ಬದುಕಿಗೆ ಅನ್ವಯಿಸಿಕೊಂಡರೆ ಮುಂದಿನ ನಮ್ಮ ಬದುಕು ಸಹ್ಯವಾಗುವುದರಲ್ಲಿ ಸಂಶಯವಿಲ್ಲ.

ಬಸವಣ್ಣ ಹಾಗೂ ಸರ್ವಜ್ಞರ ವಚನಗಳಲ್ಲಿ ಸಾಮಾಜಿಕ ಕಳಕಳಿಯನ್ನು ಗುರುತಿಸುವ ಸಣ್ಣ ಪ್ರಯತ್ನವಷ್ಟೆ ಈ ಪ್ರಬಂಧದಲ್ಲಿದೆ. ಆದರೆ ಬಸವಣ್ಣ ಹಾಗೂ ಸರ್ವಜ್ಞರಂಥ ಅನುಭವಿಗಳ ವಚನಗಳಲ್ಲಿ ಹಲವಾರು ವಿಷಯಗಳು ಅಡಕವಾಗಿವೆ. ಅಂತಹ ವಿಷಯಗಳಲ್ಲಿ ಒಂದಂಶವಾದ ಸಾಮಾಜಿಕ ಕಳಕಳಿಯನ್ನು ಮಾತ್ರ ಈ ಪ್ರಬಂಧದಲ್ಲಿ ನೋಡುವ ಪ್ರಯತ್ನ ಮಾಡಲಾಗಿದೆ. ವಿಶಾಲ ವ್ಯಾಪ್ತಿಯ ಅಂತಸತ್ವವನ್ನು ಪಡೆದಿರುವ ಬಸವಣ್ಣ ಹಾಗೂ ಸರ್ವಜ್ಞರ ವಚನಗಳನ್ನು ಶೋಧಿಸ ಹೊರಟರೆ ಅವುಗಳಿಗೆ ಕೊನೆ ಮೊದಲಿಲ್ಲದಂತಾಗುತ್ತದೆ. ಅಷ್ಟು ವಿಚಾರನೀಯ ಅಂಶಗಳು ಅವರ ವಚನಗಳಲ್ಲಿ ತುಂಬಿ ತುಳುಕಿವೆ. ಹಲವು ಮಹಾಪ್ರಬಂಧಗಳಿಗಾಗುವಷ್ಟು ವಿಷಯಗಳಿವೆ. ಪ್ರತಿಸಲದ ಓದಿಗೂ ವಿಶೇಷವೆನಿಸಬಹುದಾದಷ್ಟು ವಿಚಾರನೀಯ ಮುತ್ತುಗಳು ಇವರ ವಚನಗಳಲ್ಲಿವೆ.

ಸುಮಾರು ಎಂಟು ಶತಮಾನಗಳಷ್ಟು ಹಿಂದೆ ಸಾಮಾಜಿಕ ಸಂದರ್ಭದಲ್ಲಿ ಜ್ವಲಂತ ಪ್ರಜ್ಞೆಯಿಂದ ಸ್ಪಂದಿಸಿದ ವಚನಕಾರ ಬಸವಣ್ಣ ಹಾಗೂ ಐದು ಶತಮಾನಗಳಷ್ಟು ಹಿಂದಿನ ಸಾಮಾಜಿಕ ಸಂದರ್ಭದಲ್ಲಿ ಜ್ವಲಂತ ಪ್ರಜ್ಞೆಯಿಂದ ಸ್ಪಂದಿಸಿದ ಕವಿ ಸರ್ವಜ್ಞ, ಈ ಇಬ್ಬರೂ ತಮ್ಮ ಸಮಾಜ ವಿಮರ್ಶೆ, ಜೀವನ ಜಿಜ್ಞಾಸೆ ಹಾಗೂ ಕಾವ್ಯದ ಧಾಟಿ, ಧೋರಣೆಗಳಿಂದಾಗಿ ಇಂದಿಗೂ-ಅಂದರೆ ಸ್ವಾತಂತ್ರ್ಯೋತ್ತರ ಕಾಲದ ಈ ಆಧುನಿಕ ಸಂದರ್ಭದಲ್ಲೂ ಬಹುಮಟ್ಟಿಗೆ ಸಂಗತರಾಗಿದ್ದಾರೆ. ಇವರು ತಮ್ಮ ವಚನಗಳಲ್ಲಿ ಎರಕಹೊಯ್ದ ಅನುಭವ, ಬೆಳಗಿದ ಲೋಕ ಜೀವನದ ನೆಳಲು, ಬೆಳಕನ್ನು ಹಾಯಿಸಿದ ಒಗರು-ಹೊಗರು ಇವೆಲ್ಲ ಬಹುಶಃ ಸಮಸಾಮಯಿಕತೆಯನ್ನು ಮೀರಿ ಸಾರ್ವಕಾಲೀನ ಸತ್ವವನ್ನು ಮೈಗೂಡಿಸಿಕೊಂಡವುಗಳಾಗಿ ಈ ಕಾರಣಕ್ಕಾಗಿ ಇವು ಪ್ರಸಕ್ತ ಸಮಯದಲ್ಲಿ ಸಂಗತವಾಗಿವೆ ಎಂಬ ಪ್ರಸ್ತಾಪವನ್ನು ಅಲ್ಲಲ್ಲಿ ಈ ನಿಬಂಧದಲ್ಲಿ ಔಚಿತ್ಯಕ್ಕನುಗುಣವಾಗಿ ಮಾಡಲಾಗಿದೆ.

ಇಂಥ ಅನುಭಾವಿಗಳೀರ್ವರ ವಚನಗಳಲ್ಲಿ ಉಕ್ತವಾಗಿರುವ ಮಾನವ ಪ್ರೀತಿಯ ಸಾಮಾಜಿಕ ಕಳಕಳಿಯ ಸ್ಪರ್ಶವನ್ನಷ್ಟೇ ಇಲ್ಲಿ ನೀಡಿದ್ದೇನೆ. ಇಂತಹ ವಿಷಯಕ್ಕೆ ಕೊನೆಯಿಲ್ಲ. ಆರೋಗಿನಿದಷ್ಟು ಹಸಿವು ಆದಂತೆ, ಈ ವಿಷಯಕ್ಕೆ ತೊಡಗಿಕೊಂಡಷ್ಟು ವಿಚಾರಗಳು ಸೃಷ್ಟಿಯಾಗುತ್ತಲೇ ಇವೆ. ಆದರೆ ನಿಬಂಧದ ವ್ಯಾಪ್ತಿ ಔಚಿತ್ಯವನ್ನು ಮೀರಬಾರದೆಂಬ ಕಟ್ಟಿನ ಸಲುವಾಗಿ ಬಿಂದುವಿಟ್ಟು ವಿರಮಿಸುವ ಕಾರ್ಯ ಮಾಡಿದ್ದೇನೆ.

ಪರಾಮರ್ಶನ ಗ್ರಂಥಗಳು

೧. ಅಕಬರ ಅಲಿ. ಎಂ- ಸರ್ವಜ್ಞನ ಸಮಾಜ ದರ್ಶನ ಮತ್ತು ಸಾಹಿತ್ಯ ಸತ್ವ
ಕನ್ನಡ ಸಾಹಿತ್ಯ ಪರಿಷತ್ತು, ೧೯೮೩.

೨. ಕೃಷ್ಣಶಾಸ್ತ್ರಿ ಎ.ಆರ್- ಸರ್ವಜ್ಞ ಕವಿ
ಮೈಸೂರು ವಿಶ್ವವಿದ್ಯಾನಿಲಯ, ೧೯೪೮

೩. ಚನ್ನಪ್ಪ ಉತ್ತಂಗಿ(ಸಂ)- ಸರ್ವಜ್ಞನ ವಚನಗಳು
ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ ಪ್ರಕಟಣೆ, ೧೯೬೦

೪. ಚಿದಾನಂದಮೂರ್ತಿ ಎಂ- ಬಸವಣ್ಣನವರು
ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ-ಹೊಸದೆಹಲಿ, ೧೯೭೨

೫. ದೇಜಗೌ- ಶ್ರೀ ಬಸವೇಶ್ವರರು
ಕರ್ನಾಟಕ ಪುಸ್ತಕ ಪ್ರಾಧಿಕಾರ, ೨೦೦೦

೬. ನಾಗವಾರ ಕಾಳೇಗೌಡ- ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ
ಬೆಂಗಳೂರು ವಿಶ್ವವಿದ್ಯಾಲಯ, ೧೯೭೫

೭. ನಾಯಕ.ಹಾ.ಮಾ (ಸಂ)- ಬಸವ ಪರುಷ
ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ, ೧೯೭೫

೮. ಬಸವರಾಜು ಎಲ್. - ಬಸವಣ್ಣನವರ ಷಟ್ಸ್ಥಲದ ವಚನಗಳು (ಸಹಚಿಂತನ ಸಹಿತ)
ಶ್ರೀ ಶರಣ ಬಸವೇಶ್ವರ ಗ್ರಂಥ ವಿಶ್ವವಿದ್ಯಾನಿಲಯ, ಗುಲ್ಬರ್ಗಾ, ೧೯೯೦.

೯. ಬಸವರಾಜು ಎಲ್.(ಸಂ)- ಸರ್ವಜ್ಞನ ವಚನಗಳು
ಗೀತಾ ಬುಕ್ ಹೌಸ್, ಮೈಸೂರು, ೧೯೭೨, ೨೦೦೨.

೧೦. ಬಸವರಾಜು ಎಲ್.(ಸಂ)- ಬಸವವಚನಾಮೃತ (ವ್ಯಾಖ್ಯಾನ ಸಹಿತ)
ಬಸವ ಸಮಿತಿ, ಬೆಂಗಳೂರು, ೧೯೬೪, ೧೯೬೬.

೧೧. ಭೀಮಭಟ್ಟ ಶಂಕರಭಟ್ಟ ಪೂಜಾರಿ- ಸರ್ವಜ್ಞ ಮೂರ್ತಿಯ ವಚನಗಳು (ಸಟೀಕಾ)
ಪಿ.ಸಿ. ಶಾಬಾದಿ ಮಠ ಬುಕ್- ಡಿಪೋ, ಗದಗ

೧೨. ಮಲ್ಲಾರಾಧ್ಯ ಪ್ರಸನ್ನ ಎಸ್.(ಸಂ)- ಮರಳಿ ದುಡಿಮೆಗೆ
ಸ್ವಾಗತ ಸಮಿತಿ, ಜಿಲ್ಲಾ ಪ್ರಥಮ
ಶರಣ ಸಾಹಿತ್ಯ ಸಮ್ಮೇಳನ, ಮಂಡ್ಯ, ೨೦೦೬.

೧೩. ಮಾಳವಾಡ ಸ.ಸ. - ಶ್ರೀ ಬಸವಣ್ಣನವರ ವಚನ ಸಂಗ್ರಹ (ಚತುರ್ಥ ಆವೃತ್ತಿ)
ಪ್ರತಿಭಾ ಗ್ರಂಥಮಾಲೆ, ಧಾರವಾಡ,
೧೯೬೩, ೧೯೬೭, ೧೯೬೯.

೧೪. ಮಾಳವಾಡ ಎಸ್.ಎಸ್. - ಶ್ರೀ ಬಸವೇಶ್ವರರು
ಶ್ರೀ ಬಸವೇಶ್ವರ ಆನೇ ಶತಮಾನೋತ್ಸವ ಸಮಿತಿ,
ಬೆಂಗಳೂರು, ೧೯೬೭

೧೫. ಮುಗಳಿ ರಂ.ಶ್ರೀ.- ಸರ್ವಜ್ಞ ವಚನ ಸಂಗ್ರಹ
ಕನ್ನಡ ಸಾಹಿತ್ಯ ಪರಿಷತ್ತು, ೧೯೭೨.

೧೬. ಮೃತ್ಯುಂಜಯ ರುಮಾಲೆ(ಸಂ)- ಬಸವ ಸಾಹಿತ್ಯ
ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೪

೧೭. ರಾಗೌ (ಸಂ)- ಸರ್ವಜ್ಞನ ವಚನಗಳು
ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೩.

೧೮. ಶಿವರುದ್ರಪ್ಪ ಜಿ.ಎಸ್. - ಕನ್ನಡ ಸಾಹಿತ್ಯ ಸಮೀಕ್ಷೆ
ಬೆಂಗಳೂರು ವಿಶ್ವವಿದ್ಯಾಲಯ, ೧೯೭೫.

೧೯. ಶಿವರುದ್ರಪ್ಪ ಜಿ.ಎಸ್. (ಸಂ) - ಸರ್ವಜ್ಞ- ಒಂದು ಸಮೀಕ್ಷೆ
ಬೆಂಗಳೂರು ವಿಶ್ವವಿದ್ಯಾಲಯ, ೧೯೭೫.

೨೦. ಸಂಗಣ್ಣ ಕುಪ್ಪಸ್ತ - ಬಸವಣ್ಣನವರು ಕಟ್ಟ ಬಯಸಿದ ಸಮಾಜ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೨.

೨೧. ಹಿರೇಮಠ ಆರ್.ಸಿ.- ಭಕ್ತಿಭಂಡಾರಿ ಬಸವಣ್ಣನವರ ವಚನಗಳು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೮.